ಓಂ

ಸಾ ವಿದ್ಯಾ ಯಾ ವಿಮುಕ್ತಯೆ !

ೀರಾಮದಾಸರ ಸಂದೇಶ

卐

ಸಾರಿದವರು :

ಶ್ರೀ ಗುರು ದೇವ

ಡಾ. ರಾ. ದ. ರಾನಡೆ, ಎಂ. ಎ., ಡಿ. ಲಿಟ್.

ನಿಂಬಾಳ ಆಶ್ರಮ

ಅನುವಾದಕರು :

ಶ್ರೀ. ಮ. ಶ್ರೀ. ದೇಶಪಾಂಡೆ, ಎಂ. ಎ.

ಅಥಣಿ

卐

೧೯೫೯

|೮ ಆ.

ಶಾಂತಿಕುಂಜ, ವಿಕ್ರಮಪುರ
ಅಥಣಿ
ದಿ. ೨೦-೧-೧೯೫೫

ಶ್ರಮ್ಮ,
ಮ. ಶ್ರೀ. ದೇಶಪಾಂಡೆ

ಶ್ರೀ ರಾಮದಾಸರ ಸಂದೇಶ

★

೧. ಚರಿತ್ರ ಜೀವನ

೧ ಮೊದಲ ಮಾತು :— ಶ್ರೀ ಸಮರ್ಥ ರಾಮದಾಸ ಸ್ವಾಮಿಗಳ ಚರಿತ್ರದ ವಿಷಯವಾಗಿ ಪ್ರತೀತಿಪರ ಪ್ರಮಾಣಗಳನ್ನು 'ವಾಕನೀಶಿ-ಪ್ರಕರಣ' ಎಂಬ ಹೊತ್ತಿಗೆಯಲ್ಲಿ ಕಾಣಬಹುದು. ಶ್ರೀ ಸಮರ್ಥರು ಶಕೆ ೧೬೦೩ ಮಾಘ ವ. ೯ನೆಯ ದಿನ ಸಮಾಧಿಸ್ಥರಾದರು. ನಾಲ್ಕು ದಿನಗಳ ತರುವಾಯ ಅಂದರೆ ಮಾಘ ವ. ೧೩ನೆಯ ದಿವಸ, ಅವರ ಪಟ್ಟಶಿಷ್ಯರಾದ ದಿವಾಕರ ಗೋಸಾವಿಯವರ ಹೇಳಿಕೆಯ ಮೇರೆಗೆ ರಾ. ಅಂತಾಜಿ ಗೋಪಾಳ ವಾಕನೀಸರೆಂಬವರು ರಾಮದಾಸರ ಚರಿತ್ರೆಯ ಟಿಪ್ಪಣಿಗಳನ್ನು ಬರೆದಿಟ್ಟಿರುವರು. ಶ್ರೀ ಸಮರ್ಥರ ನಿಧನದ ನಂತರ ನಾಲ್ಕು ದಿನಗಳಲ್ಲಿಯೆ ಬರೆಯಲಾದ ಶ್ರೀ 'ವಾಕನೀಶಿ-ಪ್ರಕರಣ'ದ ಮಹತ್ವವು ಬಹಳವಿದೆ. ಇದರಲ್ಲಿಯ ಅದ್ಭುತ ಪವಾಡಗಳನ್ನು ಉಪೇಕ್ಷಿಸಿದರೂ, ಇದರ ಮಹ... ...ಸ್ತದೆ ಎಂಬುದು ಯಾರ... ...ಈ ಸತ್ಯವನ್ನೇ ಇದರ...

೨. ... ಸಮರ್ಥ ರಾಮದಾಸ ... ಚೈತ್ರ ಶುದ್ಧ ೯ನೆಯ ದಿನ

ಮಧ್ಯಾಹ್ನಕ್ಕೆ ಜನ್ಮ ತಾಳಿದರು. ಅವರ ತಂದೆಯಾದ
ಸೂರ್ಯಾಜಿಪಂತರು ಔರಂಗಾಬಾದ ಜಿಲ್ಹೆಯಲ್ಲಿಯ ಜಾಂಬ
ಎಂಬ ಹಳ್ಳಿಯ ಕರ್ಣಿಕರು. ರಾಮದಾಸರ ಬಾಲ್ಯದಲ್ಲಿಯೇ—
ಶಕೆ ೧೫೩೭ರಲ್ಲಿಯೇ—ಸೂರ್ಯಾಜಿಪಂತರು ಮರಣಹೊಂದಿದ್ದ
ರಿಂದ ರಾಮದಾಸರು ತಾಯಿ ರಾಣೂಬಾಯಿಯವರ ಒಲವಿನ
ಸಹವಾಸದಲ್ಲಿ ಬೆಳೆದರು. ಹನ್ನೆರಡು ವರುಷದವರಿರುವಾಗ
ರಾಮದಾಸರು ಶ್ರೀ ನಾಸಿಕ ಕ್ಷೇತ್ರದ ಹತ್ತಿರಿರುವ ಟಾಕಳಿ
ಎಂಬ ಊರಿಗೆ ಓಡಿಹೋದರು. ಇದರ ಕಾರಣಗಳ ವಿಷಯ
ವಾಗಿ ಎರಡು ಕತೆಗಳು ದೊರಕುವವು. ತಾಯಿಯ ಆತ್ಯಾ
ಗ್ರಹದ ಮೂಲಕ ಸೋದರಸೊಸೆಯ ಕೂಡ ಮದುವೆಯಾಗಲು
ಒಪ್ಪಿಕೊಂಡು, 'ಸುಮುಹೂರ್ತೇ ಸಾವಧಾನ' ಎಂದ ಕೂಡಲೇ
ಮದುವೆಯ ಮಂಟಪದೊಳಗಿಂದ ಓಡಿಹೋದರು, ಎಂಬುದು
ಒಂದು. ಗುರುಮಂತ್ರವನ್ನು ಕೊಡಲು ತಮ್ಮ ಅಣ್ಣಂದಿರಾದ
ಗಂಗಾಧರಪಂತರನ್ನು ಕೇಳಿಕೊಂಡಾಗ ಅವರದಕ್ಕೆ ಒಪ್ಪದ್ದ
ರಿಂದ, ಪರಮಾತ್ಮನನ್ನರಸಲು ಅವರು ಟಾಕಳಿಗೆ ಹೋದ
ರೆಂಬುದು ಇನ್ನೊಂದು; ಇವೆರಡರಲ್ಲಿ ಮೊದಲನೆಯದು ಹೆಚ್ಚು
ಬಳಕೆಯಲ್ಲಿದೆ.

ಪವಿತ್ರ ಗೋದಾ ತೀರದಲ್ಲಿ ದಿನಾಲು ಮಧ್ಯಾಹ್ನದ ವರೆಗೆ
ರಾಮದಾಸರು ಶ್ರೀ ಗಾಯತ್ರಿ ಪುರಶ್ಚರಣವನ್ನೂ, ತರು
ವಾಯ ರಾಮಜಪ ಯಜ್ಞವನ್ನೂ ಮಾಡುತ್ತಿದ್ದರು. ನಡು
ನೀರಿನಲ್ಲಿ ನಿಂತು ನಡೆಸಿದ ಈ ಕಡುತರವಾದ ತಪಸ್ಸು ಹನ್ನೆ
ರಡು ವರುಷ ಎಡಬಿಡದೆ ನಡೆಯಿತು. ಕೊನೆಗೆ ರಾಮದಾಸ
ರಿಗೆ ಪ್ರಭುರಾಮಚಂದ್ರರ ಸಾಕ್ಷಾತ್ಕಾರವಾಯಿತು. (ಶಕೆ
೧೫೪೨-೫೪). ಪುರಶ್ಚರಣವು ಮುಗಿದ ಕೂಡಲೇ ಶ್ರೀ ಸಮ

ರ್ಥರು ತೀರ್ಥಯಾತ್ರೆಗೆ ಹೊರಟರು. ಅವರು ಸಂದರ್ಶಿಸಿದ ಕ್ಷೇತ್ರವು ಭರತಖಂಡದಲ್ಲಿ ಒಂದೂ ಉಳಿಯಲಿಲ್ಲ. ಅಲ್ಲಲ್ಲಿಯ ಜನರ ಸ್ಥಿತಿಗತಿಯನ್ನು ಕಾಣುತ್ತ, ಸ್ವಭಾವ ವೈಚಿತ್ರ್ಯವನ್ನು ಪರೀಕ್ಷಿಸುತ್ತ ರಾಮದಾಸರು ೧೨ ವರುಷ ಎಲ್ಲೆಲ್ಲಿಯೂ ಅಲೆದರು. ಈ ದೀರ್ಘಪ್ರವಾಸದಲ್ಲಿ ದೊರಕಿಸಿದ ಅನುಭವ ಜ್ಞಾನವೇ ಅವರು ಮುಂದೆ ಮಾಡಿದ ಮಹಾತ್ಕಾರ್ಯದ ಅಡಿಗಲ್ಲೆನ್ನಬಹುದು.

ಈ ಮೇರೆಗೆ ತೀರ್ಥಯಾತ್ರೆಯನ್ನು ಮುಗಿಸಿ (೧೫೫೪-೬೬) ಶಕೆ ೧೫೬೬ರಲ್ಲಿ ಸಮರ್ಥರು ಕೃಷ್ಣಾತೀರಕ್ಕೆ ಬಂದು ನೆಲಸಿದರು. ತನ್ನ ಸಂಪ್ರದಾಯವನ್ನು ಬೆಳೆಸಲು ಇದೇ ಯೋಗ್ಯವಾದ ಸ್ಥಳವೆಂದು ಅವರ ಮನವರಿಕೆಯಾಯಿತು. ಇಲ್ಲಿ ನಾಲ್ಕು ವರುಷ ನಿಂತ ಬಳಿಕ ಅಂಗಾಪುರವೆಂಬಲ್ಲಿ ಒಂದು ಮಡುವಿನಲ್ಲಿ ಶ್ರೀ ರಾಮಚಂದ್ರರ ವಿಗ್ರಹವು ರಾಮದಾಸರಿಗೆ ದೊರಕಿತು. ಚಾಫಳದಲ್ಲಿ ಸ್ಥಾಪಿಸಲಾದ ಆ ವಿಗ್ರಹವನ್ನು ಇನ್ನೂ ಅಲ್ಲಿ ಕಾಣಬಹುದು. ಶ್ರೀ ಸಮರ್ಥರು ತಮ್ಮ ಸಂಪ್ರದಾಯವನ್ನು ಎಲ್ಲೆಡೆಯಲ್ಲಿ ಹಬ್ಬಿಸುತ್ತಿರಲು ಶಕೆ ೧೫೭೧ ರಲ್ಲಿ ಶ್ರೀ ಶಿವರಾಯರನ್ನು ಕಂಡು ಅವರನ್ನು ಅನುಗ್ರಹಿಸಿದರು. ಅದೇ ವರುಷ ರಾಮದಾಸರು ಶ್ರೀ ವಿಠ್ಠಲನ ದರ್ಶನಕ್ಕಾಗಿ ಪಂಢರಪುರಕ್ಕೆ ಹೋದರು. ಶ್ರೀ ರಾಮ-ವಿಠ್ಠಲರ ವಿಷಯವಾಗಿ ಅವರು ಬರೆದ ಪದ್ಯವು ಇದೇ ಸುಸಮಯದ್ದಿರಬಹುದು. ಶ್ರೀ ಸಮರ್ಥರು ತುಕಾರಾಮರನ್ನು ಇದೇ ಕಾಲಕ್ಕೆ ಕಂಡಿರಬಹುದು. ಶ್ರೀ ತುಕಾರಾಮರು ಸಮಾಧಿಸ್ಥರಾದುದು ಶಕೆ ೧೫೭೨ ರಲ್ಲಿ. ಆದುದರಿಂದ ಅವರೀರ್ವರ ಸಂದರ್ಶನವಾಗಿರುವುದು ಅಸಾಧ್ಯವಲ್ಲ.

ಶಕೆ ೧೫೭೭ ರಲ್ಲಿ ಶ್ರೀ ಸಮರ್ಥರ ತಾಯಿಯವರ ಮರಣ ಹೊಂದಿದರು. ಮರಣ ಸಮಯಕ್ಕೆ ಸಮರ್ಥರು ಅಕಸ್ಮಾತ್ತಾಗಿ ಬಂದು ತಾಯಿಯ ಕೊನೆಯ ದರುಶನವನ್ನು ಪಡೆದರು. ಅದೇ ವರುಷ ಶ್ರೀ ಶಿವರಾಯರು ತಮ್ಮ ರಾಜ್ಯವನ್ನು ಸಮರ್ಥರ ಜೋಳಿಗೆಯಲ್ಲಿ ಹಾಕಿದರು. ಶ್ರೀ ಶಿವರಾಯರ ರಾಜ್ಯಾಭಿಷೇಕವು ಶಕೆ ೧೫೮೬ ರಲ್ಲಿ ಆಯಿತು. ತರುವಾಯ ಅವರು ಶ್ರೀ ಸಮರ್ಥರ ಸನ್ನಿಧಿಯಲ್ಲಿ ಒಂದೂವರೆ ತಿಂಗಳು ಸಜ್ಜನಗಡದಲ್ಲಿ ಬಂದು ನಿಂತರು. ಆಗ ಪರೋಪಕಾರದಲ್ಲಿಯೂ ಅನ್ನಸಂತರ್ಪಣೆಗದಲ್ಲಿಯೂ ಬಹಳ ಹಣವನ್ನು ವೆಚ್ಚಮಾಡಿದರು. ಈ ವರುಷ ಚಳಿಗಾಲದಲ್ಲಿ ಸಮರ್ಥರು ಕೊಂಕಣದಲ್ಲಿ ಹೇಳವಾಕ ಎಂಬಲ್ಲಿ ಒಂದು ಕೊಳ್ಳದಲ್ಲಿ ವಾಸವಾಗಿದ್ದರು. ಅಲ್ಲಿ ಅವರು ಕಫದಿಂದಲೂ ಜ್ವರದಿಂದಲೂ ಪೀಡಿತರಾದಾಗ ಅವರನ್ನು ರಘುನಾಥಭಟ್ಟರು ಚನ್ನಾಗಿ ಉಪಚರಿಸಿದರು. ಶ್ರೀ ಸಮರ್ಥರು ಚಾಫಳಕ್ಕೆ ಮರಳಿ ಬಂದ ಮೇಲೆ, ರಘುನಾಥಭಟ್ಟರಿಗೆ ಸ್ವತಃ ಬರೆದ ಓಲೆಯು ಇನ್ನೂ ಉಪಲಬ್ಧವಿದೆ.

ಶ್ರೀ ಸಮರ್ಥರ ಅಣ್ಣಂದಿರಾದ ರಾಮೀ ರಾಮದಾಸರು ಶಕೆ ೧೫೯೯ ರಲ್ಲಿ ದೇಹವನ್ನಿಟ್ಟರು ಮರುವರುಷವೇ ಶ್ರೀ ಶಿವರಾಯರು ರಾಮದಾಸರಿಗೆ ಒಂದು ಸನದನ್ನು ಮಾಡಿಕೊಟ್ಟರು. ಅದು ಈಗಲೂ ಅವರ ಮನೆತನದಲ್ಲಿ ನಡೆಯುತ್ತ ಬಂದಿದೆ. ಅದೇ ವರುಷ ಅಂದರೆ ಶಕೆ ೧೬೦೦ರಲ್ಲಿ ಶ್ರೀ ರಾಮ-ಲಕ್ಷ್ಮಣ ಸೀತೆಯರ ಮೂರ್ತಿಗಳನ್ನು ತಯಾರಿಸಲು ತಂಜಾವರಕ್ಕೆ ಹೇಳಿಕಳುಹಿದರು. ಶಕೆ ೧೬೦೧ರಲ್ಲಿ ಶ್ರೀ ಶಿವರಾಯರು ಸಮರ್ಥರನ್ನು ಕಾಣಲು ಬಂದಾಗ ಇದು ತಮ್ಮೀರ್ವರ ಕೊನೆಯ ಬೆಟ್ಟಿ

ಯೆಂಬುದನ್ನು ರಾಮದಾಸರು ಶಿವರಾಯರಿಗೆ ಸೂಚಿಸಿದರು. ಶ್ರೀ ಶಿವರಾಯರು ಮುಂದೆ ಬಹಳ ದಿವಸ ಬದುಕಲಿಲ್ಲ. ಮರು ವರುಷ ಚೈತ್ರಮಾಸದಲ್ಲಿಯೇ ಅವರು ಕಾಲವಾದರು.

ಶ್ರೀ ಶಿವರಾಯರ ಮರಣದ ತರುವಾಯ ಸಂಭಾಜಿಯು ತನ್ನ ಅಮಾತ್ಯನಾದ ರಾಮಚಂದ್ರ ಪಂತರಿಂದೊಡಗೂಡಿ ರಾಮ ದಾಸರನ್ನು ಕಾಣಲು ಸಜ್ಜನಗಡಕ್ಕೆ ಬಂದು ಎಂಟು ದಿನ ನಿಂತನು. ಶಕೆ ೧೬೦೩ ಮಾಘ ಶುದ್ಧ ೧ನೆಯ ದಿನ ತಂಜಾ ವರದಿಂದ ಮೂರ್ತಿಗಳು ಬಂದುವು. ವದ್ಯ ೫ನೆಯ ದಿನ ಶ್ರೀ ಸಮರ್ಥರು ಅವರ ಸ್ಥಾಪನೆಯನ್ನು ಯಥಾಸಾಂಗವಾಗಿ ಮಾಡಿದರು. ಶ್ರೀ ರಾಮದಾಸರ ಸಮಾಧಿಯ ಮೇಲೆ ಇರುವ ಮೂರ್ತಿಗಳು ಇವೇ!

ಶಕೆ ೧೬೦೩ರ ಮಾಘ ವ॥ ೯ನೆಯ ದಿನ ಸಮರ್ಥರು ಸಮಾಧಿಸ್ಥರಾದರು.

೩. ಸಮಕಾಲೀನರು :— ಶ್ರೀ ರಾಮದಾಸರ ಸಮ ಕಾಲೀನರಲ್ಲಿ ಅವರ ಅಣ್ಣಂದಿರಾದ ರಾಮೀ ರಾಮದಾಸರು ಪ್ರಮುಖರು. ಅವರು ರಾಮದಾಸರ ಪೂರ್ವದಲ್ಲಿ ಮೂರು ವರ್ಷ ಜನ್ಮತಾಳಿ ಪೂರ್ವದಲ್ಲಿ ಮೂರು ವರ್ಷ, ಸಮಾಧಿಸ್ಥ ರಾದರು. ಅವರು ಪ್ರತ್ಯಕ್ಷ 'ರಾಮದಾಸ' ಸಂಪ್ರದಾಯ ದವರಿರಲಿಲ್ಲವಾದರೂ ಅವರ ಮೇಲೆ ರಾಮದಾಸರ ಪ್ರಭಾವವು ಸಾಕಷ್ಟು ಬಿದ್ದಿತ್ತು. ಅವರ ಗ್ರಂಥಗಳಲ್ಲಿ 'ಭಕ್ತಿರಹಸ್ಯ'ವೂ 'ಸುಗಮೋಪಾಯ'ವೂ ಪ್ರಸಿದ್ಧವಾದವುಗಳು. ರಾಮ ದಾಸರ ಶಿಷ್ಯರಲ್ಲಿ ಬಲು ಹೆಸರುಗೊಂಡವರು 'ಕಲ್ಯಾಣ' ಸ್ವಾಮಿಗಳು. ರಾಮದಾಸರು ದೇಹವನ್ನಿಡುವ ಪೂರ್ವದಲ್ಲಿ ಮೂರು ವರುಷ ಇವರು ರಾಮದಾಸರ ಅಪ್ಪಣೆಯ ಮೇರೆಗೆ

ಡೋಮಗಾಂವ ಎಂಬಲ್ಲಿ ಹೋಗಿ ಇರಹತ್ತಿದರು. ರಾಮದಾಸರ ಬೇರೆ ಕೆಲ ಶಿಷ್ಯರಂತೆ ಇವರು ಚಾಫಳ ಮತ್ತು ಸಜ್ಜನಗಡದ ಮಠಗಳ ವ್ಯವಸ್ಥೆಯ ವಿಷಯವಾಗಿ ನಡೆದ ವ್ಯಾಜ್ಯದಲ್ಲಿ ಭಾಗವನ್ನು ವಹಿಸಲಿಲ್ಲ. ಶಕೆ ೧೬೦೩ ರಲ್ಲಿ ರಾಮದಾಸರ ದೇಹಕ್ಕೆ ಸಜ್ಜನಗಡದ ಮೇಲೆ ಅಗ್ನಿ ಸಂಸ್ಕಾರವಾಯಿತು. ತರುವಾಯ ಅವರ ಅಸ್ತಿಗಳನ್ನು ಚಾಫಳದಲ್ಲಿಯ ವೃಂದಾವನದಲ್ಲಿ ಇಡಲಾಯಿತು. ಅವನ್ನು ಗಂಗಾನದಿಯಲ್ಲಿ ಒಗೆಯುವ ಕುರಿತು ಎಷ್ಟೋ ವರ್ಷಗಳ ವರೆಗೆ ವಿಚಾರ ನಡೆಯಿತು. ಕೊನೆಗೊಮ್ಮೆ ಅವನ್ನು ಗಂಗೆಯಲ್ಲಿ ಒಗೆಯಲು ವೃಂದಾವನದಿಂದ ಹೊರಗೆ ತೆಗೆಯಲಾಯಿತು. ಕರ್ಮಧರ್ಮಸಂಯೋಗದಿಂದ ಅದೇ ದಿನ ಡೋಮಗಾಂವದಲ್ಲಿ 'ಕಲ್ಯಾಣ' ಸ್ವಾಮಿಗಳು ದೇಹವನ್ನಿಟ್ಟರು. ಆದುದರಿಂದ ಗುರು-ಶಿಷ್ಯರೀರ್ವರ ಅಸ್ತಿಗಳು ಕೂಡಿಯೆ ಕಾಶಿಗೆ ಒಯ್ಯಲ್ಪಟ್ಟವು. ಇದಾದುದು ಶಕೆ ೧೬೩೬ ರಲ್ಲಿ.

ರಾಮದಾಸರಿಗೆ ದಿವಾಕರ ಗೋಸಾವಿ ಮತ್ತು ಉದ್ಧವ ಗೋಸಾವಿ ಎಂಬ ಇನ್ನಿಬ್ಬರು ಪ್ರಮುಖ ಶಿಷ್ಯರಿದ್ದರು. ರಾಮದಾಸರ ನಿಧನದ ತರುವಾಯ ಇವರೀರ್ವರಲ್ಲಿ ಮಠದ ವ್ಯವಸ್ಥೆಯ ವಿಷಯವಾಗಿ ಅನೇಕ ವರ್ಷಗಳ ವರೆಗೆ ವ್ಯಾಜ್ಯವು ನಡೆದಿತ್ತು. ರಾಮದಾಸರು ಜೀವಿಸಿರುವಾಗಲೇ ದಿವಾಕರ ಗೋಸಾವಿಯವರಿಗೆ ಮಠದ ವ್ಯವಸ್ಥೆಯನ್ನು ಮಾಡಲು ಹೇಳಿದ್ದರು. ಆದರೆ ದೇಹಾವಸಾನಕಾಲಕ್ಕೆ ಅವರು ಆ ಕೆಲಸವನ್ನು ಮಾಡಲು ಉದ್ಧವ ಗೋಸಾವಿಯವರಿಗೆ ಕೇಳಿಕೊಂಡರು. ಆದುದರಿಂದ ಅವರೀರ್ವರಲ್ಲಿಯ ವ್ಯಾಜ್ಯವು ಬೆಳೆದು ಕೊನೆಗದು ಸಂಭಾಜಿಯವರೆಡೆಗೆ ಹೋಗದಿರಲಿಲ್ಲ.

ಸಂಭಾಜಿ ಮಹಾರಾಜರು ದಿವಾಕರ ಗೋಸಾವಿಯವರ ಪಕ್ಷ ವನ್ನು ಸಮರ್ಥಿಸಿ ತಮ್ಮ ತೀರ್ಮಾನವನ್ನು ಕೊಟ್ಟರು. ಈ ನಿರ್ಣಯದಿಂದ ಖತಿಗೊಂಡು ಉದ್ಧವ ಗೋಸಾವಿಯವರು ಶಕೆ ೧೬೦೭ ರಲ್ಲಿ ಟಾಕಳಿಗೆ ಹೋದವರು ಮರಳಿ ಈ ಪ್ರಾಂತ ವನ್ನು ಕಾಣಲಿಲ್ಲ. ದೇಹವನ್ನಿಡುವವರೆಗೆ ಅವರು ಬರೀ ಹಾಲನ್ನು ಸೇವಿಸುತ್ತಿದ್ದರು.

ಶ್ರೀ ರಾಮದಾಸರ ಸ್ತ್ರೀಶಿಷ್ಯರಲ್ಲಿ 'ವೇಣುಬಾಯಿ' ಮತ್ತು 'ಅಕ್ಕಾ' ಇವರು ಪ್ರಮುಖರು. 'ವೇಣುಬಾಯಿ' ಯವರು 'ಸೀತಾ ಸ್ವಯಂವರ'ವನ್ನು ಬರೆದರು. ಇವರ ಮಠವು ಇನ್ನೂ ಮಿರಜಿಯಲ್ಲುಂಟು. ವೇಣುಬಾಯಿಯವರು ರಾಮದಾಸರೆದುರು ಸಜ್ಜನಗಡದಲ್ಲಿ ಸಮಾಧಿಸ್ಥರಾದರು. ಅವರ ಸಮಾಧಿಯನ್ನು ಇನ್ನೂ ಸಜ್ಜನಗಡದಲ್ಲಿ ಕಾಣ ಬಹುದು. 'ಅಕ್ಕಾ' ಇವರು ರಾಮದಾಸರ ತರುವಾಯ ೪೦ ವರುಷಗಳ ವರೆಗೆ ಬದುಕಿದ್ದರು. ಸಜ್ಜನಗಡದಲ್ಲಿ ಶ್ರೀ ರಾಮಚಂದ್ರನ ವಿಗ್ರಹದ ಮೇಲೆ ಕಟ್ಟಲಾದ ಮಂದಿರವು ಇವರ ಸಾಹಸದ ಫಲವು. ಇವರ ಸಮಾಧಿಯೂ ಸಜ್ಜನಗಡ ದಲ್ಲುಂಟು.

ಗಿರಿಧರ ಎಂಬವರು ವೇಣುಬಾಯಿಯವರ ಶಿಷ್ಯರು. ಇವರು ಶ್ರೀ ಸಮರ್ಥರನ್ನು ಕಂಡಿದ್ದರು. ರಾಮದಾಸರು ಸಮಾಧಿಯನ್ನು ಹೊಂದಿದಾಗ ಇವರ ವಯಸ್ಸು ೨೫ ಇದ್ದು ದರಿಂದ ಇವರು ರಾಮದಾಸರ ಚರಿತ್ರೆಯನ್ನು ಪೂರ್ತಿಯಾಗಿ ಅರಿತವರು. ಇವರೊಮ್ಮೆ ರಾಮದಾಸರೆದುರು ಹರಿಕೀರ್ತನೆ ಯನ್ನು ಮಾಡಿದ್ದರಂತೆ. ಇವರು 'ಸಮರ್ಥ ಪ್ರತಾಪ' ವೆಂಬ ಗ್ರಂಥವನ್ನು ಬರೆದರು. ಇದು ಸಮರ್ಥರ ಚರಿತ್ರ

ಗ್ರಂಥವು. ಶ್ರೀ ಸಮರ್ಥರನ್ನು ಪ್ರತ್ಯಕ್ಷ ಕಂಡ ವ್ಯಕ್ತಿಯಿಂದ ಬರೆಯಲಾದ್ದರಿಂದ ಈ ಚರಿತ್ರೆಗೆ ಒಂದು ವಿಶೇಷ ಮಹತ್ವವಿದೆ. ಇದು ಸಮರ್ಥರು ಕಾಲವಾದ ಮೇಲೆ ೩೦ ವರುಷದ ತರುವಾಯ ಬರೆಯಲ್ಪಟ್ಟಿದೆ. ಅಫಝುಲಖಾನನ ಕೊಲೆ, ಚಾಫಳ ಮಠದ ಜೀರ್ಣೋದ್ಧಾರ, ಪ್ರತಾಪಗಡದಲ್ಲಿ ಸಮರ್ಥರಿಂದ ಶ್ರೀ ತುಳಜಾದೇವಿಯ ಸ್ಥಾಪನೆ, ಇತ್ಯಾದಿ ಐತಿಹಾಸಿಕ ಸಂಗತಿಗಳು ಉಲ್ಲೇಖಿಸಲಾಗಿದೆ.

೪. **ಗ್ರಂಥಗಳು :—** ಶ್ರೀ ರಾಮದಾಸರ ಗ್ರಂಥಗಳಲ್ಲಿ 'ದಾಸಬೋಧ'ವು ಪ್ರಮುಖವಾದುದು. ಇದು ಭಕ್ತಿ ಗ್ರಂಥವು. ರಾಮದಾಸರ ಜೀವಮಾನದಲ್ಲಿಯೆ ಈ ಗ್ರಂಥದ ಮೂರು ಆವೃತ್ತಿಗಳು ಪ್ರಕಟವಾಗಿರುವಂತೆ ತೋರುವದು. ಈ ಗ್ರಂಥದ ಮೂಲ ಕಲ್ಪನೆಯು 'ಹಳೆದಾಸಬೋಧ'ವೆಂಬ ಹೆಸರಿನಿಂದ ಪ್ರಸಿದ್ಧವಾದ ಗ್ರಂಥದಲ್ಲಿ ಕಾಣಬಹುದು. ಈ 'ಹಳೆಯ ದಾಸಬೋಧ'ದಲ್ಲಿಯೂ ಮತ್ತು ಇಂದಿನ 'ದಾಸಬೋಧ'ದಲ್ಲಿಯೂ ಎಷ್ಟೋ ಅಧ್ಯಾಯಗಳು ಸಮಾನವಾದವುಗಳಿವೆ. ಜಿಜ್ಞಾಸುಗಳು ಅವನ್ನು ಅವಶ್ಯವಾಗಿ ಅಭ್ಯಸಿಸಬೇಕು. ತರುವಾಯ ದಾಸಬೋಧವನ್ನು ಎಪ್ಪತ್ತು ಅಧ್ಯಾಯಗಳಷ್ಟು (ಸಮಾಸಗಳು) ಬೆಳೆಯಿಸಲು ರಾಮದಾಸರು ಬಯಸಿರಬಹುದು. ಅದಕ್ಕನುಗುಣವಾಗಿ ಇಂದಿನ 'ದಾಸಬೋಧ'ದಲ್ಲಿಯ ೭೦ ಸಮಾಸಗಳನ್ನೊಳಗೊಂಡ ೭ ದಶಕಗಳು ರಚಿಸಲ್ಪಟ್ಟಿರಬಹುದು.

"ಮುಗಿದವು ಮಾತು! ಮುಗಿಯಿತು ಗ್ರಂಥ"ವೆಂದು ರಾಮದಾಸರು ೭ನೆಯ ದಶಕದ ಕೊನೆಯಲ್ಲಿ ಉಸುರಿರುವರು. ಇದು ದಾಸಬೋಧವು ಇಲ್ಲಿಯೆ ಮುಗಿದಿರಬಹು

ದೆಂಬುದನ್ನು ಸೂಚಿಸುವುದು. ಮುಂದೆ ಆಯಾ ಸಂದರ್ಭ ಗಳಲ್ಲಿ ಬರೆಯಲಾದ ಸಮಾಸಗಳು ಸೇರಿ ದಾಸಬೋಧಕ್ಕೆ ಇಂದಿನ ವಿಶಾಲತೆಯು ಬಂದಿರುವುದು.

ಇವನ್ನುಳಿದು ಶ್ರೀ ಸಮರ್ಥರು 'ಮನೋಬೋಧ', 'ಪಂಚ ಸಮಾಸಿ', 'ಕರುಣಾಷ್ಟಕ' ಇತ್ಯಾದಿ ಕೆಲವು ಚಿಕ್ಕ ಪ್ರಕರಣಗಳನ್ನು ಬರೆದಿರುವರು. ಇವೆಲ್ಲವುಗಳ ಸಾರವನ್ನು ಮುಂದಿನ ವಿವರಣೆಯಲ್ಲಿ ಸವಿಯಬಹುದು.

೨. ಶ್ರೀ ದಾಸಬೋಧ

(ಅ) ಪ್ರಾಸಾಂಗಿಕ

೧. **ಪ್ರಾಸ್ತಾವಿಕ:—** ಶ್ರೀ ದಾಸಬೋಧವು ರಾಮದಾಸ ಸ್ವಾಮಿಗಳ ಪ್ರಬೋಧಕ ವಿಚಾರ-ಕರ್ಮಗಳ ಒಂದು ದೊಡ್ಡ ಇತಿಹಾಸವೆಂದೇ ಹೇಳಬೇಕು. ಅದೊಂದವರ ಆತ್ಮಚರಿತ್ರವು. ಸತ್ಪುರುಷರ ಜೀವನದಲ್ಲಿ ಪ್ರಾಧಾನ್ಯವಿರುವದು ಪವಾಡಗಳಿಗಲ್ಲ, ಸ್ಫೂರ್ತಿಯುತ ವಿಚಾರಗಳಿಗೆ. ಈ ದೃಷ್ಟಿಯಿಂದ ರಾಮದಾಸರ ಆಧ್ಯಾತ್ಮಿಕ ಆತ್ಮಚರಿತ್ರವಾದ ದಾಸಬೋಧಕ್ಕೆ ಅತ್ಯಂತ ಮಹತ್ವವಿರುವದು.

ದಾಸಬೋಧವಲ್ಲಿ ಶ್ರೀ ಸಮರ್ಥರ ಕಾಲದ ಕೆಲವು ಐತಿಹಾಸಿಕ ಸಂಗತಿಗಳ ಶಬ್ದ ಚಿತ್ರಗಳು ಅಲ್ಲಲ್ಲಿ ಕಾಣಬರುತ್ತವೆ. ಒಂದೆಡೆಯಲ್ಲಿ (ದ೧೮-ಸ೬) ಶಿವಾಜಿ ಅಫಝುಲಖಾನರ ಜೆಟ್ಟಿಯ ಕಾಲಕ್ಕೆ, ರಾಮದಾಸರು ಶಿವಾಜಿ ಮಹಾರಾಜರಿಗೆ ಮಾಡಿದ ಉಪದೇಶವು ಗ್ರಥಿತವಾಗಿರುವುದು.

"ಮ್ಲೇಚ್ಛರು ವರ್ಜನೀಯರು ... " ಮುರ್ಜನರಾದ ಮ್ಲೇಂಛರು ಬಹಳ ದಿನಗಳಿಂದ ಪುಂಡತನವನ್ನು ಮಾಡುತಲಿರುವರು. ಅವರ ಬಂಡನ್ನು ತುಂಡರಿಸಲು

ಎಚ್ಚರದಿಂದ ಸಾಗಬೇಕು. ಪರಮಾತ್ಮನಿಂದ ಅಂಗೀಕೃತ ನಾದ ಮಹಾಪುರುಷನು ಅದೇನನ್ನು ಮಾಡಲರಿಯ? ಆದರೂ ಜಾಗ್ರತೆಯಿಂದ-ಧೈರ್ಯದಿಂದ ಅದ್ಭುತವಾದ ಕಾರ್ಯವನ್ನು ನೆರವೇರಿಸಬೇಕು. ಧರ್ಮಸ್ಥಾಪನೆಯನ್ನು ಮಾಡುವ ಮಹನೀಯರು, ಪರಮಾತ್ಮನ ಅವತಾರರು, ಹಿಂದಾಗಿರುವರು—ಮುಂದಾಗುವರು ಇದೆಲ್ಲ ಪರಮಾತ್ಮನ ಮಹಾಪ್ರಸಾದ" ಎಂದು ಶ್ರೀ ಸಮರ್ಥರು ಶ್ರೀ ಶಿವರಾಯನನ್ನು ಹುರಿದುಂಬಿಸಿದರು.

ಇನ್ನೊಂದೆಡೆ (ದ೧೪-ಸ೭) ರಾಮದಾಸರು ತತ್ಕಾಲೀನ ಜನರ ಸ್ಥಿತಿಯನ್ನು ಕರುಳು ಕರಗುವಂತೆ ಬಣ್ಣಿಸಿರುವರು. ವಿಶೇಷವಾಗಿ ಬ್ರಾಹ್ಮಣರ ಕೀಳು ಜೀವನವು ಅವರನ್ನು ಮರುಗಿಸಿತು. "ಬ್ರಾಹ್ಮಣರ ಬುದ್ಧಿಯು ಅಳಿಯಿತು. ಆಚಾರವು ಉಳಿಯಲಿಲ್ಲ. ಅವರು ತಮ್ಮ ಗುರುತ್ವವನ್ನು ತೊರೆದು ನೀಚರ ಶಿಷ್ಯರಾದರು. ರಾಜ್ಯವು ತುರುಕರ ಕೈಸೇರಿತು ಗುರುತ್ವವು ನೀಚರನ್ನು ಆಶ್ರಯಿಸಿತು. ಹೀಗಾಗಿ ಬ್ರಾಹ್ಮಣರಿಗೆ ಇಲ್ಲಿಯ ವೈಭವವಿಲ್ಲ-ಅಲ್ಲಿಯ ನಿಃಶ್ರೇಯಸವಿಲ್ಲ. ಇಷ್ಟಾದರೂ ಇವರಿಗೆ ಬುದ್ಧಿ ಬರಬೇಕು? ಇವರ ಸೊಕ್ಕು ಇಳಿಯಬೇಕು? ಪರಸ್ಪರರಲ್ಲಿಯ ಕಲಹವು ಅಳಿಯಬೇಕು?—ಒಂದನ್ನೂ ಕೇಳಬೇಡಿ ಹಿರಿಯರ ಕರ್ಮವು ನಮಗೆ ಬಡಕೊಂಡ ಮೂಲಕ ಇಂದಿನ ಬ್ರಾಹ್ಮಣರಿಗೆ ತಿನಲು ಹೊಟ್ಟೆತುಂಬ ಕೂಳು ಕೂಡ ದೊರೆಯದಾಗಿದೆ. ಆಯಿತು. ಹಿರಿಯರಿಗೆ ಹೆಸರಿಟ್ಟಾದರೂ ಫಲವೇನು? ಇದೆಲ್ಲ ನಮ್ಮ ದೈವದ ದುರ್ವಿಲಾಸ. ತಡೆಯಲರಿಯದೆ ನಾನಿನಿತು ಕಠೋರವಾಗಿ ನುಡಿದೆ. ಕ್ಷಮಿಸಿರಿ." ಎಂದುಸುರಿರುವರು ಸಮ

ರ್ಥರು.

ಈ ದುರಿತವನ್ನು ದೂರಮಾಡಲು ಭಗವಂತನ ಉಪಾಸನೆಯೊಂದೇ ಸಾಧನವೆಂದು ಶ್ರೀ ಸಮರ್ಥರ ಉಪದೇಶ. ಶ್ರೀ ಮನ್ನಾರಾಯಣನನ್ನು ನೆನೆವ ಭಕ್ತನನ್ನು ಶ್ರೀ ಲಕ್ಷ್ಮೀದೇವಿಯು ತೊರೆಯಬಹುದೇ? ಆದುದರಿಂದ ಆತನನ್ನು ಸದೈವ ನೆನೆಯುತ್ತಿರುವುದು ನಮ್ಮ ಕರ್ತವ್ಯ. ದುರುಳರನ್ನು ಸಂಹರಿಸಿ ಭಕ್ತರನ್ನುದ್ಧರಿಸುವ ದೇವನನ್ನು ಸ್ಮರಿಸಿದವನಿಗೆ ಬಯಸಿದುದು ಲಭಿಸುವದು. ನೀನು ಕರ್ತನೆಂದೆಣಿಸಿದಿಯೆಂದರೆ ಸಂಕಟಗಳ ಜಾಲದಲ್ಲಿ ಬೀಳುವಿ. ಪರಮಾತ್ಮನು ಕರ್ತನೆಂದೆಣಿಸಿ ಕೆಲಸಕ್ಕೆ ತೊಡಗಿದೆಯೆಂದರೆ, ನಿನಗೆ ಗೆಲವು, ಹಿರಿಮೆಯು, ಬಲವು, ಎಲ್ಲವೂ ದೊರೆಯುವದು ಎಂದವರ ಹೇಳಿಕೆ.

(ಆ) ತತ್ವಜ್ಞಾನ

೨. **ಜ್ಞಾನವಿಚಾರ:** ಶ್ರೀ ಸಮರ್ಥರ ತತ್ವಜ್ಞಾನವನ್ನರಿತುಕೊಳ್ಳುವ ಪೂರ್ವದಲ್ಲಿ ಅವರ ಜ್ಞಾನ-ವಿಷಯಕವಾದ ಕಲ್ಪನೆಯನ್ನರಿಯುವುದು ಉಚಿತ. ಬೇರೆ ಬೇರೆ ಶಾಸ್ತ್ರಗಳ ಜ್ಞಾನವು ಜ್ಞಾನವಲ್ಲ; ಅನ್ಯರ ಮನಸ್ಸಿನಲ್ಲಿದ್ದುದನ್ನರಿಯುವದು ಜ್ಞಾನವಲ್ಲ; ಭೂತಭವಿಷ್ಯಜ್ಞಾನವು ಜ್ಞಾನವಲ್ಲ....; ಇವಕ್ಕೆಲ್ಲ ಕೌಶಲವೆನ್ನಬಹುದು. ಇವು ಜ್ಞಾನವಾಗಲರಿಯವು. ತನ್ನ ತಾನರಿವುದೆ—ಸ್ವ-ರೂಪದರ್ಶನವೇ ನಿಜವಾದ ಜ್ಞಾನವು. ಪರಮಾತ್ಮನ ಶಾಶ್ವತರೂಪವನ್ನು ಕಂಡು, ನಿತ್ಯಾನಿತ್ಯ ವಸ್ತುಗಳು ನ್ನರಿತವನೇ ನಿಜವಾದ ಜ್ಞಾನಿಯು. ಈ ಸನಾತನವಾದ,

ಸಹಜವಾದ ಆತ್ಮಜ್ಞಾನದಿಂದಲೇ ನಾವು ಸರ್ವಜ್ಞರಾಗುವೆ
ಇದೇ ಮಹಾಪುರುಷರ ಜನ್ಮಕ್ಕೆ ಕಾರಣವಾಯಿತು. ಇದ
ಸಂತರ ಗುಹ್ಯ ಜ್ಞಾನವು. ಸದ್ಗುರುವಿನ ಕರುಣದಿಂದ ಅ
ದೊರೆಯುವುದು. ಸದ್ಗುರುವನ್ನು ನೆನೆ. ಅವನಲ್ಲಿ ಬೆರೆ
ಬಿಡು. ಅದರಿಂದ ನಿನ್ನೆದೆಯಲ್ಲಿ ಆತ್ಮಜ್ಞಾನವು ಉದಿಸಿ ನಿನ
ಪೂರ್ತಿಯಾದ ಶಾಂತಿಯು ಸಿಗುವದು..... ಈ ಆತ್ಮಜ್ಞಾ
ದಿಂದ ಎಲ್ಲ ಪಾತಕಗಳು ಸುಟ್ಟುಹೋಗುವವು. ಆತ್ಮನನ
ಕಂಡ ಮನುಜನ ಪುಣ್ಯಕ್ಕೆ ಮಿತಿಯಿಲ್ಲ. ಇದಿದ್ದಲ್ಲಿ ಶಾಶ್ವ
ಸುಖ, ಇದಿಲ್ಲದಲ್ಲಿ ದುಃಖ, ಎಂದು ರಾಮದಾಸರು ಉಸು
ರುವರು.

೩. **ದೇವರಾರು ?:** ಇನ್ನು ದೇವರಾರೆಂಬುದನ್ನು ರಾಮ
ದಾಸರು ಒಳ್ಳೆಯ ಮಾರ್ಮಿಕರೀತಿಯಿಂದ ಹೇಳಿರುವರು
ಆಧ್ಯಾತ್ಮಜೀವನದಲ್ಲಿ ಸಾಧಕನಿಗೆ ಪ್ರತಿಮೆಗಳು ಮೊ
ಮೊದಲು ಸಮಾಧಾನವನ್ನು ನೀಡಿದರೂ,ಆ ಪಥದಲ್ಲಿ ಮುಂದ
ವರಿದವನಿಗೆ ಅವು ಸಂತೈಸಲರಿಯವು. " ಇವೆಂತು ದೇವ
ರಯ್ಯಾ ? ಜನರು ಪ್ರತಿಮೆಗಳನ್ನು ಕದಿಯಬಹುದು-ಒಡೆಯ
ಬಹುದು. ಇಂಥ ದೇವರು ನರ್ಮದಾ-ಗಂಡಕೀ ನದಿ
ಳಲ್ಲಿ ಕೋಟಿಗಟ್ಟಲೆ ದೊರೆಯಬಹುದು. ಇವೆಲ್ಲ ದೇವರೇ
ನಿಜವಾದ ದೇವದೇವನ ಸತ್ವವೂ ಮಹತ್ವವೂ ಇವುಗಳಿಗೆ ಸ
ಬಹುದೇ?" ಎಂದವರು ಕೇಳಿರುವರು. ಜಗತ್ತಿನಲ್ಲಿ ನಾಲು
ವಿಧದ ದೇವರು ಪ್ರಚಲಿತರು; ಪ್ರತಿಮಾದೇವರು, ಅವತಾ
ದೇವರು, ಅಂತರಾತ್ಮದೇವರು ಮತ್ತು ನಿರ್ವಿಕಾರದೇವರು
ಇವುಗಳಲ್ಲಿ ಕೊನೆಯವನಾದ ನಿರ್ವಿಕಾರದೇವರೇ ನಿಜವಾ
ದೇವರು.... ಅವನು ಒಬ್ಬನು. ಅವನಿಂದಲೇ ವಿವಿಧತೆಯ

ಜನಿಸಿರುವುದು. ಒಂದರಾ ಒಡಲಲ್ಲಿ ಬಂದಿಹುದು ಜಗವೆಲ್ಲ. ಜನರು ಸುಮ್ಮನೆ ಆ ಪರಮಾತ್ಮನನ್ನು ಅರಿಯದಲೆ ಅನೇಕ ದೇವತೆಗಳನ್ನು ಭಜಿಸುವರು. ನಾವು ಆ ಪರಮಾತ್ಮನನ್ನು ಕಂಡು, ಆತನಲ್ಲಿಯೆ ನಿಲ್ಲಬೇಕು. ಅವನ ನಾಮವನ್ನು ಎಡೆ ಬಿಡದೆ ನೆನೆದು ಆತನಲ್ಲಿ ಲೀನರಾಗಬೇಕು. ಇದು ಸೂಕ್ಷ್ಮ ಪಥವು. ಆದರೂ ಗುರುಕರುಣವು ಒಂದು ನಿಮಿಷದಲ್ಲಿ ಇದನ್ನು ತಿಳಿಸಬಲ್ಲದು. ಈ ಅಂತರ್ದೇವನನ್ನು ತೊರೆದು ತೀರ್ಥಕ್ಷೇತ್ರ ಗಳಿಗೆ ಸಾರಿದರೆ ಅಲ್ಲಿ ಕಲ್ಲು ನೀರನ್ನುಳಿದು ಇನ್ನೇನು ದೊರೆ ಯುವುದು ? ಆದರೆ ನಾನಾ ದೇವತೆಗಳಲ್ಲಿ ಅಂತರ್ಲೀನ ನಾದ ಆತ್ಮದೇವನ ಅನುಸಂಧಾನವು ಎಲ್ಲ ಪಾತಕರಾಶಿಗಳನ್ನು ಸುಡದಿರದು. –ಹೀಗೆಂದು ರಾಮದಾಸರ ಖಂಡತುಂಡಾದ ಮತ.

೪. ದೇವತೆಗಳು–ಪಿಶಾಚಗಳು: ಮೇಲಿನ ತತ್ವಜ್ಞಾನ ವನ್ನು ಸುರಿದ ಸಮರ್ಥರು ಮೇಲ್ತರಗತಿಯ ಬುದ್ಧಿವಾದಿಗಳಿ ದ್ದರೆಂಬಲ್ಲಿ ಸಂದೇಹವಿಲ್ಲ. ಆದರೂ ಅವರು ಭೂತ-ಪಿಶಾಚ ಗಳನ್ನೂ ಪವಾಡಗಳನ್ನೂ ತೀರ ನಂಬುತ್ತಿರಲಿಲ್ಲವೆಂದಲ್ಲ. ಶಾಪದಿಂದ ದೇಹಧಾರಣವಾಗುವುದು. ಕೆಲವರು ಪರಕಾಯಾ ಪ್ರವೇಶವನ್ನೂ ಮಾಡಿರುವರು. ದೇವತೆಗಳೂ ಪಿಶಾಚಗಳೂ ವಾಯುರೂಪಿಗಳು. ಅವು ಜನರ ಮೈಯಲ್ಲಿ ಸಂಚರಿಸಿ ವಿಧ ವಿಧವ ಲೀಲೆಗಳನ್ನು ಮಾಡುವವು. ಸರಿಯಾದ ಮಂತ್ರಗಳ ಬಲದಿಂದ ಅವನ್ನಲ್ಲಿಂದ ತಳ್ಳಲು ಬರುವುದು. ಮಂತ್ರಗಳ ಸಾಮರ್ಥ್ಯದಿಂದ ಮಾಯಾಜಾಲವನ್ನು ನಿರ್ಮಿಸಬಹುದು. ಇವೆಲ್ಲ ತೀರ ಸುಳ್ಳೆಂದೆಣಿಸಬೇಡಿ. ಜಗತ್ತಿನಲ್ಲನೇಕರಿಗೆ ಇವು ಗಳ ಅನುಭವವಿರುವುದು; ವಾಯುರೂಪದಿಂದಲೆದಾಡುವ ಈ

ದೇವತೆಗಳೂ ದೆವ್ವಗಳೂ ಅಜ್ಞರನ್ನು ಕಾಡುವವು. ಸಂಕ
ವನ್ನೆ ತೊರೆದ ಜ್ಞಾನಿಗಳಿಗೆ ಅವು ಏನನ್ನೂ ಮಾಡಲರಿಯು
ಅವುಗಳಿಂದ ಅವರಿಗೆ ಯಾವ ಬಾಧೆಯೂ ತಟ್ಟದೆಂದು ರಾ
ದಾಸರು ಅಭಿಪ್ರಾಯಪಡುವರು.

ಬ್ರಹ್ಮ-ವಿಷ್ಣು-ಮಹೇಶರಿಂದೊಳಗೊಂಡ ಈ ದೇವತೆಗ
ವಿಷಯವಾಗಿ ಇನ್ನೊಂದು ಮಾತನ್ನವರು ಉಸುರಿರುವರ
ಅವುಗಳಿಗವರು ಬೇರೆ ಅರ್ಥವನ್ನು ಸಲ್ಲಿಸಿರುವರು. ಈ ದೇ
ತೆಗಳ ನಿಲುವು ನಮ್ಮ ಚಿತ್ತದಲ್ಲಿ. ವಿಷ್ಣುವು ನಮ್ಮಲ್ಲಿಯ
ಜ್ಞಾನತತ್ವ; ರುದ್ರನು ಅಜ್ಞಾನದ ತತ್ವ; ಬ್ರಹ್ಮನು ಜ್ಞಾನ
ಅಜ್ಞಾನಗಳ ಮಿಶ್ರತತ್ವ. ಅವರಿಗೆ ಬಾಹ್ಯ ಸ್ವತಂತ್ರ ಅಸ್ತಿ
ತ್ವವಿಲ್ಲ. ಅವು ಕೇವಲ ಸೃಷ್ಟಿ-ಸ್ಥಿತಿ-ಲಯಗಳ ಮೂರ್ತ
ಸ್ವರೂಪಗಳು. ಬ್ರಹ್ಮ-ವಿಷ್ಣು-ಮಹೇಶರಿಗೆ ಈ ಕೆಲಸವನ್ನು
ಹಂಚಿಕೊಟ್ಟದು ಬರೀ ಕಾಲ್ಪನಿಕ ವಿಚಾರ. ಇವೆಲ್ಲವುಗಳನ್ನು
ನೆರವೇರಿಸುವವನ್ನು ಅಂತರ್ದೇವನೊಬ್ಬನೇ ! ಬ್ರಹ್ಮ-ವಿಷ್ಣು
ಮಹೇಶರಾಗಲಿ, ಚಂದ್ರ-ಸೂರ್ಯ-ನಕ್ಷತ್ರಗಳಾಗಲಿ, ಬೇರೆ
ಬೇರೆ ದೇವತೆಗಳ ಅವತಾರಗಳಾಗಲಿ, ಇವೆಲ್ಲ ಇತ್ತೀಚಿನ ವಿಷ
ಯಗಳು. ಈ ದೃಶ್ಯಗಳೆಲ್ಲ ಆ ದೇವಾಧಿದೇವನ ಮಹಾದ್ವಾ
ರಗಳು. ಇವನ್ನು ದಾಟಿದ ಹೊರತು ನಮಗವನ ದರ್ಶನವು
ದುರ್ಲಭವು. ಯಾವನ ಸಾಮರ್ಥ್ಯದಿಂದ ರವಿಬಿಂಬವು ಬಾನಿ
ನಲ್ಲಿ ಮೂಡುವದೋ, ಮಂಜಿನಲ್ಲಿ ನೀರು ನಿಲ್ಲುವುದೋ, ಗಾಳಿ
ಯು ಕಾಲನ ದೂತನಂತೆ ಧಾವಿಸುವುದೋ, ಸಿಡಿಲು ಗುಡು
ಗುವುದೋ ಆ ಪರಮಾತ್ಮನ ಉಪಾಸನೆಯನ್ನು ನಾವು ಮಾ
ಬೇಕು. ಯಾವನ ಬಲದಿಂದ ಸೂರ್ಯ-ಚಂದ್ರಮರೂ ಮೇಘ
ಮಾಲೆಯೂ ತಮ್ಮ ತಮ್ಮ ಸ್ಥಲದಲ್ಲಿ ನಿಂತಿರುವವೋ, ಆತನ

ಸರ್ವಕರ್ತನಾದ ಸರ್ವೇಶ್ವರನು. ದೇವರ ಮಾತ್ನವನಲಂ ಕರಿಸಿದ ದೇವನು ಬ್ರಹ್ಮಾಂಡವನ್ನು ರಚಿಸಬಲ್ಲನೇ? ಎಲ್ಲವನ್ನೂ ಒಳಹೊರಗೆ ವ್ಯಾಪಿಸಿರುವ ಪರಮಾತ್ಮನೇ ನಿಜವಾದ ದೇವರು. ಅವನು ನಿತ್ಯನು-ಅವ್ಯಯನು. ಅವನು ಬದಲಾಗುವ ದೇವ ನಿಂದ ತೀರ ಭಿನ್ನನು. ದೇವನು ಬಂದನು, ದೇವನು ಹೋದ ನೆಂದು ಆಡುವುದು ತಿಳಿಗೇಡಿತನವು. ದೇವನು ಹುಟ್ಟುವದಿಲ್ಲ, ಸಾಯುವದಿಲ್ಲ. ಜನನ-ಮರಣದ ಜನಕನಾದ ದೇವನು ಅವುಗಳಲ್ಲಿ ಸಿಲುಕಬಹುದೇ ?

ಈ ಮೇರೆಗೆ ದೇವರು ದೇಹ-ಆತ್ಮರಿಂದ ಬೇರೆಯಾಗಿರು ವನು. ದೇಹವು ಜಡ; ಆತ್ಮನು ಚಂಚಲ; ಬ್ರಹ್ಮನು ನಿಶ್ಚಲ. ಇವುಗಳ ನಿಜವಾದ ಸಂಬಂಧವನ್ನು ಅನುಭಾವಿಯೇ ಬಲ್ಲ. ನಿಜವಾಗಿ ಆತ್ಮನು ಒಬ್ಬನು. ಆದರೆ ಆತ್ಮರು ನಾಲ್ವರೆಂದು ಜನರ ತಪ್ಪು ತಿಳುವಳಿಕೆ. ದೇಹದಲ್ಲಿದ್ದ ಆತ್ಮನಿಗೆ ಅವರು ಜೀವಾತ್ಮನೆಂದು ಕರೆಯುವರು. ವಿಶ್ವವನ್ನು ತುಂಬಿರುವವನು ಶಿವಾತ್ಮನು. ವಿಶ್ವಾತೀತನು ಪರಮಾತ್ಮನು. ಉಪಾಧಿ-ರಹಿತನೂ-ನಿರ್ಲಿಪ್ತನೂ ಶುದ್ಧಚೇತನನೂ ಆದವನು ನಿರ್ಮ ಲಾತ್ಮನು. ಇವೆಲ್ಲ ಉಪಾಧಿಜನಿತ ಭೇದಗಳು. ನಿಜವಾಗಿ ಆತ್ಮನು ಒಬ್ಬನು, ಆನಂದಮಯನು.

ಈ ಪರತತ್ವವನ್ನು, ಆತ್ಮನೆಂದಾಗಲಿ-ಬ್ರಹ್ಮನೆಂದಾಗಲಿ, ಯಾವ ಹೆಸರಿನಿಂದ ಕರೆದರೂ ಸಾಧಕನ ಮುಖ್ಯ ಗುರಿಯು ಆತನನ್ನು ಸಾಕ್ಷಾತ್ಕರಿಸುವುದು. ಅರಸನನ್ನರಿತವನು ಇಲ್ಲದ ಸಲ್ಲದ ಮನುಷ್ಯನಿಗೆ ಒಡೆಯನೆಂದು ಭಾವಿಸನು. ದೇವನನು ರಿತವನು ದೇವನಾಗುವನು. ಈ ಮುಖ್ಯದೇವನನ್ನರಸುವದೆ ತತ್ವಜ್ಞಾನದ ಮುಖ್ಯ ಕುರುಹೆಂದು ರಾಮದಾಸರು

ಹೇಳುವರು.

(೩) ಸಾಕ್ಷಾತ್ಕಾರ

೫. **ದೇವನನ್ನು ಕಾಣುವದೇತಕ್ಕೆ ?:** ಪರಮಾತ್ಮನ ಅನುಭಾವದ ಅವಶ್ಯಕತೆಯನ್ನು ಕುರಿತು ರಾಮದಾಸರು ಅನೇಕ ಯುಕ್ತಿವಾದಗಳನ್ನು ಮುಂದಿರಿಸಿರುವರು. ಅದರಲ್ಲಿ ಪ್ರಮುಖವಾದುದು ಜೀವನದ ಕ್ಷಣಭಂಗುರತೆಯು. "ನಾವು ಆದೆಂದು ಸಾಯುವೆವೊ ಹೇಳುವವರಾರು ? ಹಕ್ಕಿಗಳು ದಿಕ್ಕು ದಿಕ್ಕಿಗೆ ಹಾರಿಹೋಗುವಂತೆ ಹೊನ್ನು ಹೆಣ್ಣು, ಮಕ್ಕಳು ಮರಿ ನಮ್ಮಿಂದ ದೂರ ತೆರಳುವರು. ದೇಹವು ಬಿದ್ದೊಡನೆ ಜೀವವು ಅದಾವ ಕೀಳು ದೇಹವನ್ನು ಸೇರುವದೋ ಬಲ್ಲವರಾರು ? ಆದುದರಿಂದ ಸುಖವನ್ನು ಬಯಸುವವನು ಶ್ರೀರಾಮನನ್ನು ನೆನೆಯಬೇಕು. ಬರೀ ಅನ್ನವನ್ನಿತ್ತವನಿಗೆ ನೀನು ನಿನ್ನ ದೇಹವನ್ನು ಮಾರುವಿ. ಆದರೆ ನಿನಗೆ ನಿನ್ನ ಜೀವನವನ್ನೇ ದಯಪಾಲಿಸಿದ ದೇವನನ್ನು ಮಾತ್ರ ಪೂರ್ತಿಯಾಗಿ ಮರೆತುಬಿಡುವಿ! ಇದು ಉಚಿತವೇ ನಿನಗೆ? ನಿತ್ಯಾನಂದವನ್ನು ಬಯಸುವವನ ಎಲ್ಲವನ್ನು ತೊರೆದು ದೇವನನ್ನೇ ಹಿಂಬಾಲಿಸಬೇಕು. ಈ ಸಂಸಾರಯಾತ್ರೆಯಲ್ಲಿ ಪರಮಾತ್ಮನನು ಪಡೆಯದೆ, ದುಃಖಗಳನ್ನೆಲ್ಲಗಳೆಯಲು ಬರುವದಿಲ್ಲ.

ಮೇಲಾಗಿ ನರದೇಹವು ಅತಿ ಬೆಲೆಯುಳ್ಳದ್ದು. ಅದು ಚೆನ್ನಾಗಿದ್ದರೇನೇ ನಮಗೆ ಪರಮಾತ್ಮನನ್ನು ಪಡೆಯುವ ಆಶೆ. ಪರಮಾರ್ಥಪ್ರಾಪ್ತಿಯೇ ಈ ದೈಹಿಕ ಜೀವನದ ಗುರಿಯು. ಎಂಥ ಪುಣ್ಯ ಶರೀರವಿದು ! ಇದರಲ್ಲಿ ನಿಂತು ನಾವು ಬಯ

ಸಿದ ಪರಮಾರ್ಥದ ಬಯಕೆಯು ಪೂರ್ತಿಯಾಗದಿರದು. ಈ ನರದೇಹವನ್ನು ಪಡೆದು ಸಾವಿರಾರು ಜನರು ತಮ್ಮ ಉದ್ಧಾರವನ್ನು ಮಾಡಿಕೊಂಡರು. ಆದುದರಿಂದ ಈ ದೇಹವನ್ನು ರೋಗರಹಿತವಾಗಿಯೂ, ಬಲಶಾಲಿಯಾಗಿಯೂ ಮಾಡಿ ಅದನ್ನು ಪರಮಾತ್ಮನ ಪವಿತ್ರಕಾರ್ಯದಲ್ಲಿ ದುಡಿಸುವದೇ ನೇಲು.

ಇದಲ್ಲದೆ ಮೃತ್ಯುದೇವತೆಯು ಸಾಮರ್ಥ್ಯಕ್ಕೆ ನೆಲೆಯೇ ಇಲ್ಲ. ಮರಣಕ್ಕೆ ಎಲ್ಲರೂ ಸಮಾನರು. ಆವನು ಸಮ್ರಾಟರನ್ನೂ ಲೆಕ್ಕಿಸುವದಿಲ್ಲ; ಪಂಡಿತರ ಪರಿವೆ ಅವನಿಗಿಲ್ಲ. ಸಾವಿನ ಈ ಅದ್ಭುತಶಕ್ತಿಯ ಎದುರು ಮಹಾಪರಾಕ್ರಮಿಗಳು ಉರುಳಿದರು. ಜನರ ಹಿತಚಿಂತಕರೂ ರಕ್ಷಕರೂ ಉಳಿಯಲಿಲ್ಲ. ದೊಡ್ಡ ದೊಡ್ಡ ತಪಸ್ವಿಗಳೂ ಇವನಿಗೆ ಶರಣೆಂದರು. ಉಳಿದವರ ಪಾಡೇನು? ಆದರೆ ಪರಮಾತ್ಮನನ್ನು ಸಾಕ್ಷಾತ್ಕರಿಸಿ ಅವನಲ್ಲಿ ಬೆರೆತವರು ಮಾತ್ರ ಅವನ ಹೊಡೆತವನ್ನು ತಪ್ಪಿಸಿಕೊಂಡು ಉಳಿದರು.

ಆದುದರಿಂದ ಎಲ್ಲವನ್ನು ತೊರೆದು ಪರಮಾತ್ಮನನ್ನರಸುವದೇ ನಮ್ಮ ಮುಖ್ಯ ಕರ್ತವ್ಯ. ಅಂದರೇನೇ ನಮಗೆ ಜೀವನದ ಗುಟ್ಟು ತಿಳಿಯುವದು. ಪರಮಾತ್ಮನೇ ಸೌಖ್ಯದ ನಿರ್ಮಾತನು. ಆದರೆ ಜನರು ಆ ಸೌಖ್ಯವನ್ನು ಮಾತ್ರ ಬಯಸಿ ಆತನನ್ನೆಯೆ ಮರೆತುಬಿಡುವರು. ದೇವನನ್ನುಳಿದು ಅನ್ಯ ಸುಖವನ್ನು ಬಯಸುವವರು ಮೂರ್ಖರಲ್ಲದೆ ಮತ್ತೇನು? ಜಾಣನು ಪರಮಾತ್ಮನನ್ನೇ ಕಾಣಬೇಕು. ಆತನನ್ನು ಕಂಡವನಿಗೆ ದುರ್ಲಭವಾದುದಾವುದು? ವಿವೇಕದಿಂದ ಸುಖವು, ಅವಿವೇಕದಿಂದ ದುಃಖವು. ನಿಮಗೆ ಬೇಕಾದುದನ್ನರಸಿರಿ!"

ಎಂದು ರಾಮದಾಸರು ಹೇಳಿರುವರು.

ಇಷ್ಟೇ ಅಲ್ಲ. ಪರಮಾತ್ಮನನ್ನು ಇದೇ ಜನ್ಮದಲ್ಲಿ ಸಾಕ್ಷಾತ್ಕರಿಸಬೇಕು. ಈ ಜಗತ್ತಿನಲ್ಲಿಯು ಕರ್ಮಗಳನ್ನು ಮಾಡುತ್ತಿರುವಾಗಲೇ ವಿವೇಕದಿಂದ ಮುಕ್ತಿಯನ್ನು ಪಡೆಯಲು ಬರುವದು. ಇದು ಅನುಭವದ ಮಾತು. ಹುರುಳಿಲ್ಲದ ಹುಸಿಯುಸಿರಲ್ಲ. ಇದೇ ಜನ್ಮದಲ್ಲಿ ನಾವು ದೇವನನ್ನು ಕಾಣಬೇಕು. ಮುಂದಿನ ಜನ್ಮವನ್ನು ಕಂಡವರಾರು? ದೇಹವಿದ್ದು ಇಲ್ಲದಂತಿರುವುದು, ಮಾಡಿ ಮಾಡದಂತಿರುವುದು, ಜೀವಿಸುವಾಗಲೇ ಮುಕ್ತಿಯ ಮಾಂಗಲ್ಯವನ್ನನುಭವಿಸುವದು,— ಇವುಗಳ ಗುಟ್ಟನ್ನು ಅನುಭಾವಿಯೇ ಬಲ್ಲ. ಜೀವನ್ಮುಕ್ತಿಯು ನಗದು ಹಣ. ವಿದೇಹ ಮುಕ್ತಿಯು ಉದ್ದರಿ ಹಣ. ಕೈಯಲ್ಲಿದ್ದುದನ್ನು ತೊರೆದು ಮುಂಬರುವುದನ್ನು ಹಿಂಬಾಲಿಸುವವರಾರು?

೬. ಹೇಗೆ? : ಆದರೆ ಜನಸಾಮಾನ್ಯರು ಬದ್ಧರು. ಅವರಿಗೆ ಭಕ್ತಿ-ಜ್ಞಾನ-ಧ್ಯಾನಗಳ ಸೋಂಕಿಲ್ಲ. ಸತ್ಪುರುಷರ ಸಹವಾಸವಿರುವುದಿಲ್ಲ. ಆದುದರಿಂದವರಿಗೆ ಆತ್ಮಜ್ಞಾನದ ಪರಿಚಯವಾಗುವುದೆಂತು? ಅವರು ಜಾಗತಿಕ ಜೀವನವನ್ನು ಪ್ರೀತಿಯಿಂದ ಅಪ್ಪಿ, ಆತ್ಮಜೀವನವನ್ನು ಹಳಿಯುವುದು ಸಹಜ. ದೇಹವು ಅವರ ಪ್ರೀತಿಯ ವಿಷಯ. ಹೊನ್ನು ಹೆಣ್ಣಿನ ಆರ್ಚಕರವರು. ಕಣ್ಣಿನಿಂದ ಅವರು ಅದನ್ನೇ ನೋಡುವರು; ಕಿವಿಯಿಂದದನ್ನೇ ಕೇಳುವರು; ಮನಸ್ಸಿನಿಂದದನ್ನೇ ನೆನೆಸುವರು. ಅವರವಕ್ಕೆ ತಮ್ಮ ಸರ್ವಸ್ವವನ್ನೇ ಒಪ್ಪಿಸುವರು. ಅದರಲ್ಲಿಯೆ ಅವರ ಇಂದ್ರಿಯಗಳು ಸ್ಥಿರವಾಗುವವು. ಹೊನ್ನು ಹೆಣ್ಣಿನಲ್ಲಿಯೇ ಅವರ ಜೀವನ ಸಾಫಲ್ಯ—ಅವೇ ಅವರ ತೀರ್ಥ ಕ್ಷೇತ್ರಗಳು.

೭. ಸದ್ಗುರುವಿನ ಮಹಿಮೆ: ಇಂಥವರ ಬುದ್ಧಿಯಲ್ಲಿ ಬೆಳಕು ಮೈದಾಳುವುದೆಂತು? ಇದು ಸದ್ಗುರುಗಳ ಹೊರತು ಆಗದ ಮಾತು. ಯಾಕಂದರೆ ನಿಜವಾದ ಆತ್ಮಜ್ಞಾನವು ಗುರುಗಳಿಲ್ಲದೆ ದೊರೆಯಲಾರದು. ಧ್ಯಾನ-ಧಾರಣೆಗಳಾಗಲಿ—ಭಕ್ತಿ-ಪೂಜೆಗಳಾಗಲಿ—ಕಿಂಬಹುನಾ ಯಾವ ಸಾಧನವೇ ಆಗಲಿ—ಸದ್ಗುರುವಿನ ಕರುಣವಿಲ್ಲದೆ ಹೋದರೆ ಅದು ಫಲಕಾರಿಯಾಗದು. ಸರಿಯಾದ ಅಂಜನವನ್ನು ಹಾಕಿಕೊಂಡವನಿಗೆ ಗುಪ್ತಧನವು ಕಾಣುವಂತೆ ಗುರುವಿನಿಂದ ಉಪದೇಶವನ್ನು ಪಡೆದವನಿಗೆ ಜ್ಞಾನಜ್ಯೋತಿಯ ದರ್ಶನವಾಗುವುದುಂಟು. ಹಿಂದಿನ ರಾಮಕೃಷ್ಣಾದಿ ಅವತಾರಿಗಳೂ ಇದನ್ನೇ ಮಾಡಿದರು. ಗುರುಗಳನ್ನಾಶ್ರಯಿಸಿಯೇ ಅವರು ಮುಕ್ತಿಯ ಗುರಿಯನ್ನು ಮುಟ್ಟಿದರು.

ಸದ್ಗುರುಗಳೇ ಪರಮಾತ್ಮನೆಡೆಗೆ ಸಾಗುವ ನಿಜವಾದ ದಾರಿಯನ್ನು ತೋರುವರು. ಅನುಭಾವದ ಮಂದಿರವನ್ನು ಸೇರಲು ಬೇಕಾದ ಬೀಗದ ಕೈಯನ್ನು ಅವರೇ ದಯಪಾಲಿಸುವರು. ಅಲ್ಲಿಯ ಚಿದ್ರತ್ನಗಳು ಆ ಕೈಯನ್ನು ಪಡೆದವನಿಗೇ ದೊರೆಯುವವು. ಗುರುಕರುಣವು ಬುದ್ಧಿಯನ್ನು ಬೆಳಗುವುದು. ಅತೀಂದ್ರಿಯವಾದ ಅನಂತಸೌಖ್ಯದ ನೆಲವೀಡಿನಲ್ಲಿ ನಿಲ್ಲಿಸುವದು. ಇದು ಮನಸ್ಸಿಗೆ ನಿಲುಕದ ವಿಷಯ. ಬುದ್ಧಿಯ ಅತೀತವಾದ ಮಾತು. ಇಂಥ ಅಖಂಡಾನಂದವನ್ನು ದಯಪಾಲಿಸುವ ಗುರುವು ಒಂದರ್ಥದಿಂದ ದೇವರಿಗಿಂತಲೂ ಮಿಗಿಲಾದವನೆನ್ನಲು ಅಡ್ಡಿಯಿಲ್ಲ.

ಇಂಥ ಗುರುವಿನ ಮಹಿಮೆಯನ್ನಳೆಯಲು ಶಬ್ದಗಳು ಸಾಲವು. ಅವನನ್ನು ಯಾವ ಉಪಮಾನವೂ ಸರಿಗಟ್ಟ

ಲಾರದು. ಗುರುವಿಗೆ ಸೂರ್ಯನೆನ್ನಬೇಕೇ? ಅವಸದಕ್ಕೂ ಮೇಲು. ಯಾಕಂದರೆ ಸೂರ್ಯನು ಬರೀ ಸಾಮಾನ್ಯ ಕತ್ತಲೆಯನ್ನು ಕಳೆದರೆ, ಸದ್ಗುರುವು ಅಜ್ಞಾನದ ಕತ್ತಲೆಯನ್ನೇ ತಳ್ಳಿ, ಶಿಷ್ಯನನ್ನು ಜನ್ಮ-ಮರಣಗಳಿಂದ ಮುಕ್ತನನ್ನಾಗಿ ಮಾಡುವನು. ಸದ್ಗುರುವಿಗೆ ಪರಸನೆಂದು ಕರೆಯಬೇಕೇ? ಛೀ! ಅವನದನ್ನು ಮೀರಿದವನು. ಪರುಷದಿಂದ ಕಬ್ಬಿಣವು ಹೊನ್ನಾಗಬಹುದು ಆದರದು ಪೌರುಷವಾಗಬಹುದೇ? ಸದ್ಗುರುವಿನ ಕರುಣದಿಂದ ಶಿಷ್ಯನು ಸದ್ಗುರುವೇ ಆಗಬಲ್ಲ. ಸದ್ಗುರುವು ಸಾಗರ-ಮೇರು ಪೃಥಿವಿ ಇವೆಲ್ಲವುಗಳಿಗಿಂತ ಶ್ರೇಷ್ಠನು. ಇಷ್ಟೇ ಅಲ್ಲ. ಅಮೃತ-ಕಲ್ಪವೃಕ್ಷಗಳು ಕೂಡ ಅವನನ್ನು ಸರಿಗಟ್ಟಲಾರವು. ಅಮೃತವೇನು ಹುಟ್ಟು ಸಾವುಗಳನ್ನು ಅಲ್ಲಗಳೆಯಬಹುದೇ? ಕಲ್ಪನಾತೀತನ ಮುಂದೆ ಕಲ್ಪವೃಕ್ಷದ ಪಾಡೇನು? ಕಲ್ಪವೃಕ್ಷವು ದಯಪಾಲಿಸುವ ಯಾವ ವಸ್ತುವಿಗಿಂತಲೂ ಹೆಚ್ಚಿನ ವಸ್ತುವನ್ನು ಗುರುಕರುಣವು ಕೊಡುವದು. ಆದುದರಿಂದ ವರ್ಣನಾತೀತನೆಂಬುದೊಂದೇ ಆತನ ಯಥಾರ್ಥ ವರ್ಣನೆಯು.

೮. **ಸದ್ಗುರುವಿನ ಲಕ್ಷಣಗಳು :** ತಾತ್ವಿಕ ದೃಷ್ಟಿಯಿಂದ ಸದ್ಗುರುವಿನ ಮಹಿಮೆ ಬಣ್ಣಿಸಲು ಬಾರದಂತಹದಿದ್ದರೂ ಶ್ರೀ ಸಮರ್ಥರು ಅವರ ಲಕ್ಷಣಗಳನ್ನು ಕೊಡಲು ಯತ್ನಿಸಿರುವರು. “ಮಾಡಗಳನ್ನೆಸಗುವ ಬೋಧಕನು ಗುರುವೆಂದೆಣಿಸಲ್ಪಟ್ಟರೂ ಅವನು ನಿಜವಾದ ಗುರುವಲ್ಲ. ಮುಕ್ತಿಯ ಪಥವನ್ನು ತೋರುವವನೇ ನಿಜವಾದ ಸದ್ಗುರುವು. ನಮ್ಮ ಮನಸ್ಸಿನಲ್ಲಿ ಆತ್ಮಜ್ಞಾನದ ಬೆಳಕನ್ನು ಬೀರಿ ಮರವಿನ ಕತ್ತಲೆಯನ್ನು ಕಳೆಯುವವನೇ ಗುರುವೆಂದು ಕರೆದುಕೊಳ್ಳಲು

ಯೋಗ್ಯನು. ಶಿಷ್ಯರಿಗೆ ಸಂಯಮದ ಮಹಿಮೆಯನ್ನು ಕಲಿಸಿ ಅವನಿಂದ ಸಾಧನವನ್ನು ಮಾಡಿಕೊಳ್ಳದ ಗುರುಗಳು ಕವಡಿಗೆ ದೊರೆತರೂ ತೀರ ತ್ಯಾಜ್ಯರು. ವಿಮಲವಾದ ಆತ್ಮಜ್ಞಾನವೂ, ಸ್ವರೂಪದಲ್ಲಿಯ ನಲವಿನ ಮೂಲಕ ಉಂಟಾದ ನಿಶ್ಚಯದ ಸಮಾಧಾನವೂ ಸದ್ಗುರುವಿನ ಪ್ರಮುಖ ಲಕ್ಷಣಗಳು. ಅವು ಗಳ ಜತೆಯಲ್ಲಿ ಅವನು ಪ್ರಬಲ ವೈರಾಗ್ಯಶೀಲೂ ಇರಬೇಕು. ಅಧ್ಯಾತ್ಮ ಚರ್ಚೆಯೂ ಸಾರಾಸಾರ ವಿಚಾರವೂ ಅವನ ನಿತ್ಯದ ಕೆಲಸ.... ಒಳಗಿನ ಆತ್ಮಜ್ಞಾನದ ಪ್ರಭೆಯೂ, ಹೊರಗಣ ಭಾವಪೂರ್ಣ ಭಜನೆಯೂ— ಶಿಷ್ಯರಿಗೆ ಪರಮಶಾಂತಿಯನ್ನು ದಯಪಾಲಿಸುವವು.

೬. **ಸತ್ಪುರುಷರು :** ಸದ್ಗುರುವಿನ ಕುರುಹುಗಳಂತೆ ಶ್ರೀ ರಾಮದಾಸರು ಸತ್ಪುರುಷರ ಲಕ್ಷಣಗಳನ್ನೂ ಒಳ್ಳೆಯ ಮಾರ್ಮಿಕರೀತಿಯಿಂದ ಹೇಳಿರುವರು. “ ಪರಮಾರ್ಥ ಪೀಯೂಷವನ್ನು ಸವಿದ ಸತ್ಪುರುಷನ ದೇಹವು ಕೂಡ ಹೊಸ ಹೊಳಪಿನಿಂದ ಕೂಡಿದ್ದಿರುವುದು ಅವನಾವಾಗಲೂ ಸ್ವರೂಪ ವನ್ನು ಕಾಣುವನು. ಅವನು ಜಗತ್ತಿನಲ್ಲಿದ್ದರೂ ಜಗತ್ತಿನಿಂದ ಭಿನ್ನನು. ಆತ್ಮದರ್ಶನವಾದ ಕೂಡಲೆ ಅವನು ಜಾಗತಿಕ ಜೀವನವನ್ನು ಲೆಕ್ಕಿಸದೆ ಆತ್ಮಜ್ಞಾನದ ಪ್ರಸಾರದಲ್ಲಿಯೆ ತನ್ನ ಕಾಲವನ್ನು ಕಳೆಯುವನು. ಅವನ ಸಾಧನವು ಸಂದೇಹ ರಹಿತವಾಗಿ ಸಾಗುವುದು. ಮನಸ್ಸು ನಿಶ್ಚಲವಾಗಿ ಪರಮಾತ್ಮ ನಲ್ಲಿ ಲೀನವಾಗುವುದು. ಈ ಮೇರೆಗೆ ದೇವರಲ್ಲಿ ನೆಟ್ಟ ಮನ ಸ್ಸುಳ್ಳವನೇ ನಿಜವಾದ ಸಾಧಕನು. ಅರಸನ ಸಿಂಹಾಸನ ವನ್ನೇರಿದವನಲ್ಲಿ ರಾಜಗುಣಗಳು ಮೊಳೆಯುವುದು ಸಹಜ ವಲ್ಲವೇ ? ಅದೇ ಮೇರೆಗೆ ಆತ್ಮನನ್ನು ಸಾಕ್ಷಾತ್ಕರಿಸಿದವನಲ್ಲಿ

ಸಿದ್ಧನ ಗುಣಗಳು ತಾನಾಗಿಯೆ ಮೈದಾಳುವವು. ಇಂಥವ
ಆತ್ಮನನ್ನುಳಿದು ಇನ್ನಾವುದರ ಬಯಕೆಯೂ ಇರುವುದ
ಪರಮಾತ್ಮನ ದಿವ್ಯ ನಾಮವೇ ಅವನ ಸರ್ವಸ್ವವು. ಕಾ
ಕ್ರೋಧಾದಿ ಷಡ್ವಿಕಾರಗಳು ಆತನನ್ನು ಸೋಂಕಲರಿಯ
ಸ್ವರೂಪ ಸ್ಥಿತಿಯಲ್ಲಿರುವುದೇ ಆತನ ಸ್ವಧರ್ಮವು.

ಇಂಥ ಸತ್ಪುರುಷರು ದಯಪಾಲಿಸಿದ್ದನ್ನು ಕೊಡ
ಶಕ್ತಿಯು ಅದಾರಿಗಿದೆ ? ಇವರು ನೀಡಿದ ಸಾಯುಜ್ಯ ಮು
ಯನ್ನು ಸಲ್ಲಿಸಿದ ಸಮ್ರಾಟನಾವನಾದರೂ ಈ ವರೆಗೆ ಜನಿ
ರುವನೇ ? ಸಂತರು ಆನಂದದ ಆಗರ; ಸಂತಸದ ಸಾಗ
ವಿಶ್ರಾಂತಿಯ ನೆಲೆ; ಭಕ್ತಿಯ ಸೆಲೆ; ಮುಕ್ತಿಸುಖದ ತ
ರೂರು. ಮೂರು ಲೋಕದಲ್ಲಿ ದೊರೆಯದ್ದನ್ನಿವರು ಸಹ
ವಾಗಿ ಕೊಡುವರು. ಸೂರ್ಯ-ಚಂದ್ರಮರು ಪ್ರಕಾಶಿಸದ
ದನ್ನು ಸಂತರು ಪ್ರಕಟಗೊಳಿಸುವರು. ಇಂಥ ಸಂತರ ಸ
ಯಲ್ಲಿ ಭಗವಂತನು ಪ್ರತ್ಯಕ್ಷವಾಗಿ ನೆಲೆಸಿರುವನು. ಪರಮಾ
ತ್ಮನ ಮಹಿಮೆಯನ್ನು ಕೊಂಡಾಡುವ ಈ ಭಕ್ತವರರ ಸಭೆಯ
ಧನ್ಯವಾದುದಲ್ಲವೇ ? ಇವರಿಗಾಗಿ ಪರಮಾತ್ಮನು ಪವಾ
ಗಳನ್ನು ಮೆರೆಯುವನು. ಇವರು ತಾನಾಗಿಯೆ ಅವನ್ನು
ಮೆರೆಯಬಯಸುವದಿಲ್ಲ. ಇವರ ಪುಣ್ಯಜೀವನವೇ ಪವಾಡ
ಗಳ ಕಾರಣವೆನ್ನಬಹುದು. ಮುಕ್ತರಾದ ಹಿರಿಯರು ಪವಾಡ
ಗಳಿಗಾಗಿ ನವದೇಹವನ್ನು ಧರಿಸುವದಿಲ್ಲ. ಮೇಲಾಗಿ ಹಿಂದಿನ
ಭಗವದ್ಭಕ್ತರಲ್ಲಷ್ಟೇ ಅದ್ಭುತ ಸಾಮರ್ಥ್ಯವಿತ್ತೆಂದು ಭಾವಿಸಿ
ಇಂದಿನವರನ್ನು ಹಳಿಯಬೇಡಿ. ಯಾಕಂದರೆ ಆತ್ಮಜ್ಞಾನವು
ಪವಾಡಗಳನ್ನು ಮೆರೆಯುವ ಸಾಮರ್ಥ್ಯದಿಂದ ತೀರ ಭಿನ್ನ
ವಾದುದು. ಈ ಬಗೆಯಿಂದ ಶಕ್ತಿಯನ್ನು ಪಡೆಯಬಯಸ

ವವರು ಮಾಯೆಯನ್ನು ಹಿಂಬಾಲಿಸುವರು. ಈ ಸಾಮರ್ಥ್ಯೇ ಚ್ಛೆಯು ಹಿಂದಿನ ಹಿರಿಯರನೇಕರನ್ನು ಅಡ್ಡ ದಾರಿಯಲ್ಲಿ ನಡೆಯಿಸಿತು. ಪರಮಾತ್ಮನ ಪ್ರಾಪ್ತಿಯನ್ನುಳಿದು ಅನ್ಯ ಬಯಕೆಯು ಸಾಧಕನನ್ನು ವಿನಾಶಕ್ಕೆ ಗುರಿಮಾಡದಿರದು. ಆದುದರಿಂದ ಬೇರೆ ಅದಾವ ಬಯಕೆಗೂ ಮನಸ್ಸಿನಲ್ಲಿ ಎಡೆಯನ್ನು ಕೊಡಕೂಡದು.

೧೦. **ಸತ್ ಶಿಷ್ಯರ ಕುರುಹುಗಳು :** ಪರಮಾತ್ಮನನ್ನು ಪಡೆಯುವ ಬಯಕೆಯು ಯಾವನ ಅಂತಃಕರಣದಲ್ಲಿ ಪ್ರಬಲವಾಗಿರುವುದೋ ಅವನೇ ಸತ್ ಶಿಷ್ಯನು. ಇಂಥವನು ಪ್ರಯತ್ನಶೀಲನೂ, ಧೈರ್ಯವಂತನೂ, ಪ್ರಜ್ಞಾವಂತನೂ ಇರುವನು. ತ್ರಿವಿಧ ತಾಪಗಳಿಂದ ಬೆಂದು ಇವನು ಸದ್ಗುರುವಿಗೆ ಶರಣು ಹೋಗುವನು; ಅವನನ್ನು ಪೂರ್ತಿಯಾಗಿ ನಂಬುವನು. ಇಡೀ ಆಕಾಶವೇ ಕಡಕೊಂಡು ಬಿದ್ದರೂ ಇವರ ಶುದ್ಧ ಭಾವವು ಎಳ್ಳಷ್ಟೂ ಮಾರ್ಪಡುವುದಿಲ್ಲ.

ಇಂಥ ಸತ್-ಶಿಷ್ಯನು ಕೂಡಲೆ ಮುಕ್ತಿಯನ್ನು ಪಡೆಯುವನು. ಪರುಷವನ್ನು ಸೋಂಕಿದೊಡನೆ ಲೋಹವು ಕೂಡಲೆ ಪರುಷವಾಗುವಂತೆ, ಸಿಂಧುವಿನಲ್ಲಿ ಬಿದ್ದ ಬಿಂದುವು ಕೂಡಲೆ ಸಿಂಧು ಸ್ವರೂಪವನ್ನು ತಾಳುವಂತೆ, ಸತ್-ಶಿಷ್ಯನು ಗುರುಕರುಣದ ಸ್ಪರ್ಶದೊಡನೆ ತತ್‌ಕ್ಷಣವೇ ಮುಕ್ತನಾಗುವನು. ಶ್ರದ್ಧೆ-ಪ್ರಜ್ಞೆಯುಳ್ಳ ಇಂಥ ಶಿಷ್ಯರಿಗೆ ಹೆಚ್ಚಿನ ಸಾಧನದ ಆವಶ್ಯಕತೆಯಿಲ್ಲ.

ಸತ್-ಶಿಷ್ಯರಲ್ಲಿ ಸತ್ವ ಗುಣಗಳು ಬಲಿಯಲುಬೇಕು. ಅವೇ ಅವನನ್ನು ದೇವನೆಡೆಗೆ ಒಯ್ಯುವವು. ಈ ಸಾತ್ವಿಕ ಗುಣಗಳನ್ನು ಅರಿಯುವುದೆಂತು ? ಅವುಗಳ ಲಕ್ಷಣಗಳನ್ನು

ಶ್ರೀ ಸಮರ್ಥರು ಉಸುರಿರುವರು. “ ಸತ್ವ ಗುಣವು ಬಲಿ
ತೆಂದರೆ ಭಕ್ತನು ಸಂಸಾರದುಃಖವನ್ನು ಮರೆತು, ಪರಮಾ
ನನ್ನು ಹೆಚ್ಚಾಗಿ ಪ್ರೀತಿಸತೊಡಗುವನು. ಪರಮಾರ್ಥವನ
ಪಡೆಯುವ ಪ್ರಬಲ ಬಯಕೆಯು ಆತನಲ್ಲಿ ಮೊಳೆಯುವದ
ಪರಮಾತ್ಮನ ನೀಚ ದಾಸ್ಯವನ್ನು ಪ್ರೀತಿಯಿಂದ ಮಾಡುವನ
ಎಲ್ಲವನ್ನು ತೊರೆದು ದೇವನನ್ನು ಭಜಿಸತೊಡಗುವನು. ಅವ
ಎದೆಯು ಭಕ್ತಿಭಾವದಿಂದ ತುಂಬುವದು. ಮೈಮೇ
ರೋಮಾಂಚಗಳೇಳುವವು; ಕಂಗಳು ಪರಮಾತ್ಮನನ್ನೆ ದಿಟ್ಟಿಸ
ವವು. ಮುಖದಲ್ಲಿ ನಾಮವನ್ನುಚ್ಚರಿಸಿ—ಕೈಯಿಂದ ಚಪ್ಪ
ಯನ್ನಿಕ್ಕುತ್ತ ಅವನು ಭಗವಂತನ ಗುಣ-ಸಂಕೀರ್ತನೆಯನ್ನ
ಮಾಡುವನು. ಎಲ್ಲ ಆಘಾತಗಳನ್ನವನು ಧೈರ್ಯದಿಂದ ಸಹಿ
ಸುವನು. ಅನ್ಯ ವಿಷಯುಗಳಿಗೆ ಮನಸ್ಸಿನಲ್ಲಿ ಎಡೆಗೊಡದ
ಅವನು ಭಗವಂತನನ್ನೇ ನೆನೆಯುವನು. ಅವನು ಭಗವಂತನ
ಗಾಗಿ ಎಲ್ಲ ಸೌಖ್ಯವನ್ನು ತೊರೆಯುವನು; ತನ್ನ ದೇಹವನ್ನು
ಪರೋಪಕಾರದಲ್ಲಿ ಸವಿಸುವನು. ಅವನ ಮನಸ್ಸಿನಲ್ಲಿ ಸಾಗರದ
ಶಾಂತಿಯು ನೆಲೆಸಿರುವದು. ಸದ್ಗುರುವಿನ ದಯದಿಂದ ಇಂಥ
ವನು ಬೇರೆ ಜನರಿಗೆ ಪರಮಾರ್ಥ ಪಥವನ್ನು ತೋರಲ
ಸಮರ್ಥನಾಗುವನು. ”

೧೧. **ನಾಮದ ಸಾಮರ್ಥ್ಯ :** ಈ ವರೆಗೆ ಸಾಧಕನ
ನೈತಿಕ ಸಿದ್ಧತೆಯನ್ನು ಕುರಿತು ಬರೆದದ್ದಾಯಿತು. ಪರಮಾರ್ಥ
ಜೀವನಪಥದಲ್ಲಿ ಬಲವಾಗಿ ಮುಂದೂಡುವ ಶಕ್ತಿಯು ನಾಮ
ಸ್ಮರಣದಿಂದುಂಟಾಗುವದು. ಅದೇ ಅನುಭಾವವನ್ನು ಪಡೆ
ಯಲು ಮಾಡಬೇಕಾದ ಪ್ರಮುಖ ಸಾಧನವು. “ ನಾವು
ಯಾವಾಗಲೂ ಭಗವಂತನನ್ನು ನೆನೆಸಿ ಆತನ ನಾಮವನ್ನುಚ್ಚ

ರಿಸಬೇಕು. ಅದೇ ಸಂತಸದ ಸೆಲೆಯು. ಪ್ರಾತಃಕಾಲದಲ್ಲಿ, ಮಧ್ಯಾಹ್ನಕಾಲದಲ್ಲಿ, ಸಾಯಂಕಾಲದಲ್ಲಿ— ನಾವು ಮರೆಯದೆ ನಾಮಸ್ಮರಣವನ್ನು ಮಾಡಬೇಕು. ಸುಖವಿರಲಿ-ದುಃಖವಿರಲಿ, ಸಂಪತ್ತಿಯಿರಲಿ-ವಿಪತ್ತಿಯಿರಲಿ, ಸಂತಸವಿರಲಿ-ಸಂಕಟವಿರಲಿ ಯಾವ ಸ್ಥಿತಿಯಲ್ಲಿಯೂ ನಾವು ನಾಮಸ್ಮರಣವನ್ನು ತೊರೆಯ ಕೂಡದು. ನಾಮವು ಸಂಕಟಗಳನ್ನು ಪರಿಸುವುದು, ವಿಘ್ನ ಗಳನ್ನು ಅಲ್ಲಗಳೆಯುವದು; ಪರಮಾತ್ಮನ ದಿವ್ಯ ನಾಮದ ಬಲದಿಂದ ಮಹಾ ಪಾಪಿಗಳೂ ಪಾವನರಾದರು – ಆಗುವರು. ನಿಯಮಿತವಾಗಿಯೂ, ಸಂತತವಾಗಿಯೂ ನಾಮಸ್ಮರಣವನ್ನು ಮಾಡುವವನಿಗೆ ಮರಣದ ಭಯವೂ ಇಲ್ಲದಂತಾಗುವುದು. ಬರೀ ನಾಮಸ್ಮರಣೆಯೊಂದೇ ಭಗವಂತನನ್ನು ಸಂತೈಸುವದು. ಪ್ರೀತನಾದ ಹರಿಯು ಭಕ್ತರನ್ನು ರಕ್ಷಿಸುವನು. ನಾಮಸ್ಮರಣೆ ಯಲ್ಲಿ ಹಿರಿಯ-ಕಿರಿಯರೆಂಬ ಭೇದವಿಲ್ಲ; ಮೇಲು-ಕೀಳು ಎಂಬ ವ್ಯತ್ಯಾಸವಿಲ್ಲ; ಹಾರುವ-ಹೊಲೆಯರೆಂಬ ಭಾವನೆಯಿಲ್ಲ. ಇಲ್ಲಿ ಎಲ್ಲರೂ ಸಮಾನರು. ನಾಮವು ಎಲ್ಲರನ್ನು ಸಮನಾಗಿ ಉದ್ಧರಿಸುವುದು.

ಭಗವಂತನ ನೆನೆಪು ಭಕ್ತನಿಗೆ ಬಲವನ್ನೀಯುವುದು. ಅದರ ನೆರವು ಇಲ್ಲದೆ ಹೋದರೆ ನಮಗೆ ಯಾವ ಕಾರ್ಯದಲ್ಲಿಯೂ ಗೆಲವು ದೊರೆಯದು. ಆದರೆ ಈ ನೆನೆವು ನಿಷ್ಕಾಮವಿರಬೇಕು. ಫಲವನ್ನು ಬಯಸಿ ಭಗವಂತನನ್ನು ಭಜಿಸಿದರೆ ನಾವು ಬಯಸಿ ದುದು ನಮಗೆ ಸಿಗಬಹುದು. ಆದರೆ ಫಲಾಪೇಕ್ಷೆಯನ್ನುಳಿದು ಆತನನ್ನು ನೆನೆದರೆ ಅವನೆ ನಮ್ಮ ಕೈವಶವಾಗುವನು. ಕಾಮ ನೆಯು ಫಲವನ್ನಿತ್ತರೆ ನಿಷ್ಕಾಮ ಸೇವೆಯು ಭಗವಂತನನ್ನೇ ಪಡೆಯುವುದು. ಫಲ-ಭಗವಂತರಲ್ಲಿ ಮಹದಂತರವಿಲ್ಲವೇ?

ನಿಷ್ಕಾಮ ಭಕ್ತನ ಮನಸ್ಸಿನಲ್ಲುದಿಸಿದ ಬಯಕೆಗಳನ್ನೆಲ್ಲ ಭಗವಂತನು ತಾನಾಗಿಯೆ ನೆರವೇರಿಸುವನು. ಅದರ ವಿಷಯವಾಗಿ ಭಕ್ತನು ಆಲೋಚಿಸುವ ಕಾರಣವೇ ಇರುವದಿಲ್ಲ.

೧೨. **ಶ್ರವಣ-ಕೀರ್ತನಗಳು :** ಭಕ್ತನ ಮನಸ್ಸು ಪರಮಾತ್ಮನಲ್ಲಿ ಸ್ಥಿರವಾಗಿ ನಿಲ್ಲಲು ಶ್ರವಣವೂ ಒಳ್ಳೇ ಸಹಕಾರಿಯಾಗುವದು. ಆದುದರಿಂದ ಪರಮಾರ್ಥ ಪ್ರಾಪ್ತಿಯಲ್ಲಿ ಶ್ರವಣಕ್ಕೊಂದು ಉನ್ನತ ಸ್ಥಲವಿರುವುದು. ಶ್ರವಣವು ಭಕ್ತಿಯ ಜನನಿ, ವಿರಕ್ತಿಯ ಜನ್ಮಭೂಮಿ. ಶ್ರವಣವು ಅಂತರಂಗವನ್ನು ಶುದ್ಧೀಕರಿಸಿ, ನಿಶ್ಚಯವನ್ನು ನೆಲೆಗೊಳಿಸುವದು. ಶ್ರವಣದಿಂದ ಅಹಂಕಾರವು ಅಳಿದು, ಅಂತಃಶಾಂತಿಯು ಜನಿಸುವುದು. ಅದು ಸಂದೇಹಗಳನ್ನೆಲ್ಲ ನಿವಾರಿಸಿ, ವಿಘ್ನಗಳನ್ನು ಇಲ್ಲದಂತೆ ಮಾಡುವುದ. ಶ್ರವಣದಿಂದ ಮನಸ್ಸು ನಮ್ಮ ಅಧೀನದಲ್ಲಿ ನಿಂತು, ಅದಕ್ಕೆ ಭಗವಂತನನ್ನು ಕಾಣುವ ಹಸಿವು ಉಂಟಾಗುವುದು. ನಿಯಮಿತ ಶ್ರವಣವು ನಮ್ಮನ್ನು ನಮ್ಮ ಗುರಿಯೆಡೆಗೆ ಒಯ್ಯದಿರದು. ಪ್ರತಿದಿನ ನಾವು ಅನ್ನ-ನೀರುಗಳನ್ನು ತಪ್ಪದೆ ಸೇವಿಸುವಂತೆ, ಶ್ರವಣವನ್ನು ಎಡೆಬಿಡದೆ ಮಾಡಲೇಬೇಕು.

ಶ್ರವಣದಂತೆ ಕೀರ್ತನವೂ ಪರಮಾರ್ಥ ಪ್ರಾಪ್ತಿಗೆ ಅವಶ್ಯವಾದ ಒಂದು ಸಾಧನವು. ಆದರೆ ನಿಜವಾದ ಕೀರ್ತನಕ್ಕೆ ಬೇಕಾದ ಸಲಕರಣೆಗಳ ಪರಿಜ್ಞಾನವು ಮಾತ್ರ ನಮಗೆ ಸರಿಯಾಗಿರಬೇಕು. ನಿಜವಾದ ಕೀರ್ತನದಲ್ಲಿ ಸುಂದರಿಯರ ಬಣ್ಣನೆಗೆ ಎಡೆಯಿರಕೂಡದು. ಯಾಕಂದರೆ ಅದರಿಂದ ಕೇಳುವವರ ಹಾಗು ಹೇಳುವವರ ಮನಸ್ಸಿನಲ್ಲಿ ಕಾಮವಿಕಾರವು ಬಲಿತು, ಅದರಿಂದ ಪರಮಾತ್ಮನ ಧ್ಯಾನವಾಗುವದು ಹೇಗೆ ತಾನೆ ಸಾಧ್ಯ? ಅದರ ಬದಲು. ಭಗಂತವನಲ್ಲಿ ಮನಸ್ಸನ್ನಿಟ್ಟ ಭಕ್ತನು

ತನ್ನ ಕೀರ್ತನೆಯಲ್ಲಿ ಆಧ್ಯಾತ್ಮ - ಆನಂದವನ್ನು ಸೂರೆಮಾಡಿ, ಕೇಳುವವರನ್ನು ಅದರಲ್ಲಿ ತಲ್ಲೀನ ಮಾಡುವನು. ಅವನಿಗೆ ಸುತ್ತಲಿನ ಜನರ ಮರೆವಾಗುವುದು. ಅವನು ನಿಃಶಂಕನಾಗಿ, ಲಜ್ಜೆಯನ್ನು ತೊರೆದು, ಭಾವಪರವಶನಾಗಿ ಕುಣಿಯುತ್ತಿರಲು, ಅವನ ಕೀರ್ತನದಲ್ಲಿ ಗುಪ್ತನಾದ ಪರಮಾತ್ಮನು ಪ್ರಕಟನಾಗುವನು. ಈ ಮೇರೆಗೆ ಯಾವನ ಹತ್ತಿರ ಭಗವಂತನ ಚಿರನಿವಾಸವಿರುವದೋ ಅಂಥವನು ಉಸುರುವುದು ಪರಮಾತ್ಮನ ಶಬ್ದಗಳಲ್ಲದೇ ಮತ್ತೇನು ?

೧೩. **ಭಗವಂತನ ಧ್ಯಾನ :** ಶ್ರವಣ - ಕೀರ್ತನೆಗಳು ಹೊರಗಣ ಸಾಧನಗಳಾದರೆ ಧ್ಯಾನವು ಒಳಗಿನದು. ಶ್ರೀ ಸಮರ್ಥರು ಈ ಧ್ಯಾನದ ರೀತಿಯನ್ನು ಕೆಳಗಿನಂತೆ ಉಸುರುವರು. ಸಾಧಕನು ಏಕಾಂತದಲ್ಲಿ ಪರಮಾತ್ಮನನ್ನು ನೆನೆಯಲ್ಕು ಮೊದಲುಮಾಡಿದಾಗ ಅವನ ಮನಸ್ಸಿನಲ್ಲಿ ತರತರದ ಕಲ್ಪನೆಗಳು ಮೊಳೆತು ಆತನ ಯೋಗವನ್ನು ಕೆಡಿಸುವವು. ಇದು ಸಾಧಕರೆಲ್ಲರ ಅನುಭವದ ವಿಷಯು. ಅವನ್ನಲ್ಲಗಳೆದು ಮನಸ್ಸನ್ನು ನಿರ್ವಿಕಲ್ಪ ಮಾಡಲು ಶ್ರೀ ರಾಮದಾಸರು ಕೆಳಗಿನ ಹಂಚಿಕೆಯನ್ನು ಸೂಚಿಸಿರುವರು :— ಕಲ್ಪನೆಯು ನಮ್ಮ ಮನಸ್ಸಿನಲ್ಲಿಯ ಒಂದು ಪ್ರಬಲ ವಿಕಾರವು. ಆದರೆ ಒಂದು ಜಿಂಕೆಯ ಸಹಾಯದಿಂದ ಇನ್ನೊಂದನ್ನು ಹಿಡಿಯಲು ಬರುವಂತೆ, ಒಂದು ಕಲ್ಪನೆಯ ಮುಖಾಂತರ ಇನ್ನೊಂದನ್ನು ಹೊಡೆದೋಡಿಸಬರುವುದು. ನಿರ್ವಿಕಲ್ಪನಾದ ಭಗವಂತನ ವಿಷಯವಾಗಿಯೆ ನಾವು ಕಲ್ಪನೆಯನ್ನು ಮಾಡತೊಡಗಿದೆವೆಂದರೆ, ಮಿಕ್ಕ ಕಲ್ಪನೆಗಳು ತಾವೇ ಸಹಜವಾಗಿ ಅಳಿದು ಹೋಗುವವು.

ಆತ್ಮನ ನೆನೆವು ನಿಜವಾದ ಧ್ಯಾನವು. ಅನಾತ್ಮನ—ಆತ್ಮನನ್ನುಳಿದು ಬೇರೆ ವಸ್ತುಗಳ ನೆನೆವು ಸುಳ್ಳು ಧ್ಯಾನವು. ಮೂರ್ತಿಧ್ಯಾನವು ಧ್ಯಾನವಲ್ಲ. ಧ್ಯಾನವು ನಡೆದಾಗ ಮನಸ್ಸಿನಲ್ಲಿ ವಿಕಲ್ಪಗಳು ಹುಟ್ಟಬಾರದು. ಧ್ಯಾನ-ಧ್ಯೇಯಗಳಲ್ಲಿ ಅನನ್ಯತೆಯು ಮೂಡಿತೆಂದರೆ ಧ್ಯಾನದ ಪರಿಸಮಾಪ್ತಿಯಾಗುವುದು. ಇದು ಅನುಭವದ ವಿಷಯು. ಇದರಲ್ಲಿಯ ಪ್ರಮಾಣ-ಅಪ್ರಮಾಣ ಸಂಗತಿಗಳನ್ನರಿಯದ ಜನಸಾಮಾನ್ಯರು ಅಲ್ಲದ ಮಾತನ್ನೆತ್ತಿ ಸಲ್ಲದ ಬೊಬ್ಬಾಟವನ್ನು ಮಾಡುವರು. ಸಾಧಕರು ಮಾತ್ರ ಇದಕ್ಕೆ ಸೊಪ್ಪು ಹಾಕದೆ, ಮಾನಸ ಪೂಜೆಯಲ್ಲಿಯೂ ಪ್ರತ್ಯಕ್ಷ ದರ್ಶನದಲ್ಲಿಯೂ ಮಹದಂತರವಿದೆಯೆಂಬುದನ್ನರಿತು ನಿಜವಾದ ಧ್ಯಾನವ ದಾರಿಯನ್ನೇ ಶೋಧಿಸಬೇಕು.

೧೪. **ಸಾಧಕನು :** ಇನ್ನು ಸಾಧಕರಾರೆಂಬುದನ್ನು ಶ್ರೀ ರಾಮದಾಸರಿಂದ ಅರಿತುಕೊಳ್ಳುವಾ. ವಿನೀತಭಾವದಿಂದ ಸದ್ಗುರುವಿಗೆ ಶರಣುಹೋಗಿ ಅವನಿಂದ ಆತ್ಮಜ್ಞಾನದ ರಹಸ್ಯವನ್ನರಿತವನು ಸಾಧಕನು. ಐಹಿಕ ಬಂಧನಗಳೆಲ್ಲವೂ ಕಡಿದು ಬಿದ್ದರೂ, ಅವನು ಸಂದೇಹ ನಿವೃತ್ತಿಗಾಗಿ ಸಾಧನದ ಪರಿಶ್ರಮವನ್ನು ಮಾಡುವನು. ಸಾಧಕನು ಅಹಂಕಾರವನ್ನು ತೊರೆದು ಆತ್ಮನಲ್ಲಿ ಮನಸ್ಸನ್ನು ನಿಲ್ಲಿಸುವನು. ಹಾಳಾದ ಆತ್ಮಜ್ಞಾನದ ಪರಂಪರೆಯನ್ನಿವನು ಉದ್ಧರಿಸಲೆಳಸುವನು— ಯತ್ನಿಸುವನು. ಎಲ್ಲ ದುಷ್ಕರ್ಮಗಳನ್ನಲ್ಲಗಳೆದು, ಸತ್ಕರ್ಮಗಳನ್ನು ಸೇವಿಸಿ, ಇವನು ಸ್ವರೂಪದಲ್ಲಿ ಮುಳುಗಲು ಹೆಣಗುವನು. ಸಾಮಾನ್ಯ ಜನರು ಕಾಣದ್ದನ್ನಿವನು ಕಾಣುವನು, ಅವರ ಮನ-ಬುದ್ಧಿಗಳಿಗೆ ನಿಲುಕದುದನ್ನಿವನು ಅನುಭವದಿಂದರಿಯುವನು. ಈ ಮೇರೆಗೆ ಉನ್ಮನೀ ಅವಸ್ಥೆಯಲ್ಲಿ ತನ್ನ ನಿಜ ಸ್ವರೂಪವನ್ನು

ನಿರಂತರವಾಗಿ ಸಾಕ್ಷಾತ್ಕರಿಸಿ ತನ್ನ ಜನ್ಮಮರಣದ ಬಂಧವನ್ನು ಹರಿದೊಗೆಯುವನು.

ಇಂಥ ಸಾಧಕನು ಭಗವಂತನ ಸಖನು. ಇವನಲ್ಲಿ ಪರಮಾತ್ಮನ ವಿಷಯವಾಗಿ ಸಖ್ಯ ಭಕ್ತಿಯು ನೆಲೆಸಿರುವುದು. ಇವನು ಪರಮಾತ್ಮನಿಗೆ ಪ್ರಿಯವಾಗುವ ರೀತಿಯಲ್ಲಿ ವರ್ತಿಸುವನು. ಸಂಸಾರಚಿಂತೆಯನ್ನು ತೊರೆದು ಇವನು ಸದೈವ ಭಗವಂತನನ್ನೆಯೆ ನೆನೆಸುವನು. ದೇವರ ಸಖ್ಯಕ್ಕಾಗಿ ಇವನು ತನ್ನ ಪ್ರೀತಿಯ ಆಪ್ತರನ್ನು—ಎಲ್ಲ ಸೌಖ್ಯವನ್ನು—ಪ್ರಸಂಗ ಬಂದರೆ ತನ್ನ ಪ್ರಾಣವನ್ನು ತೊರೆಯಲು ಕೂಡ ಸಿದ್ಧನಿರುವನು. ಪರಮಾತ್ಮನ ಸಖ್ಯಕ್ಕಾಗಿ ಎಲ್ಲವೂ ಅಳಿದರೂ ಅಡ್ಡಿಯಿಲ್ಲ—ಎಂಬುದು ಆತನ ಭಾವನೆ. ಈ ರೀತಿ ಪರಮಾತ್ಮನನ್ನು ಅನನ್ಯ ಭಾವದಿಂದ ಪ್ರೀತಿಸುವ ಭಕ್ತನ ಕಲ್ಯಾಣವನ್ನು ಮಾಡುವದಕ್ಕಾಗಿ ಭಗವಂತನೇ ತುಂಬಾ ಆತುರನಾಗುವನು. ಭಗವಂತನ ಕರುಣವು ನಮ್ಮ ಭಕ್ತಿಯನ್ನವಲಂಬಿಸಿದೆ. ನಾವು ಆಡಿದಂತೆ ಪ್ರತಿಧ್ವನಿಯು ನುಡಿಯುವುದಲ್ಲವೇ ? ಮೋಡಗಳು ಚಾತಕನ ಚುಂಚಿನಲ್ಲಿ ಹನಿಗಳನ್ನು ಉದುರಿಸದಿದ್ದರೂ ಚಾತಕನ ಹಂಬಲವು ಚಲಿಸುವುದಿಲ್ಲ. ಚಕೋರನಿಗೆ ಸುಧೆಯನ್ನೆರಚಲು ಚಂದ್ರಮನು ಸಕಾಲಕ್ಕೆ ಮೂಡದಿದ್ದರೂ ಚಾತಕನ ಅನನ್ಯಶರಣತೆಯೇನು ಅಳಿಯುವದಿಲ್ಲ. ನಮ್ಮ ಭಕ್ತಿಯೂ ಇದೇ ವೇರಿಗೆ ಅಚಲವಾದುದಿರಬೇಕು, ನಿಜವಾದುದಿರಬೇಕು. ಕೆಲವು ಮಾತುಗಳು ನಮ್ಮ ಮನಸ್ಸಿನಂತೆ ಒದಗದಿದ್ದರೂ ನಾವದಕ್ಕಾಗಿ ದೇವನನ್ನು ದೂಷಿಸಬಾರದು. ನಾವು ಯಾವಾಗಲೂ ಅವನ ಇಚ್ಛೆಯಂತೆ ನಡೆಯಲು ಕಲಿಯಬೇಕು. ಅಂದರೆ ಅವನೂ ಸಹಜವಾಗಿ ನಮ್ಮನ್ನು ಕರುಣಿಸದಿರನು.

ಆತ್ಮನಿವೇದನ ಭಕ್ತಿಯು ಇಂಥ ಸಾಧಕನೇರುವ ಕೊನೆಯ ಮೆಟ್ಟಿಲು. ಇದರಲ್ಲಿ ಪರಮಾತ್ಮನಿಗೆ ಭಕ್ತನ ಸರ್ವಸ್ವದ ಆತ್ಯಂತಿಕ ಅರ್ಪಣವು ಅಡಕವಾಗಿದೆ. ಈ ನೆಲೆಯನ್ನು ಮುಟ್ಟಿದ ಭಕ್ತವರ್ಯರು ತೀರ ವಿರಲ. ಭಕ್ತನಾರು ದೇವನಾರು ಎಂದರಿಯುವುದು ಆತ್ಮನಿವೇದನವು. ಇದರಿಂದ ಜೀವ-ಶಿವರ ಸ್ವರೂಪ ಸಾಕ್ಷಾತ್ಕಾರವಾಗುವುದು. ಪರಮಾತ್ಮನನ್ನು ಸಾಕ್ಷಾತ್ಕರಿಸಿದ ಭಕ್ತನು ಅವನೊಡನೆ ಒಂದಾಗಿ ದೇವಭಕ್ತರೆಂಬ ಭೇದವು ಅಳಿಯುವುದು. "ವಿಭಕ್ತನಲ್ಲದವನು—ದೇವನಿಂದ ಭಿನ್ನನಲ್ಲದವನೆಂದೇ ಅವನಿಗೆ 'ಭಕ್ತ'ನೆಂಬ ಅಭಿದಾನವು..... ಈ ಭಾವವು (ಭಕ್ತಿಯು) ಮೊಳೆತವನಲ್ಲಿ ಪರಮಾತ್ಮನು ತನ್ನ ನಿಜ ಸ್ವರೂಪದಲ್ಲಿ ಹೊಳೆಯತೊಡಗುವನು."

೧೫. **ಮುಕ್ತಿ ಚತುಷ್ಟಯ:** ಮುಕ್ತಿಯು ನಾಲ್ಕು ವಿಧವೆಂದು ಶ್ರೀ ರಾಮದಾಸರ ಅಭಿಪ್ರಾಯ. ಮೊದಲಿನದು ಸಲೋಕತೆ—ಅಂದರೆ ದೇಹಪತನದ ನಂತರ ದೇವಲೋಕದಲ್ಲಿ ವಾಸವಾಗಿರುವುದು. ಸಮೀಪತೆಯು ಎರಡನೆಯದು. ಆಗ ಭಕ್ತನು ದೇವನ ತೀರ ಸಮೀಪದಲ್ಲಿ ಇರುವನು. ಭಕ್ತನು ಪರಮಾತ್ಮನ ರೂಪವನ್ನು ಹೊಂದಿದನೆಂದು, ಅವನು ಸರೂಪತೆಯೆಂಬ ಮೂರನೆಯ ಮುಕ್ತಿಯನ್ನು ಪಡೆಯುವ. ಆದರೆ ಇವುಗಳಿಗೆ ಕೊನೆಯಿದೆ. ಪುಣ್ಯಕ್ಷಯವಾದೊಡನೆ ಈ ಮುಕ್ತಿ ಸುಖವನ್ನನುಭವಿಸುವ ಭಕ್ತನು ಮರಳಿ ಪುನರ್ಜನ್ಮವನ್ನು ತಾಳುವನು. ಆದುದರಿಂದ ನಾಲ್ಕನೆಯದಾದ ಸಾಯುಜ್ಯ ಮುಕ್ತಿಯೇ ನಿಜವಾದ ಮುಕ್ತಿಯು. ಈ ಸಾಯುಜ್ಯವನ್ನು ಪಡೆದಜೀವನು ಪರಮಾತ್ಮನಲ್ಲಿ ತಾದಾತ್ಮ್ಯ ಹೊಂದಿರುವನು.

ಆದರೆ ಜೀವನ್ಮುಕ್ತನಾದ ಸಂತನು ಈ ನಾಲ್ಕು ವಿಧವಾದ

ಮುಕ್ತಿಯನ್ನು ಲೆಕ್ಕಿಸುವುದಿಲ್ಲ. ಜೀವಿಸಿರುವಾಗಲೇ ಮುಕ್ತಿ ಸುಖವನ್ನನುಭವಿಸುತ್ತಿದ್ದುದರಿಂದ ಅವನು ಜೀವನ್ಮುಕ್ತನು. ಆತ್ಮದರ್ಶನವಾದುದರಿಂದ ಅವನು ಪರಮಾರ್ಥದ ಗುರಿಯನ್ನು ಮುಟ್ಟುವನು. ಸಾಕ್ಷಾತ್ಕಾರದಿಂದ ಸಂದೇಹಗಳೆಲ್ಲ ಅಳಿದ ಇಂಥವನಿಗೆ ದೇಹವು ಇದ್ದರೂ ಅಷ್ಟೇ, ಬಿದ್ದರೂ ಅಷ್ಟೇ. ಇವನ ದೇಹವು ಬಿದ್ದ ಸ್ಥಲವು ಪಾವನವಾಗುವುದು. ದೇಹ ಪತನಕ್ಕೆ ಪುಣ್ಯ ನದೀತೀರವು ಒಳಿತು, ದಕ್ಷಿಣಾಯನಕ್ಕಿಂತ ಉತ್ತರಾಯಣವು ಮೇಲು, ಧೂಮ್ರ ಮಾರ್ಗಕ್ಕಿಂತ ಅರ್ಚಿ ಮಾರ್ಗವು ಶ್ರೇಷ್ಠವು ಎಂಬ ಭ್ರಾಂತ ವಿಚಾರಗಳು ಇಂಥ ಸತ್ಪುರುಷನನ್ನು ಸೋಂಕುವುದಿಲ್ಲ ಜೀವನ್ಮುಕ್ತನ ದೇಹವು ಕಾಡಿನಲ್ಲಿ ಬೀಳಲಿ, ಇಲ್ಲವೆ ಸ್ಮಶಾನದಲ್ಲಿ ಬೀಳಲಿ, ಅವನ ಹಿರಿತನಕ್ಕವರಿಂದ ಕೇಡು ಉಂಟಾಗುವುದಿಲ್ಲ. ಅವನು ಸದೈವಧನ್ಯನೇ ಸರಿ.

೧೬. **ಮುಕ್ತಿಯೂ ಸಾಧನವೂ :** ಈ ಮೇರೆಗೆ ಜೀವನ್ಮುಕ್ತಿಯನ್ನನುಭವಿಸುವ ಸಿದ್ಧನು ಸಾಧನವನ್ನು ಮಾಡಬೇಕೋ ಹೇಗೆಂಬ ಬಗ್ಗೆ ಶ್ರೀ ರಾಮದಾಸರು ಎರಡು ಭಿನ್ನ ಭಿನ್ನ ಅಭಿಪ್ರಾಯಗಳನ್ನು ಉಸುರಿರುವರು. ಒಂದೆಡೆಯಲ್ಲಿ “ ಸಾಧನವು ದೇಹದ ಧರ್ಮವು. ದೇಹವಿರುವ ವರೆಗೆ ಸಾಧನವನ್ನು ಬಿಡಕೂಡದು. ಸಾಧನವನ್ನು ತೊರೆದು ಮುಕ್ತಿಸುಖವನ್ನುಣ್ಣಬಯಸುವುದು, ಅಹಂಕಾರ-ಆಲಸ್ಯಗಳಿಗೆ ಔತಣ ಕೊಟ್ಟಂತೆಯೇ ಸರಿ. ತನ್ನ ಕತ್ತಿಯಿಂದ ತನ್ನ ಕತ್ತನ್ನು ಕತ್ತರಿಸಿದಂತೆಯೇ ಸರಿ ಇಂಥವನು ಮುಕ್ತನಿದ್ದರೂ ಒಂದು ಬಗೆಯಿಂದ ಬದ್ಧನು. ಜನರು ಸಾಧಕನೆಂದು ಹೀಯಾಳಿಸಬಹುದೆಂದು ಸಾಧನವನ್ನು ಬಿಡುವುದು ಜಾಣತನದ ಮಾತಲ್ಲ” ಎಂದು ರಾಮದಾಸರು ಹೇಳಿರುವರು.

ಇನ್ನೊಂದೆಡೆ ಅವರು, "ಸಾಧ್ಯವು ದೊರೆತ ಮೇ
ಸಾಧನವು ಏತಕ್ಕೆ? ಅರಸೊತ್ತಿಗೆ ಬಂದ ಮೇಲೆ ಮ
ಕುಂಬಾರನಿಗೆ ಕತ್ತೆಗಳ ಗೊಡವೆಯೇಕೆ?.... ವೇದಗ
ವೇದಾಜ್ಞೆಯನ್ನು ಪಾಲಿಸುವುದೆಂತು? ಶಾಸ್ತ್ರಗಳೇ ಶಾ
ಗಳನ್ನು ಅಭ್ಯಸಿಸುವುದೆಂತು? ತೀರ್ಥಗಳು ತೀರ್ಥಗಳ
ಹೋಗಬೇಕೆ? ಸುಧೆಯೇ ಸುಧೆಯನ್ನುಂಟಬಹುದೇ
ಅನಂತವೇ ಇನ್ನೊಂದು ಅನಂತವನ್ನು ಅರಿಯಲರಿಯದು..
ಧ್ಯೇಯವೇ ಧ್ಯಾನವನ್ನು ಮಾಡುವುದೆಂತು? ಉನ್ಮನ್ಯ
ವಸ್ಥೆಯು ಮನಸ್ಸನ್ನು ಅರಿಯುವುದೆಂತು? ಅದೇ ಮೇರೆ
ಸಿದ್ಧಿಯನ್ನು ಪಡೆದವನು ಸಾಧನವನ್ನಾಚರಿಸುವುದೆಂತು
ಅವನಿಗದರಿಂದ ಪ್ರಯೋಜನವೇನು?" ಎಂದು ಕೇಳಿರುವರು

೧೬. ಸಾಕ್ಷಾತ್ಕಾರದ ಕುರುಹುಗಳು : ಇನ್ನು
ಪರಮಾತ್ಮನ ಸಾಕ್ಷಾತ್ಕಾರದ ಕುರುಹೇನು? ತಮಗೆ ಭಗ
ವಂತನ ದರ್ಶನವಾಯಿತೆಂದು ತಿಳಿಯುವ ಬಗೆ ಏನು? ಈ
ಪ್ರಶ್ನೆಗಳಿಗೆ ಶ್ರೀ ರಾಮದಾಸರ ಉತ್ತರವು ಕೆಳಗೆ ಕಾಣಿಸಿ
ದಂತಿದೆ:— "ಪರಮಾತ್ಮನನ್ನು ಕಂಡ ಅನುಭಾವಿಗೆ ತನ್ನ
ಪಾಪಗಳ ಖಂಡನವಾಯಿತೆಂದೆನಿಸುವುದು; ಜನ್ಮಮರಣಗಳ
ಚಕ್ರವು ಅಳಿಯಿತೆಂದು ಹೊಳೆಯುವುದು; ಆತ್ಮ-ಪರಮಾತ್ಮ
ರಲ್ಲಿಯ ವಿಭಕ್ತಿಯು ಮಾಯವಾಗುವುದು. ಅವನಿಗೆ ವಿಶ್ವ
ಕರ್ತನ ಪೂರ್ಣ ಪರಿಚಯವಾಗಿ, ಅವನ ಕರ್ತೃತ್ವಶಕ್ತಿಯ
ಸ್ವರೂಪವೂ ತಿಳಿದುಬರುವುದು. ಈ ವಿಷಯದಲ್ಲಿ ಸಂದೇಹ
ವುಳಿಯಿತೆಂದರೆ ಮಾಡಿದ ಪರಮಾರ್ಥವೆಲ್ಲ ವ್ಯರ್ಥವಾಯಿ
ತೆನ್ನಲು ಅಡ್ಡಿಯಿಲ್ಲ. ಇದೇ ಆತ್ಮಸಾಕ್ಷಾತ್ಕಾರದ ರಹಸ್ಯವು."
ಈ ಅನುಭಾವವು, ನೀರಿನಿಂದ ತುಂಬಿದ ಕಾಸಾರದಲ್ಲಿಟ್ಟ

ಗುಪ್ತಧನದಂತೆ ಜನರು ಕಾಣುವುದು ಬರೀ ನೀರನ್ನು. ಅವರೀ ಭಾಂಡಾರವನ್ನು ಸಾರುವುದು ಸಾಧ್ಯವಿಲ್ಲ. ಯೋಗಿಯು ದಿವ್ಯ ದೃಷ್ಟಿಗೆ ಕಾಣುವ ಈ ಧನದ ಬೆಲೆಯು ಜನಸಾಮಾನ್ಯರಿಗೆ ತಿಳಿಯುವುದೆಂತು ? ಕಟ್ಟಿಗೆಗಳನ್ನು ಹೊರುವವನಿಗೆ— ಕುಳ್ಳನ್ನಾರಿಸುವವನಿಗೆ, ಬೆಲೆಯುಳ್ಳ ರತ್ನಗಳ ಹಿರಿಮೆಯು ಗೊತ್ತಾಗುವುದೆಂತು? ಈ ಗುಪ್ತಧನವನ್ನು ಕಾಣಲು ಸದ್ಗುರುಗಳ ಉಪದೇಶಾಂಜನವನ್ನು ಸೇವಿಸುವುದು ಅತ್ಯಗತ್ಯ.

ಈ ಅನುಭಾವದಲ್ಲಿ ಪರಸ್ಪರ ವಿರೋಧವು ಇದ್ದಂತೆ ಕಾಣುವುದು. ಆದರೆ ಈ ವಿರೋಧವು ತೋರಿಕೆಯದು— ನಿಜವಾದುದಲ್ಲ. " ಇವನನ್ನು ಅರಿತೊಡನೆ ಮರವು ಮುಸುಕುವುದು. ಆದರೆ ಮರೆತೊಡನೆ ಇವನು ಅರಿವಿನೆಡೆ ಮೈದಾಳುವನು. ಕಾಣಹೋದರೆ ಕಾಣನು. ಕಾಣದೆಯೇ ಎಲ್ಲೆಲ್ಲಿಯೂ ಕಾಣುವನು. ಹಿಡಿಯಹೋದರೆ ದೊರೆಯನು; ಬಿಡಲು ಯತ್ನಿಸಿದರೆ ದೂರ ಸಾರನು. ಆದರೆ ಈ ವಿರೋಧವನ್ನು ಅನುಭಾವಿಯೇ ಬಲ್ಲ. " ಎಂದು ರಾಮದಾಸರು ಉಸುರುವರು.

ಭಾವದಂತೆ ದೇವನೆಂಬುದನ್ನು ನಾವು ಮರೆಯಕೂಡದು. ದೇವನಿಗೆ ನಮ್ಮ ಅಂತರಂಗದ ಪೂರ್ಣ ಪರಿಚಯವಿರುವುದು. ನಾವವನನ್ನು ವಂಚಿಸಬಯಸಿದರೆ ಅವನೇ ಮೊದಲು ನಮ್ಮನ್ನು ವಂಚಿಸುವನು. ಭಕ್ತಿಯ ನೆಲೆಯನ್ನು ಕಂಡು, ಭಕ್ತರನ್ನವನು ಸಂತೈಸುವನು. ನಮ್ಮ ಯೋಗ್ಯತೆಯಂತೆ ಅವನು ನಮ್ಮನು ಕರುಣಿಸುವನು.

ಈ ಅನುಭಾವ ಭಾಂಡಾರಕ್ಕೆ ಕಳ್ಳರ ಭಯವಿಲ್ಲ. ರಾಜರ ಅಂಜಿಕೆಯಿಲ್ಲ. ಇದನ್ನು ಬೆಂಕಿಯು ಸುಡಲರಿಯದು, ಹಿಂಸ್ರ ಪಶುಗಳು ನುಂಗಲರಿಯವು; ಇದು ಬೆಳೆಯುವದಿಲ್ಲ, ಅಳಿ

ಯುವದಿಲ್ಲ; ಇದನ್ನು ಪಡೆಯಲು ಯೋಗಿಜನರ ಅಪ್ಪಣೆಯು ಮೇರೆಗೆ ಆಕಾಶದಲ್ಲಿಯ ಗುಪ್ತಪಥದಿಂದ ಸಾಗಬೇಕಾಗುವದು; ಇದನ್ನು ಪಡೆದ ಸಾಮಾನ್ಯನು ಪರಮಾರ್ಥ ಪ್ರದೇಶದ ಅರಸನು. ಇದನ್ನು ದೊರಕಿಸದ ಅರಸರು ಹಾಳು ಭಿಕ್ಷುಕರು.

ಇನ್ನೊಂದೆಡೆಯಲ್ಲಿ ರಾಮದಾಸರು ಈ ಆತ್ಯಂತಿಕ ಸತ್ಯವನ್ನು ಶ್ರೀ ಭಗವದ್ಗೀತಾಕಾರರಂತೆ ಬಣ್ಣಿಸಿರುವರು. "ಇದನ್ನು ಶಸ್ತ್ರಗಳು ಕಡಿಯಲರಿಯುವು; ಅಗ್ನಿಯು ದಹಿಸಲರಿಯದು; ನೀರು ತೋಯಿಸಲರಿಯದು; ಮತ್ತು ಗಾಳಿಯು ಹಾರಿಸಲರಿಯದು.... ಇದು ಎಲ್ಲರಿಂದ ಭಿನ್ನವಿದ್ದರೂ—ಎಲ್ಲೆಲ್ಲಿಯೂ -ಎಲ್ಲ ಕಾಲದಲ್ಲಿಯೂ ಇರುವುದು. ಇಡೀ ವಿಶ್ವವನ್ನು ತುಂಬಿದ್ದರೂ ಇದು ಅತಿ ಸೂಕ್ಷ್ಮವಾದುದಿರುವುದು."

೧೭. ವಿಮಲ ಬ್ರಹ್ಮವು : ಬ್ರಹ್ಮನ ವರ್ಣನೆಗಾಗಿ ರಾಮದಾಸರು ಇಡೀ ದಶಕವನ್ನೇ ಉಪಯೋಗಿಸಿರುವರು. "ಬ್ರಹ್ಮವು ಆಕಾಶಕ್ಕಿಂತ ವಿಮಲವಾದುದು. ಇದು ವಿಶಾಲವಿದ್ದಂತೆ ಅರೂಪವಾದುದು. ಇದು ಅನಂತ ಬ್ರಹ್ಮಾಂಡಗಳ ಮೇಲೆಯೂ ಕೆಳಗೆಯೂ ಇದ್ದುದರಿಂದ ಇಡೀ ವಿಶ್ವದಲ್ಲಿ ಬ್ರಹ್ಮನಿಲ್ಲದ ಸ್ಥಲವು ಅಣುಮಾತ್ರವೂ ದೊರೆಯದು. ಜಲವು ಜಲಚರಗಳನ್ನೆಲ್ಲ ವ್ಯಾಪಿಸುವಂತೆ, ಇದು ಸೃಷ್ಟಿಯನ್ನೆಲ್ಲ ವ್ಯಾಪಿಸಿರುವದು. ಅದು ನಮ್ಮ ತೀರ ನೆರೆಯಲ್ಲಿದ್ದರೂ ನಮಗೆ ಮರೆಯಾಗಿರುವುದು. ನಾವು ಅದರಲ್ಲಿದ್ದರೂ ಅದನ್ನರಿಯೆವು. ಇದು ವಜ್ರವನ್ನು ಭೇದಿಸಿಯೂ ತನ್ನ ಮಾರ್ದವವನ್ನು ಬಿಡುವುದಿಲ್ಲ.... ನಾವು ನೋಡಿದೆಡೆಯಲ್ಲಿ ಅದು ನಮ್ಮ ಕಣ್ಣೆದುರು ಕುಣಿಯುವುದು. ನಾವು ನೋಡುವುದೇ ಅದರಲ್ಲಿ. ಒಳಹೊರಗೆ ಎಲ್ಲೆಲ್ಲಿಯೂ ಅದು ತುಂಬಿ ತುಳುಕುವದು. ಇಲ್ಲ

ವೆಂದೆನಿಸಿದಲ್ಲಿ ಅದು ಒಮ್ಮೆಲೆ ನಿಲ್ಲುವುದು. ನಾವು ಯಾವುದೇ ಪದಾರ್ಥವನ್ನು ಕಂಡರೂ ಅದು ಅದರ ಈಚೆಗೆ ಕಾಣದಿರದು. ಅನುಭಾವಿಯೇ ಈ ರಹಸ್ಯವನ್ನು ಬಲ್ಲ. ಗ್ರಂಥಗಳನ್ನೋದು ವಾಗ, ಇದು ಅಕ್ಷರಗಳಲ್ಲಿ ಕಾಣತೊಡಗುವದು. ಇಷ್ಟೇ ಅಲ್ಲ, ಅದು ನಮ್ಮ ಕಂಗಳನ್ನು ಸೇರಿ, ಅಲ್ಲಿ ವ್ಮೃದುವಾಗಿ ನಿಲ್ಲುವು ದುಂಟು. ಅದು ಕಿವಿಯಿಂದ ಕೇಳುವಲ್ಲುಂಟು; ಮನಸ್ಸಿನಿಂದ ಆಲೋಚಿಸುವಲ್ಲುಂಟು. ಮನಸ್ಸನ್ನದು ಎಲ್ಲೆಡೆಯಿಂದ ಆವರಿ ಸಿರುವುದು. ನಾವು ದಾರಿಯಿಂದ ನಡೆದಿರುವಾಗಲೂ ಹೆಜ್ಜೆ-ಹೆಜ್ಜೆಗೆ ಕಾಣುವುದು. ಕೈಯಿಂದ ನಾವು ವಸ್ತುವೊಂದನ್ನು ಕೊಳ್ಳುವಾಗ ಅದು ನಮ್ಮಿರ್ವರ ನಡುವೆ ಬರುವುದುಂಟು. ಇಂಥ ಪರಬ್ರಹ್ಮವು ಜ್ಞಾನದೃಷ್ಟಿಗೆ ಗೋಚರವು— ಚರ್ಮ ದೃಷ್ಟಿಗೆ ಅಗೋಚರವು. ನಾನುಸುರಿದುದನ್ನು ಅನುಭಾವಿ ಗಳೇ ಬಲ್ಲರೆ”ಂದು ರಾಮದಾಸರು ಹೇಳಿರುವರು.

ಈ ಪರಬ್ರಹ್ಮದ ಉತ್ಕೃಷ್ಟವಾದ ವರ್ಣನೆಯನ್ನು ನಾವು ಇನ್ನೊಂದು ಸಮಾಸದಲ್ಲಿ ಕಾಣಬಹುದು. “ನಾವು ಪರ ಬ್ರಹ್ಮವನ್ನು ಹಿಡಿಯಹೋದರೆ ಹಿಡಿಯಲು ಬಾರದು; ಬಿಡ ಹೋದರೆ ಬಿಡಲು ಬಾರದು. ಪರಬ್ರಹ್ಮವು ಎಲ್ಲೆಲ್ಲಿಯೂ ನೆಲೆಸಿರುವುದು. ನಾವದಕ್ಕೆ ವಿಮುಖವಾದೆವೆಂದರೆ ಅದು ನಮಗೆ ಸಂಮುಖವಾಗುವುದು. ಆದುದರಿಂದ ಅದಕ್ಕೆ ಬೆನ್ನು ತಿರುವಿ ಹೋಗುವುದೇ ಅಸಾಧ್ಯ.... ಮನುಜನು ಹೋದಲ್ಲೆಲ್ಲ ಆಕಾಶವು ಅವನನ್ನು ಸುತ್ತಿರುವುದಿಲ್ಲವೇ ? ಆಕಾಶದ ಮೇರೆ ಯನ್ನು ಮೀರಿ ಯಾರಾದರೂ ಸಾಗಬಹುದೇ ? ಅದೇ ಮೇರೆಗೆ ನಾವು ಎಲ್ಲಿ ಹೋದರೂ ಬ್ರಹ್ಮನಲ್ಲಿಯೇ ನಿಲ್ಲುವೆವು. ಪರಬ್ರಹ್ಮವನ್ನು ಕಾಣಲು ನಾವು ಎಲ್ಲಿಯೂ ಹೋಗಬೇಕಾ

ಗಿಲ್ಲ. ನಾವಿದ್ದಲ್ಲಿಯೇ ಅದರ ನಿಲವು. ನಾವು ನಿಂತಿರಲಿ, ಅಲೆಯುತಿರಲಿ, ಬ್ರಹ್ಮವು ಸಂಗಡ ಇದ್ದೇ ತೀರುವುದು. ಅಂತರಾಳದಲ್ಲಿ ಹಾರುವ ಹಕ್ಕಿಯನ್ನು ಆಕಾಶವು ಸುತ್ತುವಂತೆ, ನಮ್ಮನ್ನದು ಸುತ್ತುವುದು. ಬ್ರಹ್ಮದ ವಿಮಲತ್ವಕ್ಕೆ ಎಣೆಯಿಲ್ಲ. ಅದು ಎಲ್ಲವನ್ನು ಮುಟ್ಟಿ ಎಲ್ಲರಲ್ಲಿ ನೆಲೆಸಿರುವುದು. ಇದು ಮಳೆಯಿಂದ ತೋಯುವುದಿಲ್ಲ, ರಾಡಿಯಿಂದ ಹೊಲಸಾಗುವುದಿಲ್ಲ, ನೆರೆಯಿಂದ ಸೆಳೆಯಲ್ಪಡುವುದಿಲ್ಲ. ಅದೇ ನೇರೆಗೆ ಪರಬ್ರಹ್ಮವು ನಮ್ಮ ಮುಂದಿದೆ, ಹಿಂದಿದೆ; ಎಡಕ್ಕಿದೆ, ಬಲಕ್ಕಿದೆ; ಮೇಲಿದೆ, ಕೆಳಗಿದೆ. ಅದು ಸಂತರ ಶಾಂತಿಸದನವು, ಸತ್ಪುರುಷರ ವಿಶ್ರಾಮಧಾಮವು, ದೇವತೆಗಳ ನಿವಾಸಸ್ಥಲವು. ಇದು ಸ್ಥೂಲವಿಲ್ಲ, ಸೂಕ್ಷ್ಮವಿಲ್ಲ ಅದಕ್ಕೆ ಸರಿಹೋಲುವ ವಸ್ತುವೇ ಜಗತ್ತಿನಲ್ಲಿಲ್ಲ. ಜ್ಞಾನದೃಷ್ಟಿಯಿಂದಿದನ್ನು ಕಾಣದೆ ಸಮಾಧಾನವು ದೊರೆಯಲರಿಯದು ” ಎಂದು ರಾಮದಾಸರ ಹೇಳಿಕೆ.

(ಈ) ಕರ್ಮಯೋಗಿ

೧೮. **ಮೊದಲು ಮಾತು :** ಶ್ರೀ ರಾಮದಾಸರಂಥ ಕರ್ಮಯೋಗಿಗಳು ರಾಮದಾಸರೇ. ಪರಮಾರ್ಥದ ಅನುಭವವನ್ನು ಪೂರ್ತಿಯಾಗಿ ಪಡೆದು ಪ್ರಪಂಚದಲ್ಲಿ ಸರಿಯಾಗಿ ವರ್ತಿಸುವ ಭಾಗ್ಯವು ಸ್ವಲ್ಪ ಸತ್ಪುರುಷರಿಗೆ ಲಭಿಸುವದು. ಇಂಥವರಲ್ಲಿ ಶ್ರೀ ಸಮರ್ಥರು ಪ್ರಮುಖರೆನ್ನಲು ಪ್ರತ್ಯವಾಯವಿಲ್ಲ. ಶ್ರೀ ದಾಸಬೋಧದಲ್ಲಿ ಆಧ್ಯಾತ್ಮಿಕ ಕರ್ಮಯೋಗಿಯ ವರ್ತನವನ್ನು ಕುರಿತು ಅವರು ಪ್ರಕಟಿಸಿದ ಅಭಿಪ್ರಾಯವು ಸ್ವಂತ ಅನುಭವದ ತಳಹದಿಯ ಮೇಲೆ ನಿಂತಿರುವುದು. ಅದು

ಅನ್ಯರಿಗೂ ಬೋಧಪ್ರದವಾಗದಿರದು. ಶ್ರೀ ರಾಮದಾಸರ ಆದರ್ಶಪುರುಷನು ಚತುರ ಕರ್ಮಯೋಗಿಯು. ಅವರ ಅನೇಕ ಗುಣಗಳನ್ನವರು ಒಳ್ಳೆಯ ಮಾರ್ಮಿಕರೀತಿಯಿಂದ ವಿಶದ ಗೊಳಿಸಿರುವರು.

೧೯. **ಬಹುರೂಪಿಯು** : ಶ್ರೀ ಸಮರ್ಥರ ಮಹಂತನು ಆದರ್ಶಪುರುಷನು—ಅಂತರಾತ್ಮನಂತೆ ವಿಶಾಲನು, ವಿಖ್ಯಾತನು. ಇಡೀ ಭೂಮಂಡಲದಲ್ಲಿ ಇವನ ಅಧಿಕಾರವು ನಡೆಯುವುದು. ಇವನು ಕಿರಿಯರಿಗೆ-ಹಿರಿಯರಿಗೆ ಎಲ್ಲರಿಗೆ ಪರಿಚಿತನು. ಇವನು ಒಂದೇ ಬಗೆಯ ಉಡುಪನ್ನು ಧರಿಸನು. ಯಾಕಂದರೆ ಇವನ ಭೂಷಣವು ವೇಷವಲ್ಲ, ಕೀರ್ತಿಯು. ಇವನೊಂದು ಅರೆಗಳಿಗೆ ವ್ಯರ್ಥ ಕಳೆಯನು. ಪ್ರತಿನಿತ್ಯ ಪರಿಚಿತರನ್ನು ತೊರೆದು, ಹೊಸ ಜನರನ್ನು ಸೇರುವನು. ಜನರಿವನನ್ನು ಎಷ್ಟು ಪರಿಕಿಸಿದರೂ ಇವನಲ್ಲಿ ಬಯಕೆಯೆಂಬುದು ಕಾಣಬರದು. ಇವನು ಒಬ್ಬರನ್ನೂ ಬಹುಕಾಲ ನೋಡನು; ಒಬ್ಬರೊಡನೆ ಬಹುಕಾಲ ಮಾತನಾಡನು. ಬಹುಕಾಲ ಒಂದೆಡೆಯಲ್ಲಿ ನಿಲ್ಲನು. ತಾನು ಹೋಗುವ ಸ್ಥಳವನ್ನು ಹೇಳನು, ಹೇಳಿದಲ್ಲಿ ಹೋಗನು. ತನ್ನ ನಿಜವಾದ ಪರಿಸ್ಥಿತಿಯನ್ನು ತಿಳಿಯಗೊಡನು, ಅಂತರಂಗವನ್ನು ಅರಿಯಗೊಡನು.... ಇವನು ಅಖಂಡವಾಗಿ ಏಕಾಂತವನ್ನು ಸೇವಿಸುವ. ಪರಮಾತ್ಮನನ್ನು ನೆನಿಸುತ್ತ, ಪರಮಾತ್ಮನ ಸೇವೆಯಲ್ಲಿ ತನ್ನ ಕಾಲವನ್ನು ಕಳೆಯುವ. ಉತ್ತಮ ಗುಣಗಳನ್ನು ಕಲಿತು, ಜನರಿಗವನ್ನು ಕಲಿಸುವ. ಗುಪ್ತರೀತಿಯಿಂದ ಅನೇಕ ಜನರನ್ನು ಕಲೆಹಾಕುವ. ಇವನಾವಾಗಲೂ ಕೆಲಸದಲ್ಲಿ ತೊಡಗಿರುವ, ಜನರನ್ನು ಭಗವಂತನ ಸೇವೆಯಲ್ಲಿ ತೊಡಗಿಸುವ; ಇದನ್ನು ಕಂಡು ಜನರು ಅವನಿಗೆ ಶರಣು ಹೋಗಿ,

ಅವನ ಅಪ್ಪಣೆಯನ್ನು ಕೇಳತೊಡಗುವರು. ಮೊದಲು ಪರಿಶ್ರಮವನ್ನು ಮಾಡದೆ ಯಾವ ಮಹಾಕಾರ್ಯವೂ ಕೈಗೂಡದು........ ಅನೇಕ ಜನರನ್ನು ಪರಿಕಿಸಿ, ಅವರ ಅಧಿಕಾರವನ್ನರಿತು, ತರುವಾಯ ಅವರನ್ನು ಸಮೀಪ ಇಲ್ಲವೆ ದೂರ ಇರಿಸಬೇಕು. ಅಧಿಕಾರವನ್ನರಿತು ಕಾರ್ಯವನ್ನು ಹೇಳಬೇಕು. ಉದ್ಯೋಗವನ್ನು ಕಂಡು ಜನರನ್ನು ನಂಬಬೇಕು. ಆದರೂ ತಮ್ಮ ವಿಶೇಷವನ್ನೇನಾದರೂ ಕಾಯ್ದುಕೊಳ್ಳಲು ಮರೆಯಬಾರದು. ಇವು ಅನುಭವದ ನುಡಿಗಳು— ಮಾಡಿ ನುಡಿದವುಗಳು. ನಿಮಗೆ ಸರಿದೋರಿದರೆ ಸ್ವೀಕರಿಸಿರಿ, ಇಲ್ಲದಿದ್ದರೆ ಬಿಡಿರಿ. ಈ ಮೇರೆಗೆ ಮಹಂತರು ಮಹಂತರನ್ನು ನಿರ್ಮಿಸಿ, ಅವರಲ್ಲಿ ಚಾತುರ್ಯವನ್ನು ಬೀರಿ ಅವರನ್ನು ನಾನಾ ದೇಶಗಳಲ್ಲಿ ಹರಡಬೇಕೆಂದು ರಾಮದಾಸರು ಹೇಳಿರುವರು.

೨೦. ಉತ್ತಮ ಗುಣಗಳು : 'ಉತ್ತಮ ಪುರುಷ'ನಲ್ಲಿ ಕೆಳಗಿನ ಉತ್ತಮ ಗುಣಗಳಿರಬೇಕೆಂದು ರಾಮದಾಸರು ಹೇಳಿರುವರು. " ಜನರು ನಿಂದಿಸಿದರೂ ಇವನು ನೊಂದುಕೊಳ್ಳಬಾರದು. ಜನರಿಗಾಗಿ ಕಷ್ಟಗಳನ್ನು ಸಹಿಸಿ ಕೀರ್ತಿಯನ್ನು ಪಡೆಯಬೇಕು. ಯಾಕೆಂದರೆ ಕೀರ್ತಿಯಿದ್ದಲ್ಲಿ ಸುಖವಿಲ್ಲ, ಸುಖವಿದ್ದಲ್ಲಿ ಕೀರ್ತಿಯಿಲ್ಲ. ಉತ್ತಮ ಪುರುಷನು ಎರಡನೆಯವರನ್ನು ನೋಯಿಸಬಾರದು. ತನ್ನದಿರಲಿ, ಅನ್ಯರದಿರಲಿ, ಕೆಲಸವನ್ನು ಮಾಡಿಯೇ ತೀರಬೇಕು, ಎಂದೂ ತಪ್ಪಿಸಬಾರದು. ತನ್ನಂತೆ ಪರರನ್ನು ಬಗೆದು ಅವರನ್ನಾವಾಗಲೂ ಸವಿನುಡಿಯಿಂದ ಸಂತೈಸಬೇಕು. ಬಿತ್ತಿದ್ದು ಬೆಳೆಯುವಂತೆ ನುಡಿಯಂತೆ ಮಾರ್ನುಡಿಯು ಬರುವುದು. ಹೀಗಿರಲು ಬಿರುನುಡಿಗಳನ್ನೇಕೆ ಉಪಯೋಗಿಸುವುದು ? ಕೃತಿಯಿಲ್ಲದ ಬರಿ

ಮಾತು ನಾಯಿಯ ವಮನದಂತೆ ಹೇಯವು. ಆದುದರಿಂದ ಮೇಲ್ಕಾಣಿಸಿದ ಉತ್ತಮ ಗುಣಗಳನ್ನು ಸೇವಿಸಿ ಅಂತರಂಗ ದಿಂದ ಪರಮಾತ್ಮನನ್ನು ಭಜಿಸಬೇಕು. ಅಂದರೆ ಜನರು ಇವರನ್ನರಸುತ್ತ ಬರುವರು.

"ಇಷ್ಟಾದ ಮೇಲೆ ಈ ಮಹಾಪುರುಷನು ಸಮುದಾಯ ವನ್ನು ಕಟ್ಟಬೇಕು. ಶಿಷ್ಯರಿಂದೇನನ್ನೂ ಅಪೇಕ್ಷಿಸಬಾರದು. ಅವರಿಗೆ ಬರೀ ಭಗವದ್ಭಜನವನ್ನು ಮಾಡಲು ಉಪದೇಶಿಸ ಬೇಕು. ಇನ್ನು ಈ ಸಮುದಾಯಕ್ಕೆ ಎರಡು ಮಾತುಗಳು ಅವಶ್ಯ. ಪ್ರಬೋಧಶಕ್ತಿಯು ಒಂದು, ನುಡಿಯಂತೆ ನಡೆಯು ಇನ್ನೊಂದು. ಮೇಲಿನ ಉತ್ತಮಗುಣವುಳ್ಳವನಲ್ಲಿ ಈ ಶಕ್ತಿಯು ನೆಲೆಸಿರುವುದು. ನುಡಿದಂತೆ ನಡೆದವನ, ಮಾಡಿ ಆಡಿದವನ ಮಾತನ್ನೆಯೆ ಜನರು ಕೇಳುವರು. ಈ ಮೇರೆಗೆ ಜನರನ್ನು ನಿಧಾನವಾಗಿ ಕಲಿಸಿ, ಅವರಿಗೆ ಪರಮಾರ್ಥದ ಗುರಿಯೆಡೆಗೆ ಒಯ್ಯಬೇಕು.

"ಈ ಮಹಂತನಿಗೆ ಸದೈವ ಪ್ರಯತ್ನದಲ್ಲಿ ಪ್ರೀತಿ. ಕಠಿಣ ಪ್ರಸಂಗದಲ್ಲವನು ಧೈರ್ಯದಿಂದ ಸೇರಬಲ್ಲ. ಅಲ್ಲಿ ಚಾತುರ್ಯ ದಿಂದ ವರ್ತಿಸಬಲ್ಲ. ಮತ್ತು ಇದನ್ನೆಲ್ಲ ಮಾಡಿಯೂ ತಾನು ಅಲಿಪ್ತನಾಗಿರಬಲ್ಲ. ಇವನಿರುವುದು ಅಂತರಾತ್ಮನಂತೆ. ಮಾಡು ವುದು ಎಲ್ಲವನು, ನೋಡುವಡೆ ಎಲ್ಲಿಲ್ಲ. ಚಂದನವು ಸವೆಯುವ ವರೆಗೆ ಅದರ ಕಂಪು ಅರಿಯದ ವಿಷಯ. ಅಲ್ಲಿಯ ವರೆಗೆ ಅದೊಂದು ಎಲ್ಲ ಮರಗಳಂತೆ ಸಾಮಾನ್ಯ ಮರ. ಅದರಂತೆ ಒಮ್ಮೆ ಜನಕಾರ್ಯದಲ್ಲಿ ಸವೆದ ಮಹಂತನ ಒಳ್ಳೆಯ ಗುಣ ಗಳ ಪರಿಚಯವಾಯಿತೆಂದರೆ, ಪ್ರಪಂಚದಲ್ಲಿ ಜನರೆಲ್ಲರು ಅವ ನನ್ನು ಪ್ರೀತಿಸುವರು. ಜನತಾಜನಾರ್ದನನು ಒಲಿದನೆಂದರೆ

ಅವನಿಗೆ ಆದಾವ ಕೊರತೆ ?

೨೧. ವಿವೇಕ: “ಜನರನ್ನೊಲಿಸಿಕೊಳ್ಳಲು ವಿವೇಕದಿಂದ ವರ್ತಿಸಬೇಕು. ಮಕ್ಕಳಂತೆ ನಡೆದು, ಮಕ್ಕಳಂತೆ ನುಡಿದು, ನಿಧಾನವಾಗಿ ಜನಸಾಮಾನ್ಯರಿಗೆ ಬುದ್ಧಿಯನ್ನು ಕಲಿಸಬೇಕು. ಅನ್ಯರ ಮನಸ್ಸನ್ನರಿಯುವುದು ಮುಖ್ಯ. ಅದರಲ್ಲಿಯೇ ಚಾತುರ್ಯ. ಮರುಳರಿಗೆ ಮರುಳರೆನ್ನಬಾರದು, ಚುಚ್ಚು ಮಾತುಗಳನ್ನು ಉಸುರಬಾರದು. ಅಂದರೆ ಎಲ್ಲೆಲ್ಲಿಯೂ ದಿಗ್ವಿಜಯವು ಕಟ್ಟಿಟ್ಟದ್ದು.

“ಹೀಗಾಯಿತೆಂದರೆ ವಿವಿಧ ದೇಶದ ಜನರು ಅವನೆಡೆಗೆ ಬರುವರು. ಅವರೆಲ್ಲರ ಅಂತರಂಗವನ್ನರಿತು ಅದರಲ್ಲಿ ವಿವೇಕವನ್ನು ತುಂಬಬೇಕು. ಅವರ ತೊಂದರೆಗಳನ್ನು ಕೇಳಿಕೊಂಡು ಅವರಿಗೆ ಸರಿಯಾದ ದಾರಿಯನ್ನು ತೋರಿಸಬೇಕು. ಮಾಡಿ ಮಾಡಿಬೇಕು, ಹೇಳಿ ಹೇಳಿಸಬೇಕು. ಸಾಧ್ಯವಿದ್ದದನ್ನು ತಾನು ಮಾಡಿ ಉಳಿದುದನ್ನು ಜನರಿಂದ ಮಾಡಿಸಬೇಕು. ಈ ಜಗತ್ತಿನ ಗುದ್ದಾಟದಲ್ಲಿ ಅಶಕ್ತರಿಗೆ ಕೇಳುವವರಾರು ಆದುದರಿಂದ ಜನರಿಗೆ ಬುದ್ಧಿಯ ಮಾತುಗಳನ್ನು ಹೇಳಿ ಅವರನ್ನು ಸಮರ್ಥರನ್ನಾಗಿ ಮಾಡಬೇಕು.

೨೨. ರಾಜಕಾರಣ : “ಈ ಮೇರೆಗೆ ಸಮುದಾಯವನ್ನು ಕಟ್ಟಬಯಸುವ ಉದಾಸೀನನಾದ ಜ್ಞಾನಿಯು ಅಖಂಡ ಏಕಾಂತವನ್ನು ಸೇವಿಸಬೇಕು. ಅಲ್ಲಿ ಅವನಿಗೆ ಅನೇಕ ಹಂಚಿಕೆಗಳು ಹೊಳೆಯುವವು; ಜನರ ಮನೋಗತದ ಪರಿಚಯವಾಗುವದು. ಅತಿಪರಿಚಯವು ಅವಜ್ಞೆಯನ್ನುಂಟುಮಾಡುವುದರಿಂದ ಆಲಸ್ಯದಲ್ಲಿ ಒಂದೆಡೆಗೆ ನಿಲ್ಲದೆ ಸದೈವ ಅತ್ತಿತ್ತ

ಅಲೆಯುತ್ತಲಿರಬೇಕು. ಜನರ ಮನಸ್ಸಿನಲ್ಲಿದ್ದುದನ್ನು ಇವನು ಮೊದಲೆ ಅರಿಯಬೇಕು. ಅಂದರೆ ಯಾರೂ ಇವನನ್ನು ಮೋಸಗೊಳಿಸಲರಿಯರು. ತಿಳಿಯಗೊಡದೆ ಮಾಡಿದ ಕೆಲಸವು ಕೂಡಲೆ ಕೈಗೂಡುವುದು. ಅನ್ಯರನ್ನವಲಂಬಿಸಿದವನ ಕೆಲಸವು ಕೆಡದಿರದು. ಆದುದರಿಂದ ತಾನು ಸ್ವತಃ ದುಡಿಯುವವನೇ ಜಾಣನು. ಮುಖ್ಯ ಸೂತ್ರವನ್ನು ತನ್ನ ಕೈಯಲ್ಲಿರಿಸಿ ವಿವರಗಳನ್ನು ಅನ್ಯರಿಗೆ ಒಪ್ಪಿಸಬೇಕು. ಅನೇಕ ಜನರನ್ನು ಒಂದೆಡೆಯಲ್ಲಿ ಕಲೆಹಾಕಬಯಸುವನು ಒಳ್ಳೆಯ ಧೂರ್ತನಿರಬೇಕು. ಅವನು ದುಷ್ಟರಾರೆಂಬುದನ್ನು ಅರಿಯಬೇಕು; ಆದರೆ ಅದನ್ನು ಬಿಚ್ಚಿ ಆಡಬಾರದು. ಅವರಿಗೆ ಶಿಷ್ಟರಿಂದಧಿಕವಾದ ಮಹತ್ವವನ್ನು ಕೊಡಬೇಕು. ಇಂಥ ಮಹಂತನು ಎಲ್ಲಿಯೂ ಕಾಣದಿರಬೇಕು. ಆದರೆ ಜನರು ಮಾತ್ರ ಅಲ್ಲಲ್ಲಿ ಇವನನ್ನು ಕುರಿತು ಆಡುತ್ತಿರಬೇಕು. ಮೂರ್ಖನೆದುರು ಮೂರ್ಖನನ್ನು, ಮರುಳನೆದುರು ಮರುಳನನ್ನು, ಉದ್ಧತನೆದುರು ಉದ್ಧತನನ್ನು ನಿಲ್ಲಿಸಬೇಕು. ಸಮಾನ ಗುಣಧರ್ಮದವರು ಪರಸ್ಪರರನ್ನು ಎದುರಿಸಿದರೆಂದರೆ ಅದೊಂದು ಅದ್ಭುತ ಗುದ್ದಾಟವಾಗುವುದು. ಇದನ್ನೆಲ್ಲ ಮಾಡಿದರೂ ಒಡೆಯನು ಮರೆಯಲ್ಲಿಯೇ ನಿಲ್ಲಬೇಕು.''

೨೩. **ಲೋಕಾಂತ ಏಕಾಂತ** : ಶ್ರೀರಾಮದಾಸರ ಅಭಿಪ್ರಾಯದ ಮೇರೆಗೆ ಮಹಂತನು ಲೋಕಾಂತದಲ್ಲಿ ಕರ್ಮವನ್ನು, ಏಕಾಂತದಲ್ಲಿ ಧ್ಯಾನವನ್ನು— ಎರಡನ್ನೂ ಒಂದಾದ ಮೇಲೆ ಇನ್ನೊಂದು ಈ ರೀತಿ ಸದೈವ ಮಾಡುತ್ತಿರಬೇಕು. ಹೀಗಾಯಿತೆಂದರೆ ಅವನ ಕರ್ಮ ಧ್ಯಾನ ಶಕ್ತಿಗಳೆರಡೂ ಬಲಪಡುವವು. ಕರ್ಮವನ್ನು ಮಾಡಲರಿಯದವನು ಕರ್ಮರಂಗದಲ್ಲಿಳಿಯದೆ, ಶಾಂತರೀತಿಯಿಂದ ಧ್ಯಾನದಲ್ಲಿ ಮಗ್ನನಾಗ

ಬೇಕು. ತನಗೆ ತಾಪ, ಅನ್ಯರಿಗೆ ತಾಪ ಕೊಡುವಂಥ ಕರ್ಮ ದಿಂದೇನು ಪ್ರಯೋಜನ ? ಕರ್ಮವು ಒಳ್ಳೆಯ ಫಲದಂತೆ ಕೆಟ್ಟ ಫಲವನ್ನೂ ಕೊಡುವುದುಂಟು. ಬೇಸರಾದರೆ ಸುಮ್ಮ ನಿರಬೇಕು. ನೀಗದ ಕಾರ್ಯವನ್ನೆತ್ತುವುದೇತಕ್ಕೆ ? ಆತ್ಮನು ವಿಶ್ರಾಂತಿಯ ಸ್ಥಲ. ಅಲ್ಲಿ ಶಾಂತನಾಗಿ ನಿಲ್ಲಬೇಕು. ಕೆಲಸ ವೇನು ನಡೆದೇ ಇದೆ. ನರದೇಹವು ಮಾತ್ರ ಮೇಲಿಂದ ಮೇಲೆ ಬರದ್ದರಿಂದ ಶಾಂತಿ ಪಡೆಯುವದಕ್ಕಿಂತ ಮೇಲಾದುದಾವುದು? ಆದುದರಿಂದ ಕೆಲಕಾಲ ತೀವ್ರ ಕಾರ್ಯ-ಕೆಲಕಾಲ ಪೂರ್ಣ ಶಾಂತಿ, ಈ ಮೇರೆಗೆ ನಾವು ಜೀವನವನ್ನು ಕಳೆಯಬೇಕು.

೨೪. **ಬೇರೆ ಕೆಲವು ಲಕ್ಷಣಗಳು :** ಇಂಥ ಕರ್ಮ-ಯೋಗಿಯು ಎಲ್ಲರಿಗೆ ಪ್ರಿಯನು. ಅವನು ಜಗನ್ಮಿತ್ರನು. ಇವನು ಪ್ರಜ್ವಲಿತವಾದ ಪುಣ್ಯರಾಶಿಯು. ಇವನಿದ್ದಲ್ಲಿ ಕಲಹ ವಿಲ್ಲ. ಮುಂದೊಂದು ಹಿಂದೊಂದು, ಈ ಬಗೆಯ ಕೃತ್ರಿಮ ವರ್ತನವು ಅವನದಲ್ಲ. ಅವನನ್ನು ಕೂಡಲು ಎಲ್ಲರೂ ಆತು ರರು. ಪರೋಪಕಾರವು ಅವನ ನಿತ್ಯದ ಬೇಸಾಯ. ಅನ್ಯರ ದುಃಖದಿಂದವನು ಕುಗ್ಗುವನು ; ಅವರ ಸುಖದಿಂದ ಹಿಗ್ಗು ವನು. ಎಲ್ಲರೂ ಸುಖಿಗಳಾಗಿರಬೇಕೆಂಬುದೇ ಇವನ ಅಂತ ರಂಗದ ಬಯಕೆ. ತಂದೆಯು ಮಕ್ಕಳನ್ನು ಸಮನಾಗಿ ಪ್ರೀತಿ ಸುವಂತೆ, ಇವನದು ಎಲ್ಲರಲ್ಲಿಯೂ ಸಮನಾದ ಪ್ರೀತಿ. ಇವನ ದೇಹಬುದ್ಧಿಯು ಅಳಿದದ್ದರಿಂದ, ನಿಂದೆಯಿಂದಿವನು ನೊಂದಿ ಕೊಳ್ಳನು. ಇವನು ಧೀರನು-ಉದಾರನು-ಗಂಭೀರನು.

ಭಗವದ್ಭಕ್ತಿಯನ್ನು ಬೆಳೆಸುವುದು ಇವನ ಮುಖ್ಯ ಕೆಲಸ. ಇವನು ಜನರಿಂದ ಬೇಡುವುದು ಭಕ್ತಿಯೊಂದನ್ನು. ಇವನದು ಉತ್ಕಟವಾದ ಭಕ್ತಿಯು, ಉತ್ಕಟವಾದ ಜ್ಞಾನವು, ಉತ್ಕಟ

ವಾದ ಚಾತುರ್ಯವು. ಉತ್ಕಟತೆಯೇ ಕೀರ್ತಿಯ ಮೂಲ ವಿದ್ದುದರಿಂದ ಇವನ ಕೀರ್ತಿಯು ದಿಗಂತವನ್ನು ಸೇರುವದು. ಮರಣದ ಪ್ರಸಂಗವು ಎಂದು ಬಂದೀತೆಂಬುದು ತಿಳಿಯದ ಮೂಲಕ ಸದೈವ ಎಚ್ಚರದಿಂದಿರಬೇಕು. ತಮಗೆ ಸಾಧ್ಯ ವಿದ್ದುದನ್ನು ಮಾಡಿ, ಭೂಮಂಡಲವನ್ನು ಭಗವತ್ಕೀರ್ತಿಯಿಂದ ತುಂಬಬೇಕು. ಅನುಕೂಲವಿದ್ದುದನ್ನು ನೆರವೇರಿಸಿ, ಪ್ರತಿ ಕೂಲವನ್ನು ಏಕಾಂತದಲ್ಲಿ ವಿವೇಕದಿಂದ ಅರಿಯಬೇಕು. ವಿವೇ ಕಕ್ಕೆ ತಿಳಿಯದ ವಿಷಯವಾವುದು ? ಏಕಾಂತದಲ್ಲಿ ವಿವೇಕ ವನ್ನೆಚ್ಚರಿಸಿ, ಆತ್ಮಾರಾಮನನ್ನರಿಯಬೇಕು. ಇದಕ್ಕೆ ಮೇಲಾ ದುದಾವುದು ?—ಎಂಬುದು ರಾಮದಾಸರ ಪ್ರಶ್ನೆ.

೨೪. **ಶ್ರೀ ಸಮರ್ಥರ ಆತ್ಮಚರಿತ್ರ :** ಕೊನೆಗೆ ಕರ್ಮ ಯೋಗಿಯ ಜೀವನವನ್ನು ಚಿತ್ರಿಸುವಾಗ ಶ್ರೀ ರಾಮದಾಸರು ತಮ್ಮ ಆತ್ಮಚರಿತ್ರೆಯ ಪರಿಚಯವನ್ನು ಕೆಲಮಟ್ಟಿಗೆ ಮಾಡಿ ಕೊಟ್ಟಿರುವರು. “ ಹಲವರು ತುರುಕರಾದರು ; ಹಲವರು ಫಿರಂಗಿಗಳಾದರು ; ಹಲವರು ನಾಡನುಡಿಯನ್ನು ತೊರೆದು, ಪರರ ಭಾಷೆಯಲ್ಲಿ ಪ್ರವೀಣರಾದರು. ಹೀಗಾಗಿ ಮಹಾರಾಷ್ಟ್ರ ದೇಶವು ಕಿರಿದಾಯಿತು. ರಾಜಕಾರಣದಲ್ಲಿ ಸೇರಿದ ಜನರಿಗೆ ಉಣಲು ಅವಸರವಿಲ್ಲ. ಇಷ್ಟು ಕೆಲಸ. ಯುದ್ಧದಲ್ಲಿ ತೊಡಗಿ ದವರು, ಯುದ್ಧ ಸಹಜವಾದ ಸೊಕ್ಕಿನಿಂದ ಕೊಬ್ಬಿ ಹಗಲಿರುಳು ಅದನ್ನೆಯೆ ಚರ್ಚಿಸುವರು. ವ್ಯಾಪಾರವನ್ನು ಮಾಡುವ ವರ್ತಕ ನಿಗೆ ಹೊಟ್ಟೆಯನ್ನುಳಿದು ಇನ್ನೊಂದು ವಿಷಯವಿಲ್ಲ. ಆಸ್ತಿಕ-ನಾಸ್ತಿಕ ಅನೇಕ ಮತ-ಪಂಥಗಳು ಅಲ್ಲಲ್ಲಿ ಉದಿಸಿರುವವು. ಎಲ್ಲೆಲ್ಲಿಯೂ ಮೋಸಗೊಳಿಸುವ ಸೋಗಿನ ಗುರುಗಳು.... ....ಎಲ್ಲೆಲ್ಲಿಯೂ ಗೊಂದಲವೇ ಗೊಂದಲ. ಜನರೆಲ್ಲ ಬಯಕೆಯ

ಭಕ್ತರು. ಅವರಿಗೆ ಯುಕ್ತ-ಅಯುಕ್ತವು ತಿಳಿಯುವುದೆಂತು? ಅನೇಕರು ಹರಿಕೀರ್ತನೆಯನ್ನು ಕೇಳುವರು. ಆದರೆ ಅನುಭಾವವನ್ನಾದರಿಸುವವರು ವಿರಲ. ಆದುದರಿಂದ ಪ್ರತೀತಿಯು ಆತ್ಮಜ್ಞಾನವು ದುರ್ಲಭವಾಗಿದೆ. ವಿಚಾರವಂತರಿಗೆ ಎಲ್ಲವೂ ಸುಲಭ, ನಿಜ. ಆದರೆ ವಿಚಾರವನ್ನು ಮಾಡುವವರಾರು? ಅರಿತದ್ದನ್ನರುಹಬೇಕಾದರೆ ಸಾವಿರ ಎಡರುಗಳು. ಜನರನ್ನು ಉದ್ಧರಿಸಲು ಮಾಡಿದ ಉಪಾಯಗಳೇ ಅಪಾಯಗಳಾಗಿ ಪರಿಣಮಿಸುವವು. ಆದುದರಿಂದ ಇದು ಚರುಕು ಬುದ್ಧಿಯ ಚತುರನಿಗೇ ಸಾಧ್ಯ. ಈ ಧೂರ್ತನು ಒಂದರಗಳಿಗೆಯನ್ನೂ ವ್ಯರ್ಥವಾಗಿ ಕಳೆಯದೆ, ತನ್ನ ಪ್ರಬೋಧಶಕ್ತಿಯಿಂದ ಅನೇಕರ ಅಂತರಂಗವನ್ನು ಆಕರ್ಷಿಸುವನು. ಅನುಭವದ ನುಡಿಗಳಿಂದ ಮತ-ಮತಾಂತರಗಳನ್ನು ಸದೆಬಡೆದು ಜನರ ರೂಢಿ-ದಾಸ್ಯವನ್ನು ಅಲ್ಲಗಳೆಯುವನು. ಮನಸ್ಸನ್ನು ಮರುಳು ಮಾಡುವ ಕಿರಿನುಡಿಗಳನ್ನಾಡಿ, ಕೂಡಲೆ ಅಲ್ಲಿಂದ ಉದಾಸೀನನಂತೆ ಎದ್ದು ಹೋಗುವ. ಅವು ಜನರಿಗೆ ರುಚಿಸುವುದರಿಂದ ಅವರು ತಮ್ಮ ಹಳೆಯ ಹಾದಿಯನ್ನು ತೊರೆದು ಅವನನ್ನು ಹಿಂಬಾಲಿಸುವರು. ಆದರೆ ಅವನು ಒಂದೆಡೆಯಲ್ಲಿ ಸಿಗುವುದೇ ಅಸಾಧ್ಯ. ವೇಷವು ಹೀನರದು— ಸ್ವರೂಪವು ಭಿಕ್ಷುಕರದು. ಕಾರ್ಯವು ಮಾತ್ರ ಮರೆಯಲ್ಲಿ ಮೆರೆಯುವುದು. ಆವರ ಯಶ-ಕೀರ್ತಿ-ಪ್ರತಾಪಕ್ಕೆ ನೆಲೆಯೇ ಇಲ್ಲ. ಅಲ್ಲಲ್ಲಿ ಜನರಿಗೆ ಭಗವಂತನನ್ನು ಭಜಿಸಲು ಹಚ್ಚಿ, ತಾನಲ್ಲಿಂದ ತಿಳಿಯಗೊಡದೆ ಬೇರೆಡೆಗೆ ಜಾರುವ— ಸಾರುವ....ಕೊಳ್ಳ-ಕಂದರಗಳಲ್ಲಿ ಯಾರೂ ಕಾಣದಂತೆ ವಾಸ ಮಾಡಿ, ಜನತೆಯ ಕಲ್ಯಾಣಕ್ಕಾಗಿ ಹಂಚಿಕೆಗಳನ್ನು ಕಂಡು ಹಿಡಿಯುವ. ಇಕ್ಕಟ್ಟಿನಲ್ಲಿ ವಿಚಿತ್ರ ಜನರಲ್ಲಿ ನಿಂತರೂ ತನ್ನ

ಅಧ್ಯಾತ್ಮಸಾಧನವನ್ನು ನಿಯಮಿತತನದಿಂದ ನೆರವೇರಿಸುವ. ಜಗತ್ತಿನಲ್ಲಿಯ ಜನರೆಲ್ಲರೂ ಈತನನ್ನು ಅರಸುತ್ತ ಬರುವರು. ಈತನ ಉದ್ದೇಶವು ಅರಿಯಲಾಗದಂತೆ ಆಳವಾದುದು. ಜನರನ್ನು ಧರ್ಮ-ರಾಜಕಾರಣದಲ್ಲಿ ತೊಡಗಿಸಿ, ಶಿಷ್ಯರಿಂದ ಶಿಷ್ಯರನ್ನು ಬೆಳೆಯಿಸಿ, ಇವನು ಅಸಂಖ್ಯ ಜನಸಂದಣಿಯನ್ನು ಕೂಡಿಸುವನು. ಇವನ ಶಕ್ತಿಯು ಗುಪ್ತರೂಪದಿಂದ ಹಬ್ಬಿ, ಇವನು ಹೋದಲ್ಲೆಲ್ಲ ಅಗಣಿತ ಅನುಯಾಯಿಗಳು ಇವನನ್ನು ನಂಬುವರು. ಅವರೆಲ್ಲರಿಗೆ ಇವನು ಪರಮಾರ್ಥವನ್ನು ಕಲಿಸುವನು. ಇವನು ಜನರಿಗೆ ತನ್ನ ಅನುಭಾವದ ನೆರವನ್ನೀಯುವುದರಿಂದ, ಅವರು ಭಗವಂತನ ಮಹಿಮೆಯನ್ನು ಕೊಂಡಾಡುವರು. ಈ ಗುರಿಯನ್ನು ಮುಟ್ಟುವುದರಲ್ಲಿಯೇ ಜೀವನದ ಸಾಫಲ್ಯ. ಇದನ್ನೆಲ್ಲ ಕಿರಿದರಲ್ಲಿ ಸಂಕೇತರೂಪದಿಂದ ಹೇಳಿರುವೆ ” ಎಂದು ರಾಮದಾಸರು ಉಸುರಿರುವರು.

(ಉ) ಉಪಸಂಹಾರ

೨೬. ದಾಸಬೋಧವು ದೇವನ ನುಡಿ:— ಶ್ರೀರಾಮದಾಸರ ಉಪದೇಶದ ಚರ್ಚೆಯನ್ನು ಶ್ರೀದಾಸಬೋಧದ ಕೊನೆಯಲ್ಲಿರುವ ಅವರ ಮಾತಿನಿಂದಲೇ ಮುಗಿಸುವಾ.

“ನನ್ನ ಪರಮಾರ್ಥ ಸಾಧನವು ಕೈಗೂಡಿತು. ಜೀವನವು ಸಫಲವಾಯಿತು. ನಿರ್ಗುಣ ಬ್ರಹ್ಮನು ಅಂತರಂಗದಲ್ಲಿ ನೆಲೆಸಿದನು. ಮಾಯೆಯು ಅಳಿಯಿತು. ಸೃಷ್ಟಿಯ ಸ್ವರೂಪವು ತಿಳಿಯಿತು. ಕನಸಿನಲ್ಲಿ ಕಂಡುದೆಲ್ಲ ಜಾಗೃತಿಯಲ್ಲಿ ಹಾರಿಹೋಗಿ ಅನುಭಾವದ ರಹಸ್ಯವು ಅನಿರ್ವಾಚ್ಯವಾಯಿತು. ಜನ್ಮ-ಮರಣದ ಚಕ್ರವು ಕೊನೆಗಂಡಿತು. ಭಕ್ತರ ಅಭಿಮಾನಿಯಾದ ದಾಶರಥಿ ರಾಮನ ದಯದಿಂದ ದಾಸಬೋಧವು ಮುಗಿಯಿತು.

ದಾಸಬೋಧವು ಭಗವಂತನ ಕೃಪೆಯ ಫಲ. ಭಗವಂತನೇ ಎಲ್ಲವನ್ನು ಮಾಡುತ್ತಿರುವಾಗ ಕವಿತ್ವವು ಮಾನವನದೆಂದರಿಯುವುದು ಮರುಳತನವಲ್ಲವೇ? ಆದುದರಿಂದ ಈ ಗ್ರಂಥವನ್ನು ಮನನಪೂರ್ವಕವಾಗಿ ಓದುವವನಿಗೆ ಪರಮಾರ್ಥದ ರಹಸ್ಯವು ತಿಳಿಯದಿರದು.”

(೩) ಸಂಕೀರ್ಣ ಗ್ರಂಥಗಳು

೧. **‘ಹಳೆಯ ದಾಸಬೋಧ’** :— ಶ್ರೀ ರಾಮದಾಸರು ಬರೆದ ‘ಹಳೆಯ ದಾಸಬೋಧ’ವೆಂಬುದು, ಅವರ ‘ದಾಸಬೋಧ’ದ ಮೂಲವು ಇವೆರಡರಲ್ಲಿಯ ಉಪದೇಶದಲ್ಲಿ ಬಹಳೇ ಸಾಮ್ಯವಿದೆ ಎಂಬುದು ಅಭ್ಯಾಸಿಗಳಿಗೆ ಸಹಜವಾಗಿಯೇ ತಿಳಿಯುವಂತಹ ವಿಷಯ. ಇಲ್ಲಿ ‘ಹಳೆಯ ದಾಸಬೋಧ’ ದಲ್ಲಿಯ ಒಂದೆರಡು ಹೊಸ ವಿಷಯಗಳನ್ನು ಚರ್ಚಿಸಲಿರುವೆವು. ‘ದೇಹವು ಅಳಿದರೂ ದೇವರು ಹೊಳೆಯಲಿ’ ಎಂಬ ಭಾವನೆಯಿಂದ ಪರಮಾತ್ಮನನ್ನು ಪಡೆಯಬಯಸುವವನು ಪ್ರಪಂಚದ ಹಿಡಿತವನ್ನು ಸಡಿಲಿಸಬೇಕು, ಎಂದು ರಾಮದಾಸರ ಸ್ಪಷ್ಟವಾದ ಅಭಿಪ್ರಾಯವಿದೆ. ಇದಕ್ಕೆ ಪ್ರತಿಯಾಗಿ ‘ದಾಸಬೋಧ’ದಲ್ಲಿ ‘ಪ್ರಪಂಚ ಪರಮಾರ್ಥಗಳೆರಡನ್ನೂ ಸಾಗಿಸಿದವನೇ ವಿವೇಕಿಯು’ ಎಂದು ರಾಮದಾಸರು ಉಸುರಿದುದನ್ನು ಮರೆಯಕೂಡದು. ಯಾರಿಗೂ ತಿಳಿಯಗೊಡದೆ ಮನಸ್ಸಿನಲ್ಲಿಯೆ ನಡೆಯಿಸಿದ ‘ಶ್ರೀ ರಾಮನಾಮದ ಜಪದಿಂದುಂಟಾದ ಸಾಕ್ಷಾತ್ಕಾರವನ್ನು, ಜನರು ತನಗೆ ಹಿರಿಯನೆಂದೆನಬೇಕೆಂಬ ಬುದ್ಧಿಯಿಂದ ಅನ್ಯರಿಗೆ ಉಸುರಿದರೆ, ಮರಳಿ ಅದು ಆಗದು’ ಎಂದು ರಾಮದಾಸರು ತಮ್ಮ ಅಂತರಾಳದ ಅನುಭವವನ್ನು ಹೇಳಿರುವರು. ಶ್ರೀರಾಮನಿಗೆ ಬೇಡುವದಿದ್ದರೆ, ತಾನು ರಾಮ

ನಾಗಿ, ರಾಮನು ತನ್ನ ದಾಸನಾಗಬೇಕೆಂಬುದನ್ನಷ್ಟೇ ಬೇಡ ಬೇಕು.

೨. **ಮನಸ್ಸಿಗೆ ಬೋಧೆ:**— ಶ್ರೀರಾಮದಾಸರ 'ಮನೋ ಬೋಧ'ದಲ್ಲಿಯ ಎಲ್ಲ ಪದ್ಯಗಳನ್ನು ವಿವರಿಸಲು ಇಲ್ಲಿ ಸ್ಥಲವಿಲ್ಲ. ಆದರೂ ಅವುಗಳಲ್ಲಿಯ ಕೆಲವು ಮಹತ್ವದ ಪದ್ಯಗಳನ್ನು ವಿವರಿಸದಿರಲಾರೆ. ಭಕ್ತಿಪಥವು ಶೀರ ಸುಲಭವಾದುದು. ಪ್ರಭಾತಕಾಲದಲ್ಲಿ ಸಿರಿರಾಮನನ್ನು ನೆನೆಯಬೇಕು; ತನ್ನ ಕೀರ್ತಿಯು ಹಿಂದುಳಿಯುವಂತೆ ಕರ್ಮಗಳನ್ನಾಚರಿಸಬೇಕು. ಸಮರ್ಥನ ಸೇವಕರನ್ನು ಕಡೆಗಣ್ಣಿನಿಂದ ಕಾಣಲು ಕಾಲನೂ ಅಸಮರ್ಥನು. ದೇವರು ಭಕ್ತನ ಅಲ್ಪಮಾತ್ರ ಧೈರ್ಯವನ್ನು ಪರಿಕಿಸುವನು. ಸಂಕಟದಲ್ಲಿ ಸ್ವಾಮಿಯು ಕೂಡಲೆ ಜಿಗಿದು ಭಕ್ತನನ್ನು ಉದ್ಧರಿಸುವ. ದೇವಕಾರ್ಯದಲ್ಲಿ ಕಾಯವನ್ನು ಸವೆಯಿಸುವ ಬಯಕೆಯನ್ನು ಬಲಿಸಬೇಕು. ಶ್ರೀರಾಮನು ಕಲ್ಪವೃಕ್ಷನಿದ್ದುದರಿಂದ ಬೇಡಿದ ಫಲವು ದೊರೆಯುವುದು; ಹೋಗುವಾಗ, ಬರುವಾಗ, ಉಣುವಾಗ, ಉಡುವಾಗ — ಸುಖ ದಲ್ಲಿ ದುಃಖದಲ್ಲಿ ನಾಮಸ್ಮರಣವನ್ನು ಮಾಡುತ್ತಿರಬೇಕು; ಪರಮಾತ್ಮನು ಶ್ವೇತನೂ ಅಲ್ಲ, ಪೀತನೂ ಅಲ್ಲ; ಹಿಡಿಯ ಹೋಗಲು ಅವನು ಕೈಗೆ ಸಿಲುಕನು; ಬ್ರಹ್ಮನನ್ನು ನಿರ್ಮಿಸು ವವನು, ವಿಷ್ಣುವನ್ನು ಪ್ರತಿಪಾಲಿಸುವವನು, ಶಂಕರನನ್ನು ಸಂಹರಿಸುವವನು—ಇವನೇ ಮುಖ್ಯದೇವರು; ಇಂಥ ಈ ದೊಡ್ಡ ದೇವರು ಜಗತ್ತಿನಲ್ಲಿ ಮರೆಯಾಗಿರುವುದರಿಂದ ಗುರುಗಳ ನೆರ ವಿನ ಹೊರತು ಅವನು ಯಾರಿಗೂ ಕಾಣನು. ಇವನು ಆಕಾಶ ದಂತೆ ವಿಶಾಲನು, ವ್ಯಾಪಕನು, ಅಲಿಪ್ತನು, ನಿರ್ವಿಕಾರನು ಈ ಬಗೆಯ ವಿಚಾರಗಳು 'ಮನೋಬೋಧ'ದಲ್ಲಿ ಅಡಕವಾಗಿವೆ.

೩. 'ಪಂಚಸಮಾಸಿ' :— ಶ್ರೀ ಸಮರ್ಥರ 'ಪಂಚ ಸಮಾಸಿ' (ಐದು ಸಮಾಸಗಳು)ಎಂಬ ಗ್ರಂಥದೊಳಗಿಂದ ಇಲ್ಲಿ ಎರಡು ಅವತರಣಿಕೆಗಳನ್ನು ಕೊಳ್ಳಲಾಗಿದೆ. ಮೊದಲನೆಯದ ರಲ್ಲಿ 'ಸ್ವರೂಪಾನುಸಂಧಾನ'ದ ವಿವರಣೆ ಇದೆ. ತನ್ನ ತಾನರಿತುದರಿಂದ, ಮನಸ್ಸು ತನ್ನನ್ನು ಮರೆತು, ಜಿಂಕಿಯಲ್ಲಿ ಕಪ್ಪುರವು ಕರಗುವಂತೆ, ಅದು ಅತ್ಮನಲ್ಲಿ ಬೆರೆಯುವುದು. ಆಗ ಏಕಾಂತ್ರದಲ್ಲಿ ಅದನ್ನೆಯೆ ಅನುಭವಿಸುತ್ತ, ಶಾಂತರೀತಿಯಿಂದ ಕುಳಿತುಕೊಳ್ಳಬೇಕೆಂದೆನಿಸುವುದು. ಸಹಜ ಸಮಾಧಿಯಲ್ಲಿ ಬುದ್ಧಿಯೂ ಲೀನವಾಗುವುದರಿಂದ, ಮಾತು ಬೇಡ-ಉಪಾಧಿ ಬೇಡ ಎಂದೆನಿಸುವದು. ಈ ನೇರೆಗೆ ಅನುಭವವು ಅನುಭವ ದಲ್ಲಿ ಬೆರೆತು, ನಿಷ್ಕಲಂಕನಾದ ಅತ್ಮನು ಹೊಳೆಯುವನು. ಈ ಅವಸ್ಥೆಯೆ ಸ್ವರೂಪಾನುಸಂಧಾನವು ಎರಡನೆಯದರಲ್ಲಿ ಸಮರ್ಥರು ಶ್ರೀರಾಮದರ್ಶನದ ಬಣ್ಣನೆಯನ್ನು ಮಾಡಿರು ವರು. ವೃತ್ತಿಯು ತನ್ನ ಮೂಲಕ್ಕಿಳಿಯಿತೆಂದರೆ ಶ್ರೀರಾಮನು ಕಾಣುವನು. ಮನಸ್ಸು ಮರಳಿ, ಅಳಿಯಿತೆಂದರೆ ಶ್ರೀರಾಮನು ದಾರಿಯಲ್ಲಿ ಹೊಳೆಯುವನು. ಅವನಿಗೆ ಹಿಂದೆ ಮುಂದೆ ಎಲ್ಲೆಲ್ಲಿಯೂ ರಾಮನೇ ಕಾಣುವನು. ಒಮ್ಮೆ ರಾಮನು ನಮ್ಮ ಮುಂದೆ ಬಂದು ನಿಂತನೆಂದರೆ ಅವನೆಂದೂ ಹಿಂದಕ್ಕೆ ಹೊರ ಳುವುದಿಲ್ಲ. ಕಂಗಳನ್ನಿಕ್ಕಿದರೂ ಮಿಕ್ಕಿಯೇ ಮೆರೆಯುವನು. ಮರೆತು ನೋಡಿದರೂ ಶ್ರೀರಾಮನ ದರ್ಶನವು ಆಗಿಯೇ ತೀರು ವುದು. ರಾಮನಿಲ್ಲದ ಅಣುವೂ ಇಲ್ಲ. ಶ್ರೀರಾಮನ ರೂಪವು ಮನಸ್ಸನ್ನು ಸೆಳೆದುದರಿಂದ, ಅದರಲ್ಲಿ ಬದಲಾವಣೆಯಾಯಿತು. ಜಗದೀಶನು ಸತ್ಸಂಗದಿಂದ ದೊರೆಯುವನು. ಈ ಕುರುಹನ್ನು ಎಲ್ಲರಿಗೆ ಅರುಹಿ ರಾಮದಾಸರು ಪರಂಧಾಮಕ್ಕೆ ತೆರಳಿದರು.

೪. 'ಮಾನಸ-ಪಂಚಕ'ವು:— ಶ್ರೀ ಸಮರ್ಥರ 'ಮಾನಸ-ಪಂಚಕ'ದೊಳಗಿಂದ ಸಹ ಎರಡೇ ಅವತರಣಿಕೆಗಳನ್ನು ತೆಗೆದುಕೊಳ್ಳಲಾಗಿದೆ. ಮೊದಲನೆಯುದರಲ್ಲಿ 'ರಾಮರಾಜ್ಯ'ದ ಬಣ್ಣನೆಯಿದೆ. ಅಲ್ಲಿ ಬಹುವೃಷ್ಟಿಯಿಲ್ಲ, ಅನಾವೃಷ್ಟಿಯಿಲ್ಲ; ಚಿಂತೆ-ವ್ಯಾಧಿಗಳ ಲೇಶವಿಲ್ಲ; ಯುದ್ಧ-ಬಡತನದ ಸೋಂಕಿಲ್ಲ; ಸರ್ವತ್ರ ಸತ್ಯದ ಸಾಮ್ರಾಜ್ಯವಿದೆ; ಭೂಮಿಯು ಅದ್ಭುತವಾಗಿ ಬೆಳೆಯುವುದು; ಮರಗಳು ಸದೈವ ಹೂ-ಹಣ್ಣುಗಳಿಂದ ತುಂಬಿರುವವು; ಹಸು-ಹಕ್ಕಿಗಳೆಲ್ಲ ಸಂತಸದಿಂದಲೆಯುವವು; ಕೀರ್ತನ ನಾಮಘೋಷದ ಗರ್ಜನೆಯಿಂದ ನಾಡು ತುಂಬಿರುವುದು; ಅದೇ ರಾಮರಾಜ್ಯವು. ಎರಡನೆಯುದರಲ್ಲಿ, ಧ್ಯಾನವು ರಾಮನದಿರಲಿ, ಶಿವನದಿರಲಿ, ಶಕ್ತಿಯದಿರಲಿ ಇಲ್ಲವೆ ಅನ್ಯ ದೇವತೆಯುದಿರಲಿ, ಇವೆಲ್ಲವು ಸಮಾನವಾದವುಗಳೆಂದು ರಾಮದಾಸರ ಮತ. ಮಾನವನ ಸೇವಕರು ಅನೇಕ ವಿಧದಿಂದ ಸವೆಯುವರು. ದೇವರ ದೇವನನ್ನು ಸೇವಿಸಿ ನಾನು ಧನ್ಯನಾದೆನೆಂದು ರಾಮದಾಸರು ಹೇಳಿರುವರು.

೫. 'ನಿರ್ಗುಣಧ್ಯಾನ' :— ಈ ಪ್ರಕರಣದಲ್ಲಿಯು ಅವತರಣಿಕೆಯೊಂದು ಇಲ್ಲಿ ಬಂದಿದೆ. ಶ್ರವಣ-ಮನನ-ನಿದಿಧ್ಯಾಸದಿಂದ ಸಾಕ್ಷಾತ್ಕಾರವಾಯಿತೆಂದರೆ, ನಂಬುಗೆಯು ಬಲಿತು ಮುಂದೆ ಪರಮಾನಂದವು ದೊರೆಯುವುದು. ಮುಮುಕ್ಷು-ಸಾಧಕ-ಸಿದ್ಧರು, ಜೋಗಿ-ಜಂಗಮ-ಫಕೀರರು ಇದೇ ದಾರಿಯುನ್ನು ತುಳಿದು ಸ್ವರೂಪ ಸ್ಥಿತಿಯುನ್ನು ಮುಟ್ಟಿದರು. ವ್ಯಕ್ತವು ಅಳಿದು, ಅಪಾರವಾದ ಅವ್ಯಕ್ತವು ಉಳಿಯಿತು. ಜ್ಞಾನವಹ್ನಿಯಲ್ಲಿ ಪಂಚಭೂತದ ಕರ್ಪುರವು ಕರಗಿ, ಅನುಹತ ಧ್ವನಿಯೊಂದು ಉಳಿಯಿತು. ಎಲ್ಲರೂ ಐಕ್ಯಸಮಾಧಿಯಲ್ಲಿ

ನಿಂತರು, ಎಂದು ರಾಮದಾಸರು ಸಾರಿರುವರು.

೬. **'ಜನಸ್ವಭಾವ ಗೋಸಾವಿ' :—** ಇದೊಂದು ಶ್ರೀ ಸಮರ್ಥರ ಚಿಕ್ಕ ಪ್ರಕರಣವು. ಇದರೆಡೆಗೆ ಜನರು ಸಾಕಷ್ಟು ಗಮನವನ್ನು ಕೊಟ್ಟಂತೆ ತೋರುವುದಿಲ್ಲ. ಈ ಎಪ್ಪತ್ತು 'ಓವಿ'ಗಳ ಪ್ರಕರಣದಲ್ಲಿಯು 'ಹುಸಿ-ಗುರು'ಗಳ ಬಣ್ಣನೆಯು ಒಳ್ಳೆಯ ಮನಸೋಲುವಂತಹದು. ಇದನ್ನಿಂದಿನ ಗುರುಗಳು ಮನನಮಾಡಿದರೆಂದರೆ ಅವರಿಗೆ ಮೋಸದ ಹೊಸ ಹಂಚಿಕೆಗಳೇ ಹೊಳೆಯುವು. ಅನುಭವವಿಲ್ಲದೆ ಉಸುರುವವರೆಲ್ಲರೂ 'ಹುಸಿಗುರು'ಗಳೆಂದು ರಾಮದಾಸರ ಮತ. ಈ 'ಹುಸಿಯಯ್ಯ'ನವರಲ್ಲಿಯು ಕೆಲವರು ಕಾರಿಕೆಯನ್ನು ಕುಡಿದು, ಹೊಲಸಿನ ಹಿರಿಮೆಯಿಂದಲೆ ಗುರುತ್ವವನ್ನು ಪಡೆಯುವರು; ಕೆಲವರು ಭೂತ-ಬೇತಾಳಗಳನ್ನೆಬ್ಬಿಸುವರು; ತರತರದ ಕಣ್ಮಾಸಕಿನಿಂದ ಕೆಲವರು, ಸ್ಮಶಾನವಾಸದಿಂದ ಕೆಲವರು, ಎಲ್ಲಕಡೆಗೆ ಹಾವುಗಳನ್ನು ಹರಡಿಸಿ ಕೆಲವರು, ನಪುಂಸಕರಿಗೆ ಪುರುಷತ್ವವನ್ನಿತ್ತು ಕೆಲವರು, ಎಲ್ಲ ಧಾತುಗಳಿಂದ ಬೆಳ್ಳಿ-ಬಂಗಾರವನ್ನು ಮಾಡಿ ಕೆಲರು ಗುರುತ್ವವನ್ನು ಪಡೆಯುವರು. ಕೆಲ ಗುರುಗಳು ಇಂದು ಗುಪ್ತರಾಗಿ ನಾಳೆ ಪ್ರಕಟರಾಗುವರು; ಕೆಲರು ಹುಲಿಯನ್ನೇರಿ, ಹಾವಿನ ಚಬಕವನ್ನು ಹಿಡಿಯುವರು; ಕೆಲವರಂತೂ ಅಚೇತನ ಪದಾರ್ಥಗಳನ್ನೆಯೆ ನಡಿಸುವರು; ಕೋಣನಿಂದ ವೇದವನ್ನು ಹೇಳಿಸುವರು. ಇಲ್ಲಿ ರಾಮದಾಸರು ಚಾಂಗದೇವ–ಜ್ಞಾನದೇವರ ಪವಾಡಗಳನ್ನು ಉಲ್ಲೇಖಿಸಿರುವಂತೆ ತೋರುವದು. ಕೆಲ ಗುರುಗಳು ಎರಡನೆಯವರ ಮನಸ್ಸಿನಲ್ಲಿದ್ದುದನ್ನರಿಯುವರು. ಕೆಲರು ಬಂಜೆತನವನ್ನು ನಿಲ್ಲಿಸುವರು. ಕೆಲರಂತೂ ಒಣಕೊರಡನ್ನು ಕೊನರಿಸುವರು;

ಕೆಲರು ಬಸುರಿದ್ದವಳಿಗೆ ಹೆಣ್ಣಾಗುವುದೋ ಗಂಡಾಗುವುದೋ ಹೇಳುವರು. ಕೆಲರು ಆಕಸ್ಮಾತ್ತಾಗಿ ಪೂರ್ವದಿಂದ ಪಶ್ಚಿಮಕ್ಕೆ ತೆರಳುವರು, ನೀರಿನ ಮೇಲೆ ಆಸನವನ್ನು ಹಾಕಿ ಕುಳಿತು ಪಾರತೀರವನ್ನು ಮುಟ್ಟುವರು. ಮತ್ತು ಬೇರೆ ಕೆಲ ಗೋಸಾವಿಗಳಂತೂ ಹುಲಿಯ ರೂಪನ್ನೆಯೆ ತಳೆಯುವರು. ಕೆಲ ಗೋಸಾವಿಗಳು ಉಸುಬಿನಲ್ಲಿ ಹುಗಿದರೂ ಜೀವದಿಂದಿರುವರು, ಮದ್ಯ-ಮಾಂಸಗಳಿಂದ ಮಲ್ಲಿಗೆಗಳನ್ನರಳಿಸುವರು. ಈ ಮೇರೆಗೆ ಅನೇಕ ಪವಾಡಗಳನ್ನು ಮೆರೆಯುವ ಗುರುಗಳಿರುವರು. ಆದರೆ ಅಧ್ಯಾತ್ಮಜ್ಞಾನವನ್ನರಿತವನೇ, ಆತ್ಮಜ್ಞಾನದಲ್ಲಿ ಪಾರಂಗತನಾದವನೇ ನಿಜವಾದ ಸದ್ಗುರುವೆಂದು ಶ್ರೀ ಸಮರ್ಥರ ಅಭಿಪ್ರಾಯ.

೭. **ಕರುಣಾಷ್ಟಕಗಳು:**— ಶ್ರೀರಾಮದಾಸರು ಇಷ್ಟು ಬುದ್ಧಿವಾದಿಗಳಿದ್ದರೂ ಅವರ ಎದೆಯಲ್ಲಿ ಕರುಣದ ಸೆಲೆಯು ಇಲ್ಲದಿರಲಿಲ್ಲ. ಅವರ ಹೃದಯವು ವಜ್ರಕ್ಕಿಂತ ಕಠಿಣವಾದುದೂ ಹೂವಿಗಿಂತ ಮಿದುವಾದುದೂ ಇತ್ತೆಂಬುದು ಅವರ ಅಸಂಖ್ಯ ಕರುಣಾಷ್ಟಕಗಳಿಂದ ಸಿದ್ಧವಾಗುವುದು. ಇಲ್ಲಿ ಅವರ ಎಲ್ಲ ಕರುಣಾಷ್ಟಕಗಳನ್ನು ವಿವರಿಸಲು ಎಡೆಯಿಲ್ಲ. ಆದುದರಿಂದ ಕೆಲ ಮಹತ್ವದ ಅಷ್ಟಕಗಳನ್ನಷ್ಟೆ ವಿವರಿಸಲಾಗಿದೆ. “ಸದೈವ ದೇವರ ಯೋಗವಾಗಲಿ! ಅವನಿಗಾಗಿ ದೇಹದ ವಿಯೋಗವಾಗಲಿ! ಸಂತರ ಸಂಗದಿಂದ ಸಂತಸವಾದರೆ ಅವರ ವಿಯೋಗದಿಂದ ದುಃಖವಾಗುವದು. ಜನರೆಲ್ಲ ನನ್ನನ್ನು ರಾಮನ ದಾಸನೆಂದೆನ್ನುವರು. ಆದರೆ ಅಂತರಂಗದಲ್ಲಿ ಭಕ್ತಿಯ ಲೇಶವೂ ಇಲ್ಲ. ಎನ್ನ ಮನಸ್ಸಿನ್ನೂ ಸಂಸಾರದತ್ತ ಸಾರುವದಯ್ಯ! ಕ್ಷಣಕ್ಷಣಕ್ಕೆ ಆಯುಸ್ಸು ಅಳಿಯುತ್ತಿರಲು, ಕಾಲನು ವಿಷವನ್ನು ಕಾರುತ್ತಿ

ರಲು, ಈ ಜಗತ್ತಿನಲ್ಲಿ ಶ್ರೀರಾಮನನ್ನುಳಿದು ಸಂತಸದ ಸ್ಥಲವೆಲ್ಲಿ? ಮನಸ್ಸಿನಂತೆ, ಸುಂದರ ಹೆಂಡಿರು–ಮಕ್ಕಳು, ಧನ-ಧಾನ್ಯಗಳು, ಉಡುಪು-ತೊಡಪುಗಳು, ಆರೋಗ್ಯ, ಶಾಂತಿ-ಯುಳ್ಳ ಗ್ರಾಮ, ಸಾಧುಗಳ ಸಂಗ ಮತ್ತು ಪರಮಾತ್ಮನ ಪ್ರಾಪ್ತಿ ಇವೆಲ್ಲ ಪೂರ್ವಸುಕೃತದಿಂದಲ್ಲದೆ ದೊರೆಯವು. ನನ್ನಂತರಂಗದ ನಿಶ್ಚಯವು ಪ್ರತಿಕ್ಷಣಕ್ಕೆ ಚಲಿಸುತ್ತಿರುವುದರಿಂದ ಎನ್ನ ಮೇಲೆ ನಿನ್ನ ಕರುಣದ ಸುರಿಮಳೆಯನ್ನು ಕರೆ-ಯಯ್ಯಾ! ನನ್ನಿಂದದಾವ ಮಹಾಕಾರ್ಯವೂ ಆಗಲಿಲ್ಲ. ನಾನು ಭೂಮಿಗೆ ಭಾರನಾಗಿರುವೆ. ಎಲ್ಲವನ್ನು ತೊರೆದು ಒಮ್ಮೆಲೆ ಹೊರಟುಹೋಗಬೇಕೆಂದೆನಿಸುವುದು. ಬೇಸತ್ತಿರುವೆನಯ್ಯಾ ಈ ಉಪಾಧಿಯನ್ನು ಕಂಡು! ವಿಷಯದ ರಾಡಿಯಲ್ಲಿ ಹೊರಳುತ್ತಿದ್ದರೂ ಅದರ ಹೇಸಿಗೆ ಉಂಟಾಗದಾಗಿದೆ. ಶುದ್ಧ ಟೊಣಪನಾಗಿರುವೆನಯ್ಯಾ ನಾನು! ಮನಸ್ಸು ಅದರಿಂದ ಸಂತತವಾಗಿ ಮರುಗುವುದು. ನಿನಗೇನು? ಸಾವಿರ ಸೇವಕರು! ನನ್ನನ್ನೇತಕ್ಕೆ ನೋಡುವೆ?........ನಿನ್ನ ದಾಸನಲ್ಲವೇ ನಾನು? ನನ್ನ ದೈನ್ಯವು ನಿನ್ನ ದೈನ್ಯವು. ಅದು ಜನರಿಗೆ ಕಾಣಬಾರದೆಂದು ನಿನ್ನ ಸಾಮರ್ಥ್ಯದ ಅಲ್ಪಾಂಶವನ್ನು ಬೇಡುತ್ತಿರುವೆ" ಇಂತು ಮುಂತಾಗಿ ರಾಮದಾಸರು ಪರಮಾತ್ಮನನ್ನು ಕರುಳು ಕರಗುವ ಮಾತಿನಲ್ಲಿ ಪ್ರಾರ್ಥಿಸಿರುವರು. ಶ್ರೀ ಸಮರ್ಥರಲ್ಲಿ ಜ್ಞಾನ-ಭಕ್ತಿಗಳ ಮಧುರ ಮಿಲನವು ಹೇಗಾಗಿತ್ತೆಂಬುದೂ ಈ 'ಕರುಣಾಷ್ಟಕ'ಗಳಿಂದ ಕಾಣಬರುವುದು.

೮. **ಐತಿಹಾಸಿಕ ಓಲೆಗಳು:**— ಜ್ಞಾನ-ಭಕ್ತಿಗಳಂತೆ ಶ್ರೀ ಸಮರ್ಥರ ರಾಜಕಾರಣದಲ್ಲಿಯ 'ಕರ್ಮ-ಯೋಗ'ವೂ ಅವರ್ಣನೀಯವಾದುದು. ರಾಮದಾಸರು ರಾಜಕಾರಣ

ಪಟ್ಟಂಗಳಲ್ಲ— ಅವರು ಬರೀ 'ಮೋಕ್ಷ ಗುರುಗಳು,' ಧರ್ಮ ಗುರುಗಳು, ಎಂದು ತಿಳಿದವರು ಅವರ ಈ ಐತಿಹಾಸಿಕ ಬರಹ ಗಳಲ್ಲಿಯ ಅವತರಣಿಕೆಗಳನ್ನು ಪರಿಶೀಲಿಸಬೇಕು. ಅಂದರೆ ತಮ್ಮ ಮತವು ತಪ್ಪಾದುದೆಂಬುದು ಅವರಿಗೆ ಹೊಳೆಯದಿರದು. ಮೊದಲಿನ ಅವತರಣಿಕೆಯು ಶ್ರೀಸಮರ್ಥರ ಸ್ವಂತ ಓಲೆಯು. ಅದರಲ್ಲಿ ಹೇಳವಾಕವೆಂಬ ಕೊಳ್ಳದಿಂದ ಅವರು ಚಾಫಳ ಗ್ರಾಮಕ್ಕೆ ಬಂದ ರೀತಿಯನ್ನೂ, ಅಲ್ಲಿ ಅವರಿಗೆ ಬಂದ ವ್ಯಾಧಿ ಯನ್ನೂ, ರಘುನಾಥಭಟ್ಟರು ಅವರಲ್ಲಿಟ್ಟ ವಿಶ್ವಾಸವನ್ನೂ, ಶಿಷ್ಯರ ಮೇಲಿದ್ದ ಅವರ ನಿಸ್ಸೀಮ ಪ್ರೀತಿಯನ್ನೂ ಕಾಣ ಬಹುದು. ಎರಡನೆಯದು ಮಹಂತರಿಗೆ 'ಸಮುದಾಯ'ವನ್ನು ಮಾಡುವ ರೀತಿಯನ್ನರುಹುವ ಓಲೆಯು. ಬೇರೆಬೇರೆ ಪ್ರಾಂತ ಗಳಲ್ಲಿ ನೆಲಸಿದ ಮಹಂತರಿಗೆ ಶ್ರೀ ಸಮರ್ಥರು ಸಂಪ್ರದಾಯ ವನ್ನು ಬೆಳೆಸಲು ಮಾಡಿದ ಆಜ್ಞೆಯದು. 'ತಮ್ಮ ಬಳಗದವರ ಮಕ್ಕಳನ್ನು ಏಕಾಂತದಲ್ಲಿ ಕಂಡು ಅವರಿಗೆ ಪರಮಾತ್ಮನನ್ನು ಭಜಿಸಲು ಕಲಿಸಬೇಕು. ಅವರಿಗೆ ಜಪವನ್ನು ಉಪದೇಶಿಸಿ ನಮ್ಮೆಡೆ ಕಳುಹಬೇಕು. ಅಂದರೆ ನಾವು ಅವರ ಸಂದೇಹಗಳನ್ನೆಲ್ಲ ಕಳೆಯುವೆವು' ಎಂದು ರಾಮದಾಸರು ತಮ್ಮ ಶಿಷ್ಯರಿಗೆ ಬರೆದಿರು ವರು. ಮೂರನೆಯದರಲ್ಲಿ ಸುಂದರಮಠ ಅಥವಾ ಶಿವಥರ ವೆಂಬ ಕೊಳ್ಳದ ಬಣ್ಣನೆಯಿದೆ. ಅದನ್ನು ರಾಮದಾಸರು ಚೆನ್ನಾಗಿ ಬಣ್ಣಿಸಿರುವರು. ತನ್ನ ಭಕ್ತರಿಗೆ ಸಾಮರ್ಥ್ಯವನ್ನು ನೀಡಿದವನೇ ಸಮರ್ಥ ದೇವರು. ಇಂಥ ದೇವನು ಸುಂದರ ಮಠವಲ್ಲಿ ನೆಲಿಸಿ, ಸನ್ನಿಧಿಯಲ್ಲಿ ತನ್ನ ದಾಸನನ್ನಿರಿಸಿ, ಇಡೀ ಪ್ರಾಂತವನ್ನೆಯೇ ಪಾವನವನ್ನಾಗಿ ಮಾಡಿದನು. ಇದರ ಸೌಂದ ರ್ಯವು ಬಾವಿ, ಕೆರೆ, ಸೆಲೆಗಳಿಂದ ವಿಶೇಷವಾಗಿ ಬೆಳೆದಿರು

ವುದು. ಯಾವ ಗಿರಿ-ಗಹ್ವರಗಳಲ್ಲಿ ಅಲೆಯುವಾಗ ಅಂಜಿಕೆ ಯುಂಟಾಗುವದೋ, ಅಂಥಲ್ಲಿ ರಘುನಾಥನ ವೈಭವವು ಕಂಗೊಳಿಸುವುದು. ಸಮೀಪದಲ್ಲಿಯೆ ರಾಮವರದಾಯಿನಿ ಯಾದ ತಾಯಿಯು ವಾಸಿಸುವಳು, ಎಂದು ರಾಮದಾಸರು ಬರೆದಿರುವರು ನಾಲ್ಕನೆಯದರಲ್ಲಿ ಪ್ರತಾಪಗಡದ ಭವಾನಿ ದೇವಿಯ ಬಣ್ಣನೆಯೂ—ಸ್ತವನವೂ ಇರುವವು ಅಫಝುಲ್ ಖಾನನ ಕಾಟವನ್ನು ಸಹಿಸಲಾರದೆ, ಜಗನ್ಮಾತೆಯು ಪಕ್ಷಿ-ಮಕ್ಕೆ ಸಾರಿ, ರಾಮನಂತೆ ರಾಮದಾಸನಿಗೂ ವರಗಳನ್ನಿತ್ತು, ಅವರಿಗೆ ಸದಾನಂದವನ್ನು ಸಲ್ಲಿಸಿ, ಪರಾಧೀನತೆಯನ್ನು ಕಳೆ ದಳು. 'ಇನ್ನು ತಾಯೀ, ನಿನಗೆ ಬೇಡಿಕೊಳ್ಳುವದೊಂದೇ! ನೀನು ನಿನ್ನರಸನನ್ನು ಪೊರೆದು ಬೆಳೆಸು' ಎಂದು ಸಮರ್ಥರು ದೇವಿಯನ್ನು ಪ್ರಾರ್ಥಿಸಿರುವರು.

ಐದನೆಯದರಲ್ಲಿ ರಾಮದಾಸರು ದೇವ-ಬ್ರಾಹ್ಮಣರ ಸಂರಕ್ಷಣಕ್ಕಾಗಿ, ಶ್ರೀ ಶಿವಾಜಿ ಮಹಾರಾಜರನ್ನು ಅಭಿನಂದಿಸಿರು ವರು. "ನೀವು ನಿಶ್ಚಯದ ಮಹಾಮೇರುಪರ್ವತರು. ಬಹು ಜನರಿಗೆ ನೀವು ಆಧಾರಭೂತರು. ದೇವ-ಬ್ರಾಹ್ಮಣರ ಸಂರಕ್ಷಣಕ್ಕಾಗಿ ನಾರಾಯಣನು ಹೃದಯದಲ್ಲಿ ನಿಂತು, ನಿಮ್ಮನ್ನು ಪ್ರೇರಿಸಿದನು. ಈ ಜಗತ್ತಿನಲ್ಲಿ ಧರ್ಮವನ್ನು ಕಾಪಾಡುವವ ರಾರು? ಧನ್ಯರು ನೀವು! ನಿಮ್ಮ ನಾಡಿನಲ್ಲಿ ನಾವು ನೆಲೆಸಿ ದರೂ ನಮ್ಮ ವಾರ್ತೆಯೂ ಕೂಡ ನಿಮಗಿಲ್ಲ. ರಾಜಕಾರಣದ ಕೆಲಸವು ಬಹಳವಿದ್ದುದರಿಂದ ಮನಸ್ಸು ಅತ್ತಿತ್ತ ತೊಡಗಿರ ಬಹುದು. ಇರಲಿ! ಸುಮ್ಮನೆ ಬರೆದೆ, ಕ್ಷಮಿಸಿರಿ" ಎಂದು ಸಮರ್ಥರು ಶ್ರೀ ಶಿವರಾಯರಿಗೆ ಬರೆದಿರುವರು.

ಆರನೆಯದು ಕ್ಷಾತ್ರಧರ್ಮದ ವಿವರಣೆಯನ್ನೊಳಗೊಂಡಿರು

ವುದು. ಯುದ್ಧವು ಕ್ಷತ್ರಿಯರ ಕೆಲಸ. ಕಡಿಯುತ್ತಿರುವಾಗ ಮಡಿಯುವದು ಅವರ ಕರ್ತವ್ಯ. ಎದೆಗುಂದದೆ ಕತ್ತಿಯನ್ನು ನಡೆಯಿಸಿದರೆ, ಅವರಿಗೆ ಗೆಲವು ಕಟ್ಟಿಟ್ಟದ್ದು. ಪ್ರಸಂಗವನ್ನರಿತು ಕಾದಬೇಕು. ಮರಾಠರನ್ನು ಕಲೆಹಾಕಿ ಮಹಾರಾಷ್ಟ್ರ ಧರ್ಮವನ್ನು ಬೆಳೆಯಿಸಬೇಕು. ಇದನ್ನು ಮಾಡದಿದ್ದರೆ ಪೂರ್ವಜರು ನಗದಿರರು. ದೇವ-ಧರ್ಮಗಳು ಹಾಳಾದುದನ್ನು ಕಾಣುವುದಕ್ಕಿಂತ ಸಾಯುವುದು ಒಳಿತು. ಹೀಗೆ ಕ್ಷಾತ್ರ ಧರ್ಮವು ಸಾರುವುದೆಂದು ರಾಮದಾಸರು ಹೇಳಿರುವರು.

ಒಂಬತ್ತನೆಯದಾದ 'ಆನಂದವನಭುವನ'ವೆಂಬ ಪ್ರಕರಣದಲ್ಲಿ ರಾಮದಾಸರು ಬಾಯಬಲ್ಲಿನಲ್ಲಿಯ ಸೇಂಟ್ ಜಾನ್‌ನಂತೆ ಮುಂದಾಗುವ ಸಂಗತಿಗಳನ್ನು ಉಸುರಿರುವರು. ಮುಖ್ಯ ದೇವರೇ ಎದ್ದಮೇಲೆ ಮಿಕ್ಕವರನ್ನು ಲೆಕ್ಕಿಸುವವರಾರು? ಪಾಪಿಗಳೆಲ್ಲ ಮುಳುಗಿದರು, ಅಭಕ್ತರು ಅಳಿದರು. ಭಾರತವು ಬೆಳೆಯಿತು. ಧರ್ಮವು ಪ್ರಬಲವಾಯಿತು. ದುರುಳನಾದ ಔರಂಗಜೇಬನು ಹಾಳಾದನು. ತುರುಕರ ಸಂಹಾರವಾಯಿತು. ಬಿದ್ದ ಕ್ಷೇತ್ರಗಳು ಮರಳಿ ಎದ್ದವು. ಪಾಖಂಡವು ಹಾರಿತು. ಅಧ್ಯಾತ್ಮವು ಊರಿಕೊಂಡಿತು. ಕೈಯಲ್ಲಿ ಗದೆಯನ್ನು ಹಿಡಿದು ರಾಮ-ವರದಾಯಿನಿಯು, ಶಿವರಾಯನ ಜತೆಯಲ್ಲಿ ಸಾರಿ, ನಷ್ಟ ಚಾಂಡಾಲರನ್ನು ನುಂಗಿದಳು. ಹಿಂದಿನಂತೆ ಇಂದೂ ಭಕ್ತರನ್ನು ರಕ್ಷಿಸಿದಳು. ಈ ಪ್ರಕಾರವಾಗಿ ರಾಮದಾಸರು ಪ್ರತ್ಯಕ್ಷ ಕಂಡ ಕಣಸನ್ನು 'ಆನಂದವನಭುವನ'ದಲ್ಲಿ ಬಣ್ಣಿಸಿರುವರು. ಈ ಬಗೆಯ ಅವರ ಉದ್ಗಾರಗಳನ್ನು ಓದಿ, ಅವರು ರಾಜಕಾರಣಿಗಳಿರಲಿಲ್ಲವೆಂದೆನ್ನಬಹುದೇ?

ಶ್ರೀ ಸಮರ್ಥರ ಗುರುಗಳಾರೆಂಬುದನ್ನು ಆಗಾಗ ಅನೇಕರು

ಕೇಳುವುದುಂಟು. ಮುಂದಿನ ಅವತರಣಿಕೆಯಲ್ಲಿ ಅದಕ್ಕೆ ಉತ್ತರವುಂಟು. ಶ್ರೀ ರಾಮಚಂದ್ರನ ದೃಷ್ಟಾಂತವಾಗಿ ಅವರಿಂದಲೇ ರಾಮದಾಸರಿಗೆ ಮಂತ್ರವು ದೊರೆತಂತೆ ಕಾಣುವುದು. ಶ್ರೀರಾಮದೇವರು ಅವರಿಗೆ ಬಲಭೀಮನ ಉಪಾಸನೆಯನ್ನು ಮಾಡಲು ಹೇಳಿದರು, ಅದರಂತೆ ರಾಮದಾಸರು ಅದನ್ನು ಮಾಡಿದರೆಂದು ಅದರಲ್ಲಿ ಬರೆದಿದೆ. ಇನ್ನೊಂದವತರಣಿಕೆಯಲ್ಲಿ ರಾಮದಾಸರು ತಮ್ಮ ಬಾಲ್ಯದಲ್ಲಿಯ ಚರಿತ್ರವನ್ನು ಸಾರಿರುವರು. ರಾಮದಾಸರ ತಂದೆಗೆ ಊರಹೊರಗಣ ಬಲಭೀಮನ ಗುಡಿಯಲ್ಲಿ ಶ್ರೀ ರಾಮಲಕ್ಷ್ಮಣರ ಉಪದೇಶವಾಯಿತು. 'ನಿನ್ನ ಮಗ ಶ್ರೀ ರಾಮಭಕ್ತಿಯ ಧ್ವಜವನ್ನು ನಿಲ್ಲಿಸುವನೆಂ'ದು ವರವು ದೊರೆಯಿತು. ಮುಂದೆ ತಂದೆಯ ನಿಧನದ ನಂತರ ಅಣ್ಣನು ಮಂತ್ರವನ್ನು ಹೇಳಿದ್ದರಿಂದ, ಅದೇ ದೇವಾಲಯದಲ್ಲಿ ರಾಮದಾಸರಿಗೆ ಶ್ರೀರಾಮನ ದೃಷ್ಟಾಂತವಾಯಿತು. ಇತ್ಯಾದಿ ಸಂಗತಿಗಳನ್ನು ರಾಮದಾಸರದರಲ್ಲಿ ಅರುಹಿರುವರು. ಶ್ರೀ ಹನುಮಂತನ ಬಳಿಯೊಡನೆ, ಶ್ರೀರಾಮಮಂಟಪವನ್ನೇರಿ, ಆತ್ಮಜ್ಞಾನದ ತನಿವಣ್ಣನುಂಡೆನೆಂದು ರಾಮದಾಸರು ಇನ್ನೊಂದೆಡೆಗೆ ಒಳ್ಳೆ ಅಂದವಾಗಿ ಬಣ್ಣಿಸಿರುವರು. ಮನಸ್ಸನ್ನು ಹಿಂದಟ್ಟುವ ಪ್ರಾಣದೇವರನ್ನು ಭಜಿಸಲು ಹೇಳಿ ಕೊನೆಗೆ ಹದಿಮೂರು ಅಕ್ಷರದ ಮಂತ್ರವನ್ನು ಹದಿಮೂರು ಕೋಟಿ ಸಲ ಜಪಿಸಿದರೆ ಭಗವಂತನ ದರುಶನವು ಆಗಿಯೇ ತೀರುವುದೆಂದು ಶ್ರೀ ಸಮರ್ಥರು ಅಭಿವಚನವನ್ನಿತ್ತಿರುವರು.

೯. **ಪದಗಳು-ಅಭಂಗಗಳು :—** ಶ್ರೀ ರಾಮದಾಸರ ಪದ-ಅಭಂಗಗಳ ಸಂಖ್ಯೆಯು ಶ್ರೀ ತುಕಾರಾಮ-ಜ್ಞಾನೇಶ್ವರರಷ್ಟು ದೊಡ್ಡದಿರದಿದ್ದರೂ, ಅವು ಪರಮಾತ್ಮಪ್ರಾಪ್ತಿಯ

ನ್ನೆಯೆ ಕಲಿಸುವವು. ಯಾವ ಸ್ಥಿತಿಯಲ್ಲಿದ್ದರೂ ನಾವು ರಾಘವನ ಆಶ್ರಯವನ್ನು ತೊರೆಯಬಾರದು. ನಾವು ಸಾವಿರಾರು ಅಪರಾಧಗಳನ್ನು ಮಾಡಿದರೂ, ನಮಗೆ ನಿಜವಾದ ಅನುತಾಪವಾಯಿತೆಂದರೆ ಗುರುಗಳು ನಮ್ಮನ್ನು ಕ್ಷಮಿಸದಿರರು. ಹೀನವಷ್ಟು— ಆಕಳಿಸುವಷ್ಟು— ಕೆಮ್ಮುವಷ್ಟು ಕಾಲವನ್ನೂ ನಾವು ವ್ಯರ್ಥವಾಗಿ ಕಳೆಯಬಾರದು. ಇದರಿಂದ ಒಮ್ಮೆಲೆ ದೊಡ್ಡ ಲಾಭವಾಗುವುದು. ಸಾಧನದ ಯತ್ನವು ವ್ಯರ್ಥವಾಗಿ, ಮನೆಯಲ್ಲಿ- ಬನದಲ್ಲಿ ಸರಿಯಾಗಿ ರಾಮದರ್ಶನವು ಆಗುವುದು. ಒಮ್ಮೆ ರಾಮನು ಕಾಣಿಸಿಕೊಂಡನೆಂದರೆ ಮರಳಿ ಅವನು ಮರೆಯಾಗನು. ರಾಮನೂ ವಿಠ್ಠಲನೂ ಸಮಾನರು. ಭಾವದಂತೆ ದೇವನು. ಈ ಬಗೆಯ ಕಲಿಕೆಯನ್ನು ನಾವು ಈ ಪದಗಳಲ್ಲಿಯೂ ಅಭಂಗಗಳಲ್ಲಿಯೂ ಕಾಣಬಹುದು.

೧೦. **ಸ್ಫುಟ ಪ್ರಕರಣಗಳು:—** ಒಂದು ಕಾರ್ಯವು ಕೈಗೂಡಬೇಕಾದರೆ ಶಕ್ತಿ-ಯುಕ್ತಿಗಳೆರಡೂ ಬೇಕು. ಆದುದರಿಂದ ಪ್ರಾಣಿಗಳೆಲ್ಲರ ಮೈಯಲ್ಲಿ ಸಂಚಲಿಸುವ ವಿಶ್ವವ್ಯಾಪಿನಿ ಶಕ್ತಿದೇವಿಯನ್ನರಸಬೇಕು. ದೇವ-ದೇವಾಲಯಗಳಲ್ಲಿಯ ಭೇದವನ್ನರಿಯದೆ ಜನರು ದೇಗುಲಕ್ಕಾಗಿಯೇ ಕಡಿದಾಡುವರು. ದೇವನು ಅವರನ್ನು ತಪ್ಪಿಸಿ, ಮರೆಯಾಗಿ ನಿಲ್ಲುವನು. ಬಲು ಮೋಸಗಾರನೀ ಮಾರಾಯ! ಹಳೆಯ ಗುಡಿಗಳನ್ನು ತೊರೆದು ಇವನು ಹೊಸ ಗುಡಿಗಳನ್ನು ಸೇರುವ. ಬ್ರಹ್ಮ-ವಿಷ್ಣು-ಮಹೇಶರು ದೇವರಲ್ಲ, ದೇಗುಲಗಳು. ಇಂಥ ನಿಶ್ಚಲ ದೇವರ ಧ್ಯಾನವನ್ನೆಲ್ಲರು ಮಾಡಬೇಕು, ಎಂದು ರಾಮದಾಸರು ಮರಳಿ ಉಸುರಿರುವರು. ''ದಾಸಬೋಧದ-ಸುಲಿದ ಅರ್ಥ'' ವೆಂಬುದು ಅತ್ಯುತ್ತಮವಾದ ಪ್ರಕರಣವು. ಇದು ಗುರು-

ಶಿಷ್ಯರ ಸಂವಾದರೂಪವಿರುವುದು. ಅನುಭಾವದ ದಾರಿಯಲ್ಲಿ ಸಾಧಕನಿಗೆ ಬರುವ ವಿವಿಧ ದಿವ್ಯ ಅನುಭವಗಳ ವರ್ಣನೆಯು ಇದರಲ್ಲಿದೆ. ಆದುದರಿಂದ ಇದಕ್ಕೆ ಅತಿಯಾದ ಮಹತ್ವವಿದೆ.

"ಶ್ರೀ ರಾಘವನ ಧರ್ಮ ನೆಲೆನಿಲ್ಲಲಿ!" ಎಂಬ ಪದದಲ್ಲಿ ರಾಮದಾಸರ ನಿಷ್ಕಾಮ ಭಕ್ತಿಯು ಕಳಸವನ್ನು ಕಂಡಿರುವುದು.
"ಬೇಡಿಕೆಯೇ ಉಳಿಯುವಂತೆ | ನೀತು ವರವ ರಾಮರಾಯಾ। "
— ಇದು ಅವರ ಕೊನೆಯ ಕೋರಿಕೆ.

ಶ್ರೀ ಸಮರ್ಥರ ಮನೋಬೋಧ

ಬೋಧಸಾರ

['ಮನೋಬೋಧ'ದ ಕರ್ತರಾದ ಶ್ರೀ ರಾಮದಾಸರಿಗೆ 'ಸಮರ್ಥ' ಎಂಬ ಬಿರುದು. ಸರ್ವಸಮರ್ಥನಾದ ಶ್ರೀರಾಮನ ಈ ಅನನ್ಯದಾಸರು ನಿಜವಾಗಿಯೆ ಸಮರ್ಥರಿದ್ದರು. ಶ್ರೀ ಸಮರ್ಥರ ಬಣ್ಣ ಸಾದಗಪ್ಪು, ಎತ್ತರ ಮಧ್ಯಮ ತರಗತಿಯದು. ಅವರು ಆಜನ್ಮ ನೈಷ್ಠಿಕ ಬ್ರಹ್ಮಚಾರಿಗಳು. ತುಂಬ ಸಶಕ್ತರು. ಅವರ ಕೈಯಲ್ಲಿ ಯಾವಾಗಲೂ ಅವರಷ್ಟೇ ಎತ್ತರದ ಒಂದು 'ಕುಬಡಿ'ಯು ಇರುತ್ತಿತ್ತು. ಅದರಲ್ಲಿ ಒಂದು ಕಿರುಗತ್ತಿಯಿತ್ತಂತೆ. ಅವರು ವಿಶೇಷವಾಗಿ ಹಣ್ಣು ಹಂಪಲಗಳನ್ನು ಸೇವಿಸುತ್ತಿದ್ದರು. ನೆಲದ ಮೇಲೆ ಕಂಬಳಿಯನ್ನು ಹಾಸಿ ಮಲಗುತ್ತಿದ್ದರು. 'ಜನರು ಅದೆಂತು ಬದುಕುವರಯ್ಯಾ' ಎಂಬುದೆ ಅವರ ಚಿಂತೆಯ ವಿಷಯ. ಇಂಥ ಮಹಾಪುರುಷರವರು !

'ಮನೋಬೋಧ'ವು ಮನಸ್ಸಿನ ಮುಖಾಂತರ ಜನರನ್ನು ಎಚ್ಚರಿಸುವದು. ಅವರಿಗೆ ಭಕ್ತಿಯ ಪಂಥವನ್ನು ಕಾಣಿಸುವದು. ಮೂಲದಲ್ಲಿಯ ೨೦೫ ಪದ್ಯಗಳಿಂದ ನಾವಿಲ್ಲಿ ಆಯ್ದ ೬೦ ಪದ್ಯಗಳಲ್ಲಿ ಅಡಗಿದ ಬೋಧಸಾರವು ಮುಂದೆ ಕಾಣಿಸಲಾಗಿದೆ—

"ಎಲೆ ಸುಮನವೇ! ಭಕುತಿಪಥವನು ಪಿಡಿಯಯ್ಯ! ನಿಂದ್ಯವ ತೊರೆದು, ವಂದ್ಯವ ಸೇವಿಸಿ, ವಿಶ್ವದಲಿ ವಂದ್ಯ

ನಾಗಯ್ಯ ! ಕಾಮ-ಕ್ರೋಧಗಳನ್ನು, ಮದ-ಮತ್ಸರಗಳನ್ನು ತ್ಯಜಿಸು. ಅತಿಕಾಮಿಯಲಿ ರಾಮನಿರನು. ಅತಿ ಯೋಭ ದಿಂದ ಕ್ಷೋಭವೇ ಬೆಳೆವುದು. ಅಹಂಕಾರವ ತುಳಿ. ಮಿಥ್ಯವ ಬಿಡು. ಸತ್ಯವ ನುಡಿ, ವಿನಯದಿ ಪ್ರಿಯವ ನುಡಿ, ನುಡಿ ದಂತೆ ನಡೆಯಯ್ಯ! ಚಂದನದಂತೆ ಸವೆದು, ಶೀಲಸೌರಭದಿಂದ ಸಂತರನು ಸಂತೈಸು ಅರಯ್ದು ನುಡಿಯುತಿರು, ಅರಯ್ದು ನಡೆಯುತಿರಯ್ಯ !

ಅಯ್ಯ ! ಸಿರಿಯು ಸಂಸಾರ ಸ್ಥಿರವಲ್ಲ. ಕಾಯವನು ಕಾಲನು ಸೆಳೆಯದೆ ಬಿಡನು. ಆದುದರಿಂದ ದೇಹ-ದುಃಖವನು ಸುಖ ವೆಂದು ಬಗೆ, ದೇಹ-ಬುದ್ಧಿಯು ತೊರೆದು ಆತ್ಮ-ಬುದ್ಧಿಯ ಬಲಿಸು. ರಾಮಪ್ರೇಮದಿ ನಲಿದು, ನಿಜದಿ ಬೆರೆಯಯ್ಯ ! ಶ್ರೀರಾಮನು ದಾಸರನ್ನೆಂದಿಗೂ ತೊರೆಯನು. ಅವರ ಭಾರವ ವಹಿಸಿ, ಅವರನ್ನು ಉದ್ಧರಿಸುವನು. ರಾಮನ ನಿರಂತರವಾಗಿ ನಮ್ಮ ಬಳಿಯಲ್ಲಿಯೆ ಇರುವ. ನಮ್ಮ ಭಾವದಂತೆ ನಮಗೆ ವರವ ಸಲ್ಲಿಸುವ. ಅವನ ಕರುಣದ ಬಲವೆ ನಮ್ಮ ಬಲದ ಸೆಲೆ. ಆಗಸದಂತೆ ಮರೆಯಲ್ಲಿ ಮೆರೆಯುವ ದೇವನು ಗುರು ಕರುಣವಿಲ್ಲದೆ ಕಾಣನಯ್ಯ !

ಆದರೆ ಮನವೆ! ಇಲ್ಲಿ ಹಾಳು ಗುರುಗಳ ಬಳಗವೆ ಬೆಳೆ ದಿಹುದು. ಭಕ್ತಿ-ಜ್ಞಾನ, ವಿವೇಕ-ವೈರಾಗ್ಯ, ದಯೆ-ಕ್ಷಮೆ, ಶಮ-ದಮ-ಶಾಂತಿ ಇತ್ಯಾದಿ ದೈವೀಗುಣಗಳಿಂದ ಕೂಡಿದ ಸದ್ಗುರುವು ದುರ್ಲಭ. ಆದುದರಿಂದ, ಏನಾದರೂ ಮಾಡಿ, ಇಂಥ ಸದ್ಗುರುಗಳ ಚರಣವ ಪಿಡಿ, ಕರುಣವ ಪಡೆಯಯ್ಯ ಅವರಿಂದಲೆ ನಿನಗೆ ಪರತತ್ವ ಲಭಿಸು ವದು. ಮನವೇ ಹಗಲಿರುಳು ರಾಮನನೆ ನೆನೆಯಯ್ಯ ! ನಾಮವೇ ನಿಜಸುಖದ

ಧಾಮ. ಅದರಿಂದಲೆ ವಿಶ್ರಾಮ—ಆನಂದ. ಇಂಥ ಘನವಾದ ನಾಮವನು ನೆನೆದು ದೇವನ ನಿಜವಾದ ದಾಸನಾದವರ ಜೀವನವೇ ಧನ್ಯವಾಗುವದು. ದೇವರನ್ನು ಪಡೆದ ಅಂಥ ದಾಸವರನು ದೇವಕಾರ್ಯದಲ್ಲಿಯೆ ದೇಹವನ್ನು ದುಡಿಸುವನು, ನುಡಿದಂತೆ ನಡೆಯುವನು. ಅನೇಕದಲ್ಲಿ ಏಕನನ್ನು ಕಾಣುವನು, ಅಂತರಂಗದಲ್ಲಿ ಭಕ್ತಿರಸವನ್ನು ತುಂಬಿಕೊಳ್ಳುವನು. ನಿಜವಾಗಿ ಈ ಜಗತ್ತಿನಲ್ಲಿ ಇಂಥ ದೇವರ ದಾಸನೇ ಧನ್ಯನಾಗುವನು."]

೧. ಮಂಗಲಾಚರಣ

ಗಣನಾಯಕನ ಸಕಲ ಗುಣಗಳಧಿನಾಯಕನ
ನಿರ್ಗುಣಾದಿ ಮೊದಲಾದ ಸುಗುಣನನ್ನು ।
ವಾಣಿ ನಾಲ್ಕರ ಮೂಲಳಾದ ಶಾರದೆಯನ್ನು
ನಮಿಸಿ ಅರಸುವೆನನಂತನನ್ನು ॥ ೧ ॥

೨. ವಿವೇಕ

ಎಲೆ ಸುಜನ ಮನರಾಯ! ಸಲೆ ಭಜಿಸು ಶ್ರೀಹರಿಯ
ಭಕುತಿಪಥವನು ಪಿಡಿದು ಮುಕುತನಾಗು ।
ಸಲೆ ನಿಂದ್ಯವನು ತ್ಯಜಿಸಿ ವಂದ್ಯವನು ಸೇವಿಸುತ
ವಿಶ್ವದಲಿ ಎಲ್ಲರಿಗೆ ವಂದ್ಯನಾಗು ॥ ೨ ॥
ಬೇಡಯ್ಯ ಮನವೆ! ಅತಿಖೇದ ತರುತಿಹ ಕ್ರೋಧ
ಬಗೆಬಗೆಯ ವಿಕೃತಿಗಳ ಧಾಮ ಕಾಮ ।
ಬೇಡಯ್ಯ ಮನವೆ! ಈ ಮದದ ಮಾದಕ ಮೋಹ
ದಂಭ-ಮತ್ಸರ-ಮಾರಿಯಲ್ಲಿ ಪ್ರೇಮ ॥ ೩ ॥

ಮನವೆ! ಪರಧನವನ್ನು ತಪ್ಪಿಯೂ ಅಪ್ಪದಿರು
ಪಾಪವೇ ಬೆಳೆವುದತಿಸ್ವಾರ್ಥದಿಂದ ।
ಮನವೆ! ಪಾಪದ ತಾಪ ತರುವ ಕರ್ಮವು ಕೇಳು
ಭಾರಿ ದುಃಖವು ವಿಫಲ ಬಯಕೆಯಿಂದ ॥ ೪

ಅತಿ ಮೂಢನಲಿ ಮತಿಯು ಅಚಲವಿರಲರಿಯದೈ
ಅತಿ ಕಾಮಿಯಲಿ ರಾಮ ನಿಲ್ಲನಲ್ಲಾ ।
ಅತಿ ಲೋಭವಿರುವಲ್ಲಿ ಕ್ಷೋಭವೇ ಬೆಳೆಯುವದು
ಅತಿ ವಿಷಯ-ಪ್ರೀತಿಯಿಂ ದೈನ್ಯವೆಲ್ಲಾ ॥ ೫

ಬುದ್ಧಿವಂತನ ಹಮ್ಮು ಶುದ್ಧಿಯಳಿಸುವದಯ್ಯ
ನೀತಿ-ರೀತಿಗಳನದು ತೊರೆಯಿಸುವದು ।
ಶುದ್ಧ ದುರ್ನೀತಿಯಿಂ ಕೀರ್ತಿ ದೊರೆತರು ಕೂಡ
ಅಂತರಂಗವು ಅವನ ಕೊರೆಯುತಿಹುದು ॥ ೬

ಹಮ್ಮಿನಿಂದಲೆ ಎಲ್ಲ ಬಗೆಯ ದುಃಖವು ಬಹುದು
ಅಡಿದಾ ನುಡಿಯು ಹುಸಿಯಾಗುತಿಹುದು ।
ಹಮ್ಮವಳಿದರೆ ಎಲ್ಲ ಬಗೆಯ ಸುಖ ಸಿಗುತಿಹುದು.
ಅದರ ಮೂಲವನೊಡನೆ ನೋಡುತಿಹುದು ॥ ೭

ಮನವೆ! ದುರ್ವಾಸನೆಯ ದೂರದಲ್ಲಿರಿಸುತಿರು.
ಪಾಪಕರ್ಮವನೆಂದು ಎಸಗಬೇಡಾ ।
ಮನವೆ! ನೀತಿಯ ಪ್ರೀತಿಯನ್ನೆಂದು ತೊರೆಯದಿರು
ಸಾರ-ಪರಮನನೆಂದು ಮರೆಯಬೇಡಾ ॥ ೮

ಮನವೆ! ನೀ ಪಾಪಸಂಕಲ್ಪಗಳ ಬಿಡುತಲಿರು
ಸತ್ಯಸಂಕಲ್ಪಗಳ ಪಿಡಿವುದಯ್ಯ ।

ಮನವೆ! ದುರ್ವಿಷಯಗಳ ಕಲ್ಪನೆಯ ಕಳೆಯುತಿರು
ಜಗದಿ ಭೀ ಹಳಿ! ಎನಿಸಿಕೊಳದಿರಯ್ಯ ॥ ೯ ॥

ಮನವೆ! ಸತ್ತತ್ತ್ವವನ್ನೆಂದಿಗೂ ತೊರೆಯದಿರು
ಮಿಥ್ಯ-ಮಾಯೆಯನು ಮನ್ನಿಸಲು ಬೇಡ।
ಮನವೆ! ನಾಲಿಗೆಯಿಂದ ಸತ್ಯವನೆ ನುಡಿಯುತಿರು
ಮಿಥ್ಯವನ್ನೆಂದೆಂದಿಗುಸುರ ಬೇಡಾ ॥ ೧೦ ॥

ಮನವೆ! ವರಧೈರ್ಯವನು ನಿತ್ಯ ತಳೆಯುತ್ತಲಿರು
ಬಿರುನುಡಿಯ ತಾಳ್ಮೆಯಿಂ ತಾಳು ನೀನು।
ವಿನಯದಿಂ ಸವಿನುಡಿಯ ನಿತ್ಯ ನುಡಿಯುತ್ತಲಿರು
ಸರುವರಿಗೆ ನೀಡುತಿರು ಸಂತಸವನು ॥ ೧೧ ॥

ಕಾಯವಳಿದರು ಮನವೆ, ಕೀರ್ತಿಯುಳಿಯುವ ತೆರದಿ
ಮೇಲು ಕರ್ಮವ ನಿತ್ಯ ನಡೆಸಬೇಕು।
ರಾಯ! ಚಂದನದಂತೆ ಸವೆದು, ಹಿರಿಸಂತರನು
ಶೀಲ-ಸೌರಭದಿಂದ ತಣಿಸಬೇಕು ॥ ೧೨ ॥

ವರ ವಿವೇಕದ ಜಲದಿ ನಡತೆಯನು ತೊಳೆಯುತಿರು.
ಆದರದಿ ವಿಮಲ ನಡೆ ತಳೆವುದಯ್ಯ।
ಸರುವರೊಳು ಸಂತತವು ಆಡಿದೊಲು ಮಾಡುತಿರು
ಕಲ್ಪನೆಯ ಕಲ್ಮಷವ ಕಳೆವುದಯ್ಯ ॥ ೧೩ ॥

ಆರಯ್ದು ನುಡಿಯುತಿರು ಆರಯ್ದು ನಡೆಯುತಿರು
ಅದುವೆ ಬಳಲುವರ ಸಂತೈಸುತಿಹುದು।
ಆರಯ್ಯದಲೆಯೊಂದ ನುಡಿಯನೂ ನುಡಿಯದಿರು
ನಿಯತ ನಿರ್ಮಲ ನಡೆಯ ನಡೆಯುತಿಹುದು ॥ ೧೪ ॥

೩. ವೈರಾಗ್ಯ

ಸುಮನ ಕೇಳಯ್ಯ! ಜನ ಮರ್ತ್ಯಲೋಕದ ಬಾಳು
ನಿತ್ಯವಲ್ಲೆಂಬುದನು ಮರೆಯುತಿಹರು ।
ಅಮರರೆಂದೇ ಬಗೆದು ಹಮ್ಮಿನಿಂ ಜಿಗಿಜಿಗಿದು
ಒಮ್ಮೆಲೇ ಯಮನೆಡೆಗೆ ತೆರಳುತಿಹರು ॥ ೧೫ ॥

ಸತ್ತವರ ಕಂಡು ಅತ್ತವರೇನು ಉಳಿವರೇ?
ಅವರೂ ಮರಳತ್ತಲೆ ಸಾರುತಿಹರು!
ಚಿತ್ತದಲಿ ಲೋಭವತಿಯಾಗಿ ಕ್ಷೋಭವು ಜನಿಸೆ
ಭವದ ತಿರುಗಣಿಯನ್ನು ಸೇರುತಿಹರು ॥ ೧೬ ॥

ಕಾಯುವನು ಕಾಯಲಿಕೆ ಎನಿತೆನಿತು ಹೆಣಗಿದರು
ಕಾಲ ಕೊನೆಗದನು ಸೆಳೆಯದಲೆ ಬಿಡನು ।
ರಾಯ! ಶ್ರೀರಾಮನನು ಭಾವದಿಂದಲಿ ಭಜಿಸಿ
ಭವದ ಭಯವನು ಕಳೆಯುತಿಹುದು ನೀನು ॥ ೧೭ ॥

ಎಲ್ಲ ಬಗೆಯಿಂದಿಲ್ಲಿ ಸುಖದಿ ನಲಿವವರಾರು?
ಮನವೆ ನೀನಿದನೊಡನೆ ಶೋಧಿಸಯ್ಯ!
ಅಲ್ಲಿ ಮಾಡಿದ ಕರ್ಮ ಇಲ್ಲಿ ನೀಡುವ ಫಲವ
ಸುಮ್ಮನುಣ್ಣಲು ನಿನಗೆ ಬೋಧಿಸಯ್ಯ ॥ ೧೮ ॥

ಸಿರಿಯ ಸಂಸಾರವಿದು ಸಾರಲ್ಲ, ಘೋರಿಹುದು,
ದುಃಖ ಶೋಕಕೆಯಿಲ್ಲಿ ಕೊರತೆಯಿಲ್ಲ ।
ಹಿರಿ ವಿಷವ ಸೇವಿಪಗೆ ಸಿರಿಸುಖವದೆಲ್ಲಿಹುದು?
ರಾಮಧ್ಯಾನದಿ ಶಾಂತಿ ದೊರೆವುದಲ್ಲ ॥ ೧೯ ॥

ಅಂದಾದುದಕೆ ದುಃಖ, ಇಂದಾದುದಕೆ ಶೋಕ
ಮುಂಬರುವದರ ಚಿಂತೆ ಬೇಡವಯ್ಯ ।

ಕಂದಯ್ಯ ! ದೇಹ ನಾನಲ್ಲಾತ್ಮನಿಹೆನೆಂದು
ಬಗೆಯುತಾ ಅರಿವಿನಲಿ ನಲಿವುದಯ್ಯ || ೨೦ ||

ಅಂತರಂಗದಿ ರಾಮ-ಪ್ರೇಮದಿಂ ನಲಿಯುತಿರು
ಕಾಮ-ಪ್ರೇಮದಿ ಮರುಗಬಾರದಯ್ಯ ।
ಬಂದ ದೇಹದ ದುಃಖ ಸುಖವೆಂದು ಬಗೆಯುತಿರು
ವರವಿವೇಕದಿ ನಿಜದಿ ಬೆರೆತಿರಯ್ಯ || ೨೧ ||

೪. ಭಕ್ತಿ

ಕೇಳು ಮನವೇ ! ರಾಮ ಮೂರು ಲೋಕವನಾಳ್ವ,
ಸೂರು ಜನಗಳನು ಉದ್ಧರಿಸುತಿಹನು ।
ಏಳು ! ಅವನನು ನಿತ್ಯ ಚಿತ್ತದಲ್ಲಿರಿಸುತಲಿ
ಎನ್ನ ಹಿತವನು ಸತತ ಎಸಗು ನೀನು || ೨೨ ||

ಮನವೆ ! ಕೇಳೆನ್ನ ಪ್ರಾರ್ಥನೆಯ ರಘುವರನನ್ನು
ಆದರಾಶ್ಚರ್ಯದಿಂ ನೋಡುತಿಹುದು ।
ಮನವೆ ! ಇದನಲ್ಲಗಳೆಯದಲೆ ರಘುರಾಜನ
ರೂಪದಲಿ ನೆಲೆಯಾಗಿ ನಿಲ್ಲುತಿಹುದು || ೨೩ ||

ಶ್ರೀರಾಮನಾ ಕರುಣವುಳ್ಳ ಕಿಂಕರರೆಡೆಗೆ
ಕೆಂಗಣ್ಣಿನಿಂದಾವ ಕಾಣುವವನು ।
ಮೂಲೋಕ ಬಣ್ಣಿಪುದದಾರ ಲೀಲೆಗಳನ್ನು
ರಾಮ ದಾಸರನೆಂದು ತೊರೆಯದಿಹನು || ೨೪ ||

'ನಿಮ್ಮ ಭಾರವನೆಲ್ಲ ನಾನು ಹೊರುವೆನು' ಎಂದು
ಹರಿಯು ಇತ್ತಿರುವ ಹಿರಿವಚನವನ್ನು ।
ಸುಮ್ಮನೆಯೆ ಜನರದನು ನಂಬದಲೆ ಬಳಲುವರು
ರಾಮ ದಾಸರನೆಂದು ತೊರೆಯದಿಹನು || ೨೫ ||

ಎಲ್ಲ ಕಾಲದಿ ದೇವ ನಮ್ಮ ಬಳಿಯಲ್ಲಿರುವ
ಅಲ್ಪ ಧೈರ್ಯವನವನು ನೋಡುತಿಹನು ।
ಸಲ್ಲಿಸಲ್ಲದನು ಕೈವಲ್ಯ–ಸುಖ ನೀಡುತಿಹ,
ದೇವ ದಾಸರನೆಂದು ತೊರೆಯದಿಹನು ॥ ೧೬ ॥

ದಾಸರಾಂತರ್ಯದಲಿ ನೆಲೆಸಿರುವ ಭಾವದೊಲು
ದೇವನವರಿಗೆ ವರವ ಸಲ್ಲಿಸುವನು ।
ಈಶ ಕಾಯದೆ ಬಿಡನನನ್ಯರಾದವರನ್ನು
ದೇವ ದಾಸರನೆಂದು ತೊರೆಯದಿಹನು ॥ ೧೭ ॥

ಕಲ್ಪಿಸಿದುದನು ಕೊಡುವ ಧೇನು-ತರು-ಮಣಿಗಳನು
ಏನು ಹೇಳಲಿ ? ರಾಮ ಮೀರುತಿಹನು ।
ಎಲ್ಲ ಬಲ ಸಲ್ಲಿಸುವದವನ ಕರುಣದ ಬಲವು
ಅಂಥವಗದಾವ ಸಮನಾಗುತಿಹನು ? ॥ ೧೮ ॥

ಕಲ್ಪತರುವಿನ ಅಡಿಯಲಿದ್ದು ಬಳಲುವ ನರನು
ನಿತ್ಯ ಬಳಲಿಕೆಯಲ್ಲೆ ತೊಳಲುತಿಹನು ।
ಅಲ್ಪಮತಿ ಹಮ್ಮಿನಿಂ ವಾದಿಸುತ ಕಾದುತಿರೆ,
ಶೋಕವನ್ನೆಯೆ ಸತತ ಪಡೆಯುತಿಹನು ॥ ೧೯ ॥

ಜನರ ಮಂಗಲಕಾಗಿ ದೇವನವತರಿಸುತಿಹ
ಬಗೆಬಗೆಯ ಲೀಲೆಗಳ ಮಾಡುತಿಹನು ।
ಮನವೆ ! ಪಾಪದ ಕೂಪದಲಿ ಕೊಳೆವ ದುರುಳಜನ
ಅರಿಯರೈ ಅವನ ಹಿರಿಕುರುಹವನ್ನು ॥ ೨೦ ॥

ಮನವೆ ! ಕೇಳೈ ! ದೇವ ಹೃದಯದಲಿ ನೆಲೆಸಿರುವ
ಬಾನಿನೊಲು ಎಲ್ಲವನು ವ್ಯಾಪಿಸಿಹನು ।

ಘನನೆಲ್ಲಿ ತೆರಳನೈ! ಎಲ್ಲಿಂದ ಮರಳನೈ!
ಅವನಿಲ್ಲದಿಹ ಸ್ಥಲವು ಇರುವದೇನು? ॥ ೩೧ ॥

ರಾಘವನ ರೂಪವದು ಆಗಸವ ಹೋಲುವದು
ಅದರ ಧ್ಯಾನದಿ ಭವವು ಅಳಿವುದಲ್ಲಾ।
ರಾಘವನ ದರುಶನದಿ ದೇಹಭಾವವು ಹಾರಿ
ಕಾಂಬ ಬಯಕೆಯು ಎಂದು ತಣಿಯುದಲ್ಲಾ ॥ ೩೨ ॥

ಬಗೆಬಗೆಯ ಭಾವದೊಲು, ಬಗೆಬಗೆಯ ದೇವರನು
ಮೇಲೆಂದು ಬಗೆದು ಜನ ಪೂಜಿಸುವರು।
ಜಗದಿ ದೇವರ ಬಳಗ ಅತಿಯಾಗಿ ಬೆಳೆದಿಹುದು
ದೇವದೇವನನಿಲ್ಲಿ ಶೋಧಿಸುವರು ॥ ೩೩ ॥

ಮೂರು ಲೋಕಂಗಳನು ತಾನೆ ನಿರ್ಮಿಸಿದಂಥ
ದೇವದೇವನನಾರು ಕೇಳ್ವರಿಲ್ಲ।
ಹಿರಿಯ ದೇವನು ತಾನು ಮರೆಯಲ್ಲಿ ಮೆರೆಯುವನು
ಗುರುವಿಲ್ಲದಲೆ ಅವನು ಕಾಣನಲ್ಲ ॥ ೩೪ ॥

೫. ಸದ್ಗುರು

ಹಾಳು ಗುರುಗಳ ಬಳಗ ಕೋಟಿಯನು ದಾಟಿಹುದು
ಅವರ ಮಂತ್ರಂಗಳು ಅನಂತ ಇಹವು।
ಕೇಳು ಕಾಮದಿ ಜೇಡಿ ಮಾಳ್ಪ ಕುನ್ನಿಗಳೆಂತು
ಮುಕ್ತಿಯಾನಂದವನು ನೀಡುತಿಹವು? ॥ ೩೫ ॥

ಒಳಗೆ ಕಾಮದ ರಾಶಿ, ಹೊರಗೆ ಹಗರಣದ ನುಡಿ
ನಡೆಯಿಲ್ಲದ ಬಾಯ್ಬಡಕ ಗುರುವು ಹಾಳು।

ನಾಲಿಗೆಯು ನುಡಿದವೊಲು ನಡೆವವನೆ ಗುರುದೇವನು
ಅವನ ಚರಣಕೆ ಎರಗು, ಏಳು! ಕೇಳು || ೩೬ ||

ಭಕ್ತ, ಜ್ಞಾನಿಯು ಆತ, ಸುಮತಿ-ವೈರಾಗ್ಯಯುತ
ದಯೆ-ಕ್ಷಮೆಯು, ಶಮದಮವ ತಳೆದ ಯೋಗಿ।
ಯುಕ್ತ, ಔದಾರ್ಯವೃತ್ತಿ-ಚಾತುರ್ಯಯುತ
ದಕ್ಷ ಸದ್ಗುರುನಾಥ ಶಾಂತಿ-ಭೋಗಿ || ೩೭ ||

ಏನಾದರೂ ಮಾಡಿ ಜ್ಞಾನಿಗಳ ಬಳಿ ಸಾರು!
ಅವರ ಚರಣವ ಪಿಡಿದು ಸೇವೆ ಮಾಡು।
ಜ್ಞಾನ-ಅಂಜನವಿಲ್ದೆ ಹಮ್ಮಿನಾ ಕಂಗಳಿಗೆ
ನಿತ್ಯ ನಿಜರೂಪ ಅದೃಶ್ಯ ನೋಡು || ೩೮ ||

ಮನವೆ! ಸದ್ಗುರುಗಳಿಂ ಪರತತ್ವ ಲಭಿಸಿದರು
ಸ್ಥಿರಗೊಳಿಸಲದನು ನೀ ಸತತ ಹೆಣಗು।
ಘನವಾದ ಜ್ಞಾನವನು ಮರಮರಳಿ ಸಂತರಿಂ
ಅರಿತರಿತು ದೃಢಪಡಿಸಿ ಧನ್ಯನಾಗು || ೩೯ ||

ಭಕ್ತಿಯುಕ್ತಿಗಳಿಂದ, ಜ್ಞಾನ-ವೈರಾಗ್ಯದಿಂ
ಆತ್ಮನನು ಚಿತ್ತದಲಿ ಸ್ಥಿರಗೊಳಿಸಿದ।
ಮುಕ್ತ ಸಂತರ ನೋಟ-ಕೂಟದಿಂದಲೆ ಪುಣ್ಯ
ಸಂದೇಹವಳಿಯುವುದು ಮಾತಿನಿಂದ || ೪೦ ||

ಯಾರ ಸಹವಾಸದಲಿ ಶಾಂತಿಸುಖ ಅಳಿಯುವದು
ಹಮ್ಮು ಒಮ್ಮೆಲೆ ತುಂಬ ಬೆಳೆಯುತಿಹುದು।
ಯಾರ ಸಂಗದಿ ಮತಿಯು ರಾಮನನೆ ಮರೆಯುವದು
ಅವರ ಸಂಗದಲಾವ ರುಚಿಯು ಇಹುದು? || ೪೧ ||

ಮನವೆ ! ಅದಕಾಗೆಲ್ಲ ದುಃಸಂಗ ತೊರೆಯುತಿರು
ಆದರದಿ ಸಜ್ಜನರ ಸಂಗ ಪಿಡಿಯೈ |
ಜ್ಞಾನಿಗಳ ಸಂಗದಲಿ ದುಃಖವನು ಹಿಂಗಿಸುತ
ಸಾಧನವನುಳಿದು ಸತ್ಪಥವ ಪಡೆಯೈ || ೪೨ ||

೬. ನಾಮಸ್ಮರಣ

ಬೆಳಗಿನಲಿ ರಾಮನನೆ ಮನವೆ ನೆನೆಯುತ್ತಲಿರು !
ಮುಂದೆಯೂ ರಾಮನನೆಯುಸುರುತಿಹುದು |
ಒಳಿತು ಹಿರಿನಡೆಯನೀ ಒಡನೆ ನಡೆಸುತ ನೀನು
ಜನತೆಯಲಿ ಧನ್ಯತೆಯ ಪಡೆಯುತಿಹುದು || ೪೩ ||

ಮನವೆ ! ಸಿರಿರಾಮನನು ಅರಗಳಿಗೆ ಮರೆತರೂ
ತುಂಬಲರಿಯದ ಹಾನಿ ಜರಗುತಿಹುದು |
ಮನವೆ ! ರಾಮನ ತೊರೆದರತಿ ದುಃಖವೊದಗುವದು
ದಕ್ಷನಾಗಿಯೆ ಅವನ ಲಕ್ಷಿಸುವದು || ೪೪ ||

ರಾಮನಾಮವ ಒಲವಿನಿಂ ನಿತ್ಯ ನುಡಿವವಗೆ
ಯಾವ ಬಾಧೆಯದೆಂದೂ ಕಾಡದಿಹುದು |
ನೇಮದಿಂದಲಸಿಕೆ–ಪ್ರಮಾದಗಳ ತೊರೆಯುತಲಿ
ಬೆಳಗಿನಲಿ ರಾಮನನು ನೆನೆಯುತಿಹುದು || ೪೫ ||

ಎಲ್ಲ ಸಾಧನಗಳಲಿ ನಾಮವೇ ಹಿರಿದಿಹುದು,
ತಿಳಿಯದಿರೆ ಶೋಧಿಸಿದನರಿವುದಯ್ಯ |
ಎಲ್ಲ ಸಂದೇಹಗಳ ಹೊಲ್ಲೆಂದು ಚೆಲ್ಲುತಲಿ
ಬೆಳಗಿನಲಿ ರಾಮನನು ನೆನೆವುದಯ್ಯ || ೪೬ ||

ಕಲಿಯುಗದಿ ಕರ್ಮ-ಧರ್ಮಗಳು ಭೋಗ-ತ್ಯಾಗ-
ಯೋಗಗಳು ಚೆನ್ನಾಗಿ ನಡೆಯದಿಹವು ।
ಸಲೆ ನಾಮವೊಂದನ್ನೆ ಸಂತತವು ನಂಬುತಿರು.
ಬೆಳಗಿನಲಿ ರಾಮನನು ನೆನೆಯುತಿಹುದು ॥ ೪೭ ॥

ಆರ ನಾಮದಿ ಹಿರಿಯ ದೋಷಗಳು ಅಳಿಯುವವು,
ಆರ ನಾಮದಿ ಪರಮಗತಿಯು ಬಹುದು ।
ಆರ ನಾಮದಿ ಪುಣ್ಯರಾಶಿಯದು ಬೆಳೆಯುವದು
ಬೆಳಗಿನಲಿ ರಾಮನನು ನೆನೆಯುತಿಹುದು ॥ ೪೮ ॥

ನಾಮ ನೆನೆಯದ ನರಗೆ ಮುಕುತಿಯೆತ್ತಣದಯ್ಯ ?
ಹಾಳು ಹಮ್ಮಿಂದೊಂದೆ ದುಃಖ ಬಹುದು ।
ರಾಮನನು ಮರೆತವಗೆ ಹೀನ ಮರಣವು ನಿತ್ಯ
ದೇವರಾಯನನದಕೆ ಕರೆಯುತಿಹುದು ॥ ೪೯ ॥

ರಾಮ ಬಾಯಲ್ಲಿರಿಸೆ ವಿಶ್ರಾಮ ನೀಡುವನು
ಆನಂದಸಾಗರದಿ ಕೇಲಿಸುವನು ।
ನಾಮವಿರಪಡೆಯಲ್ಲಿ ಶ್ರಮ-ಶೋಕ-ಸಂಶಯವು
ನಾಮವೇ ನಿಜಸುಖದ ಧಾಮವಿಹುದು ॥ ೫೦ ॥

ರಾಮನನು ನೆನೆವಂಗೆ ಕಾಮ ಬಾಧಿಸಲರಿಯ
ಅವನ ಧೈರ್ಯವ ರಾಮ ಅಳಿಸದಿಹನು ।
ರಾಮಭಕ್ತನು ಸರ್ವಶಕ್ತ, ಹನುಮನ ತೆರದಿ
ಕಾಮ-ಜಯದಿಂ ಧನ್ಯನಾಗುತಿಹನು ॥ ೫೧ ॥

ಬಲುಮೇಲು ಎಲೆ ಮನವೆ ! ಶ್ರೀರಾಮನಾ ನಾಮ,
ಬೆಲೆಯಿಲ್ಲದುದು, ಅಂದ, ಸುಲಭ, ಕಿರಿದು ।

ಬಲುಬೇಗ ಸುಡುತಿಹುದು ಭವದ ಬೇರುಗಳನ್ನು
ಮಾನವಗೆ ಅದುವೆ ಕೈವಲ್ಯವಿಹುದು || ೫೨ ||

ರಾಮನಾಮಕ್ಕೆ ಸಮವಾದ ನಾಮಗಳಿಲ್ಲ.
ದೈವಹತ ಮನುಜನಿದನರಿಯಲರಿಯ |
ರಾಮನಾಮದಿ ಶಿವನು ವಿಷದ ಬಾಧೆಯ ಕಳೆದ
ಮಿಕ್ಕ ಬಡಪಾಯಿಗಳ ಪಾಡದೇನು ? || ೫೩ ||

ಮನವೆ ! ಮತ್ಸರದಿಂದ ನಾಮ ತೊರೆಯದಿರಯ್ಯ
ಅತಿಯಾದರದಿಯದನು ಚಿಂತಿಸಯ್ಯ |
ಘನನಾಮವೇ ಎಲ್ಲ ಸಾಧನದ ಸಾರವೈ
ನಾಮಕ್ಕೆ ತುಲ್ಯಬಲವಾವುದಯ್ಯ || ೫೪ ||

೭. ಧನ್ಯ ಜೀವನ

ದೇವಕಾರ್ಯದಿ ನಿತ್ಯ ದೇಹವನು ಸವೆಸುವನು
ರಾಮನಾಮವ ನಿತ್ಯ ನುಡಿಯುತಿಹನು |
ಭಾವದಿ ಸ್ವಧರ್ಮದೊಳು ಆವ ತಾ ನಡೆಯುವನು
ಜಗದಿ ದೇವರ ದಾಸ ಧನ್ಯನಹನು || ೫೫ ||

ಆವ ನುಡಿದಂತೆಯೇ ನಿತ್ಯ ತಾ ನಡೆಯುತಿಹ
ಏಕನ ಅನೇಕನಲಿ ಕಾಣುತಿಹನು |
ಆವ ಭ್ರಮವಿಲ್ಲದಲೆ ಸಗುಣ-ದೇವನ ಭಜಿಪ
ಜಗದಿ ದೇವರ ದಾಸ ಧನ್ಯನಹನು || ೫೬ ||

ಕಣ್ಣು ಮನದಿಂದ ಶ್ರೀಹರಿಯನ್ನೆ ಕಾಣುತಿಹ
ಜ್ಞಾನಿ ಭಕ್ತನು ಎನಿಸಿಕೊಳ್ಳುತಿಹನು |

ಚಿನ್ನ ಸಗುಣವ ಮತ್ತು ಸಾಧನವ ಪ್ರೀತಿಸುವ
ಜಗದಿ ದೇವರ ದಾಸ ಧನ್ಯನಹನು || ೫೭ ||

ಮನಕೆ ದುರ್ವಾಸನೆಯು ಸೋಂಕ ತಗಲಿಸದಿರುವ
ಅಂತರದಿ ತುಂಬಿರುವ ಪ್ರೀತಿಯನ್ನು ।
ಘನಭಕ್ತಿಯಿಂ ದೇವದೇವನನು ಒಲಿಸಿರುವ
ಜಗದಿ ದೇವರ ದಾಸ ಧನ್ಯನಹನು || ೫೮ ||

ಕಾಲವನು ತತ್ವಚಿಂತನದಲ್ಲಿ ಕಳೆಯುತಿಹ
ದಂಭ-ವಾದಗಳಲ್ಲಿ ಸಿಲುಕದಿಹನು ।
ಮೂಲವನು ಕುರಿತು ಸುಖ-ಸಂವಾದ ನಡೆಸುತಿಹ
ಜಗದಿ ದೇವರ ದಾಸ ಧನ್ಯನಹನು || ೫೯ ||

೮. ಫಲಶ್ರುತಿ

ಮನದ ಬೋಧವ ಆದರದಿ ಕೇಳ್ವ ಸಾಧಕರ
ಮತಿಯ ಮಾಂದ್ಯವು ಬೇಗ ಅಳಿಯುತಿಹುದು ।
ಜ್ಞಾನ-ವೈರಾಗ್ಯದಾ ಬಲವಮಿತ ಬೆಳೆಯುವದು
ನಂಬಿದರೆ ಮುಕ್ತಿಯೂ ದೊರೆಯುತಿಹುದು || ೬೦ ||

ಓಂ

ಸುಧಾಬಿಂದುಗಳು

ನಮ್ಮ ಬೇರೆ ಗ್ರಂಥಗಳ

೧ Light of India Rs.
೨ ಬೆಳಕಿನ ಬಾಳು
೩ ಭಕ್ತಿಸುಮನಾಂಜಲಿ
೪ ಪ್ರಭುವಿನ ಪ್ರಭೆ
೫ ಬೋಧಸುಧೆ
೬ ಭಾರತದ ಶಾಂತಿದೂತರು
೭ ಪ್ರಾರ್ಥನೆಯ ಪ್ರಭಾವ
೮ ಶ್ರೀ ತುಕಾರಾಮರ ಸಂದೇಶ
೯ ಶ್ರೀ ಜ್ಞಾನೇಶ್ವರರ ಸಂದೇಶ
೧೦ ಶ್ರೀ ಸಂತವರರ ಸಂದೇಶ
೧೧ ಪ್ರಬಂಧ ಪ್ರಕಾಶ (ಕಿ. ಆವೃತ್ತಿ)
೧೨ ಪ್ರಬಂಧ ಪ್ರಕಾಶ (ಹಿ. ಆವೃತ್ತಿ)
೧೩ ಶ್ರೀ ಮನೋಬೋಧಸಾರ
೧೪ ಶ್ರೀ ಸರ್ವಜ್ಞಾಚಾ ಅಭಂಗ ಸಂದೇಶ (ಮರಾಠಿ)

..., ರಾಯರು
..., ಧಾರವಾಡ
ಪ್ರಕಾಶಕರು: ಶ್ರೀ. ದೇಶಪಾಂಡೆ ಮನೋಹರರಾಯರು